ಶ್ರೀ ಎಚ್. ಸಿದ್ದವೀರಪ್ಪನವರು.—ಅಪ್ಪರಲ್ಲಿ ಅವಶ್ಯಕತೆ ಬಂದರೆ ಮಾಡುತ್ತೇವೆ.

Mr. SPEAKER.—Question hour is over.

QUESTION FOR ANSWER ON THE DAY.

(Not taken up)

Utilisation of income from levy of Health Cess.

Q.—336. Sri B. HUTCHE GOWDA (Turuvekere).—

Will the Government be pleased to state:—

(*a*) the amount expected to be realised from health cess during this year;

(*b*) the object of levying this cess;

(*c*) whether any amount out of this is proposed to be allotted to District Boards;

(*d*) how they intend to utilise this amount; whether it is for expansion of health facilities?

A.—Sri T. CHANNIAH (Minister for Public Health and Local Self-Government).—

(*a*) About Rs. 1,00,000.

(*b*) To meet the increased cost of medicines, insecticides, etc., in Medical and Public Health Departments.

(*c*) No.

(*d*) Please see reply to (*b*) above.

Privilege Motion.

Request by a member to take up his Privilege Motion.

ಶ್ರೀ ಮುಲ್ಕಾ ಗೋವಿಂದ ರೆಡ್ಡಿಯವರು (ಚಿತ್ರದುರ್ಗ).—ನಾನು ನಿನ್ನೆಯದಿನ ಒಂದು ಪ್ರಿವಿಲೇಜ್ ಮೋಷನ್ ಕಳುಹಿಸಿದ್ದೆ. ಅದನ್ನು ಈ ಹೊತ್ತು ಸಭೆಯ ಮುಂದಿಡಲು ಇಚ್ಛಿಸುತ್ತೇನೆ.

Mr. SPEAKER.—It was understood that the adjournment motion and the privilege motion would be taken up for consideration of admissibility on the 26th, according to the desire of the Party Leader. I am still under that impression.

Sri Mulka GOVINDA REDDY.—I can understand an adjournment motion being taken up for consideration later. But the privilege motion must have precedence over all other business, and it should be taken up immediately.

Mr. SPEAKER.—It will have precedence over all other business on the 26th instant.

Sri Mulka GOVINDA REDDY.—There is no question of agreement with regard to the privilege motion, Sir, I made that point very clear that it should be taken up that day alone. But you were pleased to say that notice of the motion was not handed over two hours before the meeting, as required by Rules. So, I had to keep quiet yesterday. Now 24 hours have passed and the privilege motion must have precedence over every other business today and there is no discretionary power vested. Therefore I desire to move this motion.

Sri K. HANUMANTHAIYA (Leader of the House)—Where is discretionary power excluded?

Mr. SPEAKER.—Yesterday there was clear understanding between the Leader of the Opposition and myself on this question when Sri Mulka Govinda Reddy was also present.

Sri Mulka GOVINDA REDDY.—Yesterday I did press that the privilege motion must be taken up.

Mr. SPEAKER.—But you ultimately agreed to take it up on the 26th.

Sri Mulka GOVINDA REDDY.—It is not like that. This cannot be postponed. It must be discussed.

Mr. SPEAKER.—It was open to you yesterday to press it.

Sri Mulka GOVINDA REDDY.—I did.

Mr. SPEAKER.—You did not do it. This will be taken up on the 26th.

NON-OFFICIAL BUSINESS—RESOLUTIONS.

Mr. SPEAKER.—Now resolutions.

Sri Mulka GOVINDA REDDY (Chitaldrug).—There are some resolutions which are similar to each other. They may be grouped together and taken up to-day. The series are: Nos. 2, 25 and 56; again Nos. 4 and 26; Nos. 6, 7, 33 and 37; and Nos. 12, 17, 20, 24 and 42.

Mr. SPEAKER.—We will see to it after the first resolution is taken up and disposed of. I will have to consult the Leader of the House. The first resolution may be taken up now.

No. 1. Withdrawal of permission to tap toddy in dry taluks.

Sri V. MASIYAPPA (Hiriyur).—Mr. Speaker, Sir, I move the following resolution:

"That this Assembly is of the opinion that the recent order authorising the Deputy Commissioners to issue permission to tap toddy in the seven taluks which have gone dry be withdrawn in the interests of the poor depressed class people of these taluks as also the successful working of prohibition in the area."

ಸ್ವಾಮಿ, ಈ ನಿರ್ಣಯವನ್ನು ನಾನು ಸಭೆಯ ಮುಂದೆ ಮಂಡಿಸುತ್ತ, ಇದನ್ನು ಸ್ಥಿರೀಕರಿಸುವ ಬಗ್ಗೆ ಕೆಲವು ವಿಷಯಗಳನ್ನು ಪ್ರಸ್ತಾಪಮಾಡಲು ಬಯಸುತ್ತೇನೆ. ನಿನ್ನೆಯ ದಿವಸ ನಮ್ಮ ಮಾನ್ಯ ಮುಖ್ಯಮಂತ್ರಿಗಳವರು ಅಪ್ಪಣೆ ಕೊಡಿಸಿರುವ ಪ್ರಕಾರ, ಎಂದರೆ ಆಯವ್ಯಯದ ಅಂದಾಜಿನಮೇರೆ ಮಾಡಿರತಕ್ಕ ಭಾಷಣದಲ್ಲಿ ಅಡಕವಾಗಿರುವ ಒಂದು ಅಂಶವೇನೆಂದರೆ, ಈ ವರ್ಷ ಈ ಪಾನನಿರೋಧವನ್ನು ಆಚರಣೆಗೆ ತರತಕ್ಕ ವಿಚಾರದಲ್ಲಿ ಸರ್ಕಾರದವರು ಹಿಂದಿನಂತೆ ಇದನ್ನು ಹೇಗೆ ಆಚರಣೆಗೆ ತಂದಿದ್ದಾರೊ ಹಾಗೇ ಇದನ್ನು ಇನ್ನುಮುಂದಕ್ಕೂ ಪಾಲಿಸಿಕೊಂಡು ಹೋಗುವುದಾಗಿಯೂ, ಮುಂದಕ್ಕೆ ಈ ಪಾನನಿರೋಧ ನೀತಿಯನ್ನು ವಾಪಸ್ಸು ಪಡೆಯುವ ಅಭಿಪ್ರಾಯ ಸರ್ಕಾರಕ್ಕಿಲ್ಲವೆಂದೂ ತಿಳಿಸಲಾಗಿದೆ. ಇಷ್ಟೇ ಅಲ್ಲದೆ ಇನ್ನೊಂದು ವಿಷಯವೇನೆಂದರೆ ಪೊನ್ನೆ ಪ್ರಶ್ನೋತ್ತರಗಳು ನಡೆಯುತ್ತಿದ್ದಕಾಲದಲ್ಲಿ ಸರ್ಕಾರದಿಂದ ಬಂದ ಕೆಲವು ಜವಾಬುಗಳು ಬಹಳ ನಿರ್ಮರ್ಕವಾಗಿದ್ದುದರಿಂದ ಇವುಗಳೆಲ್ಲವೂ ಈಗ ನನ್ನ ಈ ಕೆಲಸವನ್ನು ಬಹಳಮಟ್ಟಿಗೆ ಕಡಮೆ ಮಾಡಿರುತ್ತವೆಂದು ನಾನು ಭಾವಿಸುತ್ತೇನೆ.

ಈ ನನ್ನ ನಿರ್ಣಯದ ಅಗತ್ಯವು ಎಷ್ಟರಮಟ್ಟಿಗಿರುತ್ತದೆಯೆಂಬುದನ್ನು ಪೊನ್ನೆ ಪ್ರಶ್ನೋತ್ತರಕಾಲದಲ್ಲಿ ಹಾಕಲ್ಪಟ್ಟ ಪ್ರಶ್ನೆಗಳೇ ಧೃಡಪಡಿಸುತ್ತವೆಯೆಂದು ನಾನು ತೋರಿಸಬೇಕಾಗಿದೆ.

ಈ ಪಾನನಿರೋಧವನ್ನು ಜಾರಿಗೆ ತಂದಿರತಕ್ಕದ್ದರ ಉದ್ದೇಶ ಜನರು ಆರೋಗ್ಯದಿಂದಿರಲೀ ಸುಖವಾಗಿ ಬಾಳಲಿ ಅವರ ಆರ್ಥಿಕ ಜೀವನ ನೆಮ್ಮದಿಯಿಂದ ಇರಲಿ ಎಂಬುದೇ ಆಗಿರುತ್ತದೆ. ಹೀಗೆ ಮಾಡಿದರೇ ಆ ಬಡಜನರ ಆರ್ಥಿಕ, ನೈತಿಕ ಮತ್ತು ಸಾಮಾಜಿಕ ಮಟ್ಟ ಒಂದು ಸುವ್ಯವಸ್ಥೆಯಲ್ಲಿರಲು ಸಾಧ್ಯವಾಗುತ್ತದೆಂಬ ದೃಷ್ಟಿಯಿಂದ ಈ ಪಾನನಿರೋಧವನ್ನು ಭಾರತಾದ್ಯಂತವೂ ಹಾಗೂ ಮೈಸೂರು ಸಂಸ್ಥಾನದಲ್ಲಿಯೂ, ಒಂದು ಮುಖ್ಯ ಅಸ್ತ್ರವನ್ನಾಗಿ, ದೇಶ ಸ್ವರಾಜ್ಯಕ್ಕಾಗಿ ಹೋರಾಟ ನಡೆಸುತ್ತಿದ್ದಾಗ ಉಪಯೋಗಿಸಿಕೊಂಡಿತ್ತು. ಆದಕಾರಣ, ಇಂಥ ಅಸ್ತ್ರವನ್ನು ಸ್ವರಾಜ್ಯ ಸಂಪಾದಿಸಿದ ನಂತರ ಮರೆತುಬಿಡುವುದು ಧರ್ಮವೂ ಅಲ್ಲ, ಸೂಕ್ತವೂ ಅಲ್ಲವೆಂಬ ಒಂದು ನ್ಯಾಯದೃಷ್ಟಿಯಿಂದ ಈ ಪಾನನಿರೋಧವನ್ನು ದೇಶಾದ್ಯಂತವೂ ಸಂಪೂರ್ಣವಾಗಿ ಜಾರಿಗೆ ತರಬೇಕೆಂಬ ಉದ್ದೇಶದಿಂದ ಭಾರತ ರಾಜ್ಯಾಂಗದಲ್ಲಿ ಕೂಡ ಒಂದು ವಿಧಿಯಲ್ಲಿ ಅಡಕ ಮಾಡಲಾಗಿದೆ.

ಆದರೆ ಕೆಲವುಕಡೆ ಜನರು ಇದು ಪ್ರಥಮತಃ ಜಾರಿಗೆ ತಂದ ಸ್ಥಳಗಳಲ್ಲಿ ಇದು ಹೇಗೆ ಕೆಲಸಮಾಡುತ್ತದೆಯೋ ಏನೋ ಎಂಬ ವಿಚಾರದಲ್ಲಿ ಸ್ವಲ್ಪ ಅನುಮಾನವನ್ನೂ ಮತ್ತು ಇದರ ಪರಿಣಾಮವಾಗಿ ಜನರು ಕದ್ದು ಮುಚ್ಚಿ ಮದ್ಯ ಸೇವನೆ ಮಾಡುವುದು ಹೆಚ್ಚಾಗುತ್ತಿದೆಯೆಂದು ಕೆಲಕೆಲವು ಅಭ್ಯಂತರಗಳನ್ನೂ ಸೂಚಿಸಿದರು. ಆದರೆ ಅಂಥ ಅಭ್ಯಂತರಗಳಿಗಾವುದಕ್ಕೂ ಅವಕಾಶವಿಲ್ಲವೆಂದು ನಾನು ಭಾವಿಸುತ್ತೇನೆ. ಒಂದಾವರ್ತಿ ನಾನು ಒಟ್ಟು ಜವಾಬ್ದಾರಿಯುತರಾದ ಅಧಿಕಾರಿಗಳೊಡನೆ ಈ ಸಂಬಂಧವಾಗಿ ಮಾತುಕತೆಗಳನ್ನಾಡುತ್ತಿದ್ದಾಗ್ಗೆ ಅವರು ಈ ಬಗ್ಗೆ ಬಹಳ ವಿರೋಧಾಭಿಪ್ರಾಯವುಳ್ಳವರಾಗಿ ತಿಳಿಸಿದ್ದುದು ನನಗೆ ಜ್ಞಾಪಕವಿದೆ. ಅವರ ವಾದವೇನೆಂದರೆ ಈ ಪದ್ಧತಿಯಿಂದ ಅಕ್ರಮರೀತಿಯಲ್ಲಿ ಮದ್ಯ ತಯಾರಿಕೆ ಹೆಚ್ಚುವುದಲ್ಲದೆ, ಇದರ ನಾಗಾಣಿಕೆಕೂಡ ಹೆಚ್ಚಾಗುತ್ತದೆಂದೂ, ಇದರಿಂದ ಜನರ ಆರೋಗ್ಯ ಕೆಡುತ್ತದೆಂದೂ, ತತ್ಪರಿಣಾಮವಾಗಿ ಇದರಿಂದ ಮುಂದೆ ಅನೇಕ ದುಷ್ಪರಿಣಾಮಗಳಾಗುತ್ತವೆಂದೂ ತಿಳಿಸಿದರು. ಮತ್ತೆ ಕೆಲವರು ಈ ಪಾನನಿರೋಧವನ್ನು ರದ್ದು ಪಡಿಸಿ ಸಂಸ್ಥಾನದ ವರಮಾನ ಹೆಚ್ಚಿಸಿಕೊಂಡು ಆಹಾರದ ಬಾಬಿನಲ್ಲಿರುವ ಹಣದ ಜೋತಾ ಭರ್ತಿ ಮಾಡಬಹುದೆಂದು ವಾದಮಾಡುತ್ತಿರುವುದು ನನಗೆ ತಿಳಿದುಬಂದಿದೆ. ಇದನ್ನು ನಿಲ್ಲಿಸಿಬಿಟ್ಟರೆ ಸಂಸ್ಥಾನಕ್ಕೆ ಇದರಿಂದ ಬರತಕ್ಕ ವರಮಾನ ಸಂಪೂರ್ಣವಾಗಿ ನಿಂತು ಹೋಗುವುದಲ್ಲದೆ, ಆಹಾರ ಪದಾರ್ಥಗಳ ಬಗ್ಗೆ ಕೊಡ ರಾಗುತ್ತಿದ್ದ ಸಬ್‌ಸಿಡಿಯೂ ಕೂಡ ನಿಲ್ಲಿಸಲ್ಪಟ್ಟಿರುವುದರಿಂದ ಸರ್ಕಾರಕ್ಕೆ ಬಹಳ ದ್ರವ್ಯ ನಷ್ಟವಾಗುತ್ತದೆಂಬ ವಾದವನ್ನೂ ಮಾಡುತ್ತಿರುವುದೂ ನನಗೆ ತಿಳಿದುಬಂದಿದೆ. ಆದರೆ ನಾವು ಈ ಪ್ರಶ್ನೆಯನ್ನು ಒಂದು ಧರ್ಮದೃಷ್ಟಿಯಿಂದ ಒಂದು ಮಾನವ ದೃಷ್ಟಿಯಿಂದ ವಿಚಾರಣೆ ಮಾಡಬೇಕಾಗಿದೆ. ಹಾಗೆ ಸರ್ಕಾರದ ಬೊಕ್ಕಸಕ್ಕೆ ಬರತಕ್ಕಂಥ ಒಂದು ಉತ್ಪತ್ತಿಗಾಗಿ, ಇಂಥ ದಲಿತ ವರ್ಗದವರನ್ನು, ಅನಕ್ಷರಸ್ಥರಾಗಿರುವಂಥ ಜನರನ್ನು, ಆರ್ಥಿಕ, ಸಾಮಾಜಿಕ ನೈತಿಕಮಟ್ಟದಲ್ಲೆಲ್ಲಾ ಕೇವಲ ಹಿಂದುಳಿದಿರತಕ್ಕಂಥವರನ್ನು ಹೀಗೆ ಶೋಷಣೆಮಾಡಿ, ಖಜಾನೆಯನ್ನು ಭರ್ತಿಮಾಡಬೇಕೆಂಬುದು ಸರಿಯಾದುದೇ! ಇದು ಯಾವ ನ್ಯಾಯ? ಇಂಥಾ ಅನ್ಯಾಯವನ್ನು ಖಂಡಿತ ಮಾಡಬಾರದು. ಇದು ಸರಿಯಾದದ್ದಲ್ಲವೆಂಬುದು ಪ್ರತಿಯೊಬ್ಬರಿಗೂ ಗೊತ್ತಿರತಕ್ಕ ವಿಚಾರ. ಈ ದಿವಸ ಹಾಗೆ ಪಾನನಿರೋಧವನ್ನು ಜಾರಿಗೆ ತಂದಿರತಕ್ಕ ಜಿಲ್ಲೆಗಳ ಪೈಕಿ ಯಾವ ಜಿಲ್ಲೆಯಲ್ಲೇ ಆಗಲಿ ಹರಿಜನರ, ಬೋವಿಗಳ ಅಥವಾ ಲಂಬಾಣಿಗರ ಬೀದಿಗೆ ಹೋಗಿ ನಾವು ನೋಡಿದರೆ, ಅಲ್ಲಿ ಈಗ ಈ ಕುಡಿತವು ನೂರಕ್ಕೆ ನೂರುಪಾಲು ನಿಂತುಹೋಗಿಲ್ಲವಾದರೂ ನೂರಕ್ಕೆ ಕೊಂಚತ್ತು ಭಾಗ ನಿಂತುಹೋಗಿರತಕ್ಕದ್ದು ಕಂಡುಬರುತ್ತದೆ. ಈಗಾಗಲೇ ಯಾವ ಯಾವ ಜನಾಂಗ ಈ ಶೇಂದಿ ಕುಡಿಯಬೇಕೆಂಬ ಚಪಲವನ್ನಿಟ್ಟುಕೊಂಡಿದ್ದವೋ ಅವುಗಳೆಲ್ಲವೂ, ಆ ಚಪಲವನ್ನು ಬಿಟ್ಟುಬಿಟ್ಟು

ತಮ್ಮ ನಿತ್ಯದಿನಚರಿ ಕೆಲಸಗಳಲ್ಲಿ ತೊಡಗಿ, ತಮ್ಮ ಆಯಾನ, ಮ್ಯೆ ಕೈನೋವುಗಳನ್ನು ಲೆಕ್ಕಿಸದೆ ಎಲ್ಲರಂತೆ ತಾವೂ ಕೆಲಸಮಾಡಿಕೊಂಡು, ದಿನ ಒಂದಕ್ಕೆ ಒಬ್ಬೊಬ್ಬ ಗಂಡಾಳು ರೂ. 1—4—0 ನಿಂದ ಹಿಡಿದು ರೂ. 1—8—0 ವರೆಗೂ, ಹೆಂಗನು ದಿನ ಒಂದಕ್ಕೆ 10 ಆಣೆಗಳ ಪ್ರಕಾರವೂ ಸಂಪಾದನೆಮಾಡಿಕೊಂಡು ಬಂದ ಕೂಲಿ ಹಣದಿಂದ ಬಹಳ ಸೌಖ್ಯವಾಗಿ ಜೀವನಮಾಡಿಕ್ಕೊಂದು ಬಹಳ ನೆಮ್ಮದಿಯಿಂದಿದ್ದಾರೆ. ಸರ್ಕಾರಿ ನೌಕರರೂ ಸಹ ಅಷ್ಟು ನೆಮ್ಮದಿಯಿಂದಿದ್ದಾರೆಂದು ಹೇಳುವುದಕ್ಕಾಗುವುದಿಲ್ಲ. ಹೀಗೆ ಈ ಕುಡಿತವೊಂದು ತಪ್ಪಿದ್ದರಿಂದ ಈ ದಿವಸ ಅವರು ತಿಂಗಳೊಂದಕ್ಕೆ 100–120 ರೂಪಾಯಿಗಳ ವರಮಾನ ಪಡೆಯುತ್ತಾ, ಸುಖದಿಂದ ಜೀವನಮಾಡಿಕೊಂಡಿದ್ದಾರೆ, ನೆಮ್ಮದಿಯಿಂದ ದಾಳುತ್ತಿದ್ದಾರೆ.

Sri R. ANANTARAMAN (Chamarajpet).—I rise to a point of order. How is it relevant to this subject? He is making a speech about prohibition.

Mr. SPEAKER—The wording of the resolution is : ..... the recent order authorising the Deputy Commissioners to issue permission to tap toddy in the seven taluks which have gone dry.....' The Hon'ble Member is not confining his remarks to that subject.

Sri V. MASIYAPPA.—I will come to that point. Just by way of introduction I am saying this.

ಏಳು ತಾಲ್ಲೂಕುಗಳಲ್ಲಿ ಮದ್ಯಪಾನನಿರೋಧವನ್ನು ಜಾರಿಗೆ ತಂದು ಅಲ್ಲಿ ಹೆಂಡವನ್ನು ಇಳಿಸಲು ಅವಕಾಶ ಕೊಟ್ಟಿರುವುದರಿಂದ ಪಾನನಿರೋಧಮಾಡಿರುವ 5 ಜಿಲ್ಲೆಗಳಲ್ಲಿ ಅದು ಯಶಸ್ವಿಯಾಗಿ ನಡೆದಿದೆಯೆ ಎಂಬ ವಿಚಾರವನ್ನು ಹೇಳುವಾಗ ಆ ರೀತಿಯಾಗಿ ಅವಕಾಶಕೊಟ್ಟದ್ದರಿಂದ ಮಹಾ ಅನರ್ಥವಾಗುತ್ತದೆ ಎಂಬುದನ್ನು ಮಾನ್ಯ ಸದಸ್ಯರಿಗೆ ತಿಳಿಸುವುದಕ್ಕಾಗಿ ಪೀಠಿಕೆ ರೂಪದಲ್ಲಿ ಹೇಳುತ್ತಿದ್ದೆ. ಈಗ ಮಾಡಿರುವುದು ಮುಂದೆ ಅನ್ನ ಇಟ್ಟು ಉಣ್ಣುವಾಡಬೇಡಿ ಎಂದು ಹೇಳಿದಂತಿದೆ. ಪಾನನಿರೋಧ ಮಾಡಿರುವ ಕಡೆ ಹೆಂಡವನ್ನಿಳಿಸಲು ಅವಕಾಶ ಕೊಟ್ಟರೆ ಕುಡಿಯುವವರನ್ನು ತಡೆಯುವುದು ಬಹಳ ಕಷ್ಟ. ಕುಡಿಯಬೇಕೆಂಬ ಚಟವಿರುವವರು ಕುಡಿಯುವುದಕ್ಕೆ ಅವಕಾಶವಿಲ್ಲದೆ ಅದನ್ನು ಬಿಟ್ಟಿದ್ದರೆ ಸೇಂದಿ ಇಳಿಸುವುದನ್ನು ಕಂಡ ಕೂಡಲೆ ಯಾವುದಾದರೂ ಒಂದು ವಿಧದಲ್ಲಿ ಅದನ್ನು ಪಡೆಯುವುದಕ್ಕೆ ಪ್ರಯತ್ನಪಡದೆ ಬಿಡುವುದಿಲ್ಲ. ಆಗಲೇ ಎಕ್ಸೈಜು ಇಲಾಖೆಗೆ ಸಂಬಂಧಪಟ್ಟ ನಟವರು ಎಷ್ಟು ಎಕ್ಸೈಜು ಕೇಸುಗಳು ನಡೆದಿವೆಯೆಂದು ಹೇಳಿದ್ದಾರೆ. ದೇಶದಲ್ಲಿ ಕಳ್ಳಬಟ್ಟಿ ಇಳಿಸುತ್ತಿದ್ದಾರೆಂದು ಗೊತ್ತಾಗಿವೆ. ಅಂದಮೇಲೆ ಕಳ್ಳತನದಿಂದ ಇಷ್ಟೆಲ್ಲಾ ನಡೆಯುತ್ತಿರುವಾಗ ಕಾಯಿದೆ ಪ್ರಕಾರ ನಿರ್ಬಂಧಿಸಿದ್ದರೂ ಇಳಿಸುವ ವನದಲ್ಲಿ ಪೋಲೀಸಿನವರೂ, ಎಕ್ಸೈಜು ಸಿಬ್ಬಂದಿಯೂ ಇರುವುದಿಲ್ಲ. ಅಲ್ಲಿಗೇ ಹೋಗಿ ಕುಡಿಯುವುದಕ್ಕೂ, ತರುವುದಕ್ಕೂ ಸಾಧ್ಯವಿಲ್ಲವೇ ಎಂಬುದನ್ನು ಯೋಚನೆಮಾಡಿ. ಪೋಲೀಸು ಮತ್ತು ಸ್ಪೆಷಲ್ ಸಿಬ್ಬಂದಿ ಇಟ್ಟು ಬೇಕಾದಷ್ಟು ದರ್ಪದಿಂದ ಹೆಂಡಿಗೆ ತರುವುದಕ್ಕೂ, ಅನ್ಯಾಯ ಅಥವಾ ಕಳ್ಳತನ ಯಾವ ವಿಧದಲ್ಲೂ ನಡೆಯದಿರುವಂತೆ ನೋಡಿಕೊಳ್ಳುವುದಕ್ಕೂ, ಮೊದಲಿಂದ ಇಳಿಸಿದ ಸೇಂದಿ ಸೀದಾ ಗೊತ್ತಾದ ಜಾಗಗಳಿಗೆ ಸೇರುವಂತೆ ನಿಗಾ ಇಡುವುದಕ್ಕೂ ವ್ಯವಸ್ಥೆ ಮಾಡಿದೆಯೆಂದು ಸರ್ಕಾರದವರು ಹೇಳಬಹುದು. ಆದರೆ ಬೇಲಿಯೇ ಎದ್ದು ಹೊಲ ಮೇದರೆ ಕಾಯುವವರಾರು ? ಅಕ್ರಮವು ನಡೆಯುವ ಕಡೆ ತಡೆಮಾಡಲು ಹೋಗುವವರೇ ಸೇವಿಸುವುದಾದರೆ ಅದನ್ನು ಯಾವ ರೀತಿ ಹತೋಟಿಮಾಡುವುದಕ್ಕೆ ಸಾಧ್ಯ ? ಇಷ್ಟು ಸಿಬ್ಬಂದಿ ಇದ್ದಾಗ್ಲೂ ಕೂಡ ಈಗ ನೂರಾರು ಕೇಸುಗಳು ಬರುತ್ತಿರುವುದು ತಮಗೆ ಗೊತ್ತೇ ಇದೆ. ಹೀಗಿರುವಾಗ ಹತೋಟಿಗೆ ತರುವುದಕ್ಕೆ ಸಾಧ್ಯವೇ ಎಂಬುದು ದೀರ್ಘವಾಗಿ ಯೋಚನೆಮಾಡಬೇಕಾದ ವಿಚಾರ. ಇನ್ನೊಂದು ಅಂಶ, ಒಂದು ವೇಳೆ ನಿಜವಾಗಿಯೂ ಪೋಲೀಸ್ ಸಬ್ ಇನ್‌ಸ್ಪೆಕ್ಟರೋ ಅಥವಾ ದಫೇದಾರರೋ ಕೇಸು ಹಾಕಬಹುದು. ಆದರೆ ಕೋರ್ಟಿಗೆ ಹೋದಾಗ ಪೋಲೀಸಿನವರು ಯಾವತೀಕ್ಷ್ಣವಾದ ಉದ್ದೇಶದಿಂದ ಆ ಕೇಸನ್ನು ತಂದಿದ್ದಾರೆಂಬುದನ್ನು ವಿಚಾರ ಮಾಡದೆ ಬಹಳ ಲಘುವಾಗಿ ಪರಿಗಣಿಸಿ 15 ರಿಂದ 100ರೂಪಾಯಿಗಳೊಳಗೆ ಜುರ್ಮಾನೆ ಹಾಕುವುದಾಗಿ ಪತ್ರಿಕೆಗಳ ಮೂಲಕ ತಿಳಿದು ಬಂದಿದೆ. ಎಕ್ಸೈಜು ಕೇಸುಗಳಲ್ಲಿ ಶಿಕ್ಷೆಯಾಗಿರುವ ಸಂದರ್ಭಗಳು ಶೇಕಡ ಒಂದು ಕೂಡ ಇಲ್ಲ ಎಂಬ ಶಂಕೆಯಿದೆ. ಕಾನೂನಿಗೇನೂ ಅಭಾವವಿಲ್ಲ ; ಆರು ತಿಂಗಳವರೆಗೆ ಶಿಕ್ಷೆ ಎರಡುಸಾವಿರದವರೆಗೆ ಜುರ್ಮಾನೆ ವಿಧಿಸಬಹುದೆಂದು ಕಾಣುತ್ತದೆ. ಆದಾಗ್ಯೂ ಸಹ ಈ ಸಮಾಜಘಾತುಕವನ್ನು ಕೋರ್ಟ ನವರು ತೀಕ್ಷ್ಣವಾಗಿ ಪರಿಗಣಿಸದೆ ಬಹಳ ಲಘುವಾಗಿ ಕಂಡು ಅಲ್ಪವಾದ ಶಿಕ್ಷೆಯನ್ನು ವಿಧಿಸುತ್ತಿರುವುದು ಕಳ್ಳಬಟ್ಟಿ ಇಳಿಸುವುದು, ಕಾಣದಂತೆ ಕುಡಿಯುವುದು ಮುಂತಾದುವನ್ನು ಮಾಡುವವರಿಗೆ ಬೆಂಬಲ ಕೊಟ್ಟಹಾಗಾಗಿದೆ. ಮತ್ತು ಅಲ್ಪವಾದ ಜುರ್ಮಾನೆಯನ್ನು ಕೋರ್ಟಿನಿಂದ ಹೊರಗೆ ಬರುವುದರೊಳಗೇ ಕೊಡುವುದಕ್ಕೂ ಅನೇಕರು ಸಿದ್ಧವಾಗಿರುತ್ತಾರೆ. ಇದರಿಂದ ಒಂದಕ್ಕೆ ಎರಡರಷ್ಟು ಆದಾಯ ವಿರುವುದರಿಂದ ಕಳ್ಳ ವ್ಯಾಪಾರ ಮಾಡುವವರೂ ಹಿಂಜರಿಯುವುದಿಲ್ಲ. ಪೋಲೀಸು ಅಥವಾ ಎಕ್ಸೈಜು ಸಿಬ್ಬಂದಿಯಿಂದ ಏನು ಅನ್ಯಾಯ ನಡೆಯಬಹುದೆಂಬುದನ್ನು ವಿಚಾರಮಾಡಿ ಆ ರೀತಿನಡೆಯದಂತೆ ನೋಡಿಕೊಳ್ಳುವುದೂ ಮತ್ತು ಶಿಕ್ಷೆಯನ್ನು ಹೆಚ್ಚಾಗಿ ಕೊಡುವಂತೆ ಮಾಡುವುದೂ ಮಾದರಿ ಸರ್ಕಾರದ ಕರ್ತವ್ಯ. ಆ ರೀತಿ ನೋಡಿಕೊಳ್ಳುತ್ತಾರೆಂಬ ಭರವಸೆಯಿರಬೇಕು. ಈಗ ಮೂರು ವರ್ಷಗಳ ಅನುಭವದಿಂದ ಮದ್ಯಪಾನ ಜಾರಿಗೆ ಬಂದಾಗಿನಿಂದ ಕಂಡು ಬಂದ ನ್ಯೂನತೆಗಳನ್ನು ಹೇಳುತ್ತಿದ್ದೇನೆ. 1948 ಮತ್ತು 1949ನೆಯ ಇಸವಿಯಲ್ಲಿ ತಾಲ್ಲೂಕು ಮತ್ತು ಜಿಲ್ಲಾ ಪಾನನಿರೋಧ ಸಮಿತಿಗಳನ್ನು ಸರ್ಕಾರದವರು ರಚಿಸಿದ್ದಾರೆ. ಜವಾಬ್ದಾರಿಯುಳ್ಳ ಆ ಸಮಿತಿಯಲ್ಲಿ ನಾನು ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದೇನೆ. ಆ ಸಮಿತಿಯವರ ಸಲಹೆಯಂತೆ ಪಾನ ನಿರೋಧವನ್ನು ಸೂಕ್ತವಾಗಿ ಜಾರಿಗೆ ತರಬೇಕೆಂಬುದೇ ಸರ್ಕಾರದ ಸದುದ್ದೇಶ. ಆದರೆ ಆ ವಿಧವಾದ ಸಮಿತಿಗಳು ಸರ್ಕಾರಕ್ಕೆ ಮಾಡಿರುವ ಸಲಹೆಗಳಿಗೆ ಸರ್ಕಾರ ಕಿಂಚಿತ್ತಾದರೂ ಗಮನ ಕೊಡದಿರುವುದು ಬಹಳ ಶೋಚನೀಯವಾದುದು. ಆ ಸಮಿತಿಯವರು ಕೋರ್ಟಿನವರು ಅನುಸರಿಸುವ ನೀತಿ ಸರಿಯಲ್ಲ, ಅದರಿಂದ ಬಹಳ ಕೊಂದರೆ, ಇದನ್ನು ಆರೋಚಿಸಿ ಸ್ವಲ್ಪ ಜಾಸ್ತಿಯಾಗಿ ಶಿಕ್ಷೆಯನ್ನು ವಿಧಿಸಬೇಕು ಎಂದು ಶಿಫಾರ್ಸು ಮಾಡಿದ್ದರೂ ಈ ಮೂರು ವರ್ಷಗಳಿಂದ ಸರ್ಕಾರದವರು ನರಿಯಾದ ಕಾರ್ಯಕ್ರಮ ಕೈಗೊಂ

(SRI V. MASIYAPPA).

ದಿಲ್ಲ. ಈಗ ನಿರೋಧ ಮಾಡಿರುವ ಕಡೆ ಸೇಂದಿ ಇಳಿಸಿ ಬೇಕಾದ ಕಡೆಗೆ ತರಿಸಿಕೊಳ್ಳುವುದಕ್ಕೆ ಏರ್ಪಾಡುಮಾಡಿರುವಂತೆ, ಹಾಗೆ ಇಳಿಸಿದ ಮದ್ಯ ಬೇಕಾದ ಸ್ಥಳಕ್ಕೆ ನೇರವಾಗಿ ಹೋಗಿ ಹಂಚಿಕೆಯಾಗುತ್ತಾ ಇದೆಯೆ ಎಂಬುದನ್ನು ನಂಬುವುದು ಬಹಳ ಕಷ್ಟ ಎಂದು ಹೇಳಬೇಕಾಗುತ್ತದೆ. ಈಗ ಹರಿಯೂರಿನಲ್ಲಿ ಇಳಿಸಿ ಬೆಂಗಳೂರಿಗೆ ಸಾಗಿಸಬೇಕು. ಹರಿಯೂರು ಮನದಲ್ಲಿ ಬಹಳ ಕಳ್ಳತನ ನಡೆಯುತ್ತದೆ ಅಲ್ಲಿಂದ ತುಮಕೂರು ಹಾದು ಬೆಂಗಳೂರಿಗೆ ಬರುವಾಗ ನಡುವೆ ನೂರಾರುಕಡೆ ಹಂಚಿಕೆಯಾಗುತ್ತದೆ. ರಸ್ತೆಮಗ್ಗುಲಲ್ಲಿ ಸಣ್ಣ ಸಣ್ಣ ಅಂಗಡಿಗಳನ್ನಿಟ್ಟು ಸೇಂದಿ ಹಂಚಿಕೆಯಾಗುತ್ತಿದೆ. ಹೀಗಾಗುವುದರಿಂದ ಬೆಂಗಳೂರು ಜಿಲ್ಲೆಯ ಜೊತೆಗೆ ತುಮಕೂರು ಮತ್ತು ಚಿತ್ರದುರ್ಗ ಜಿಲ್ಲೆಗಳೂ ಮೆಟ್ ಪರಿಯಾಕ್ಕೆ ಸೇರಿದ ಹಾಗಾಗುತ್ತದೆ. ಆದ್ದರಿಂದ ಈಗಲಾದರೂ ಎಲ್ಲಿ ಸೇಂದಿ ಸಾಕಷ್ಟು ಸಿಕ್ಕದೆ ಹೊರಗಿನಿಂದ ತರಿಸಿಕೊಳ್ಳಬೇಕಾಗುತ್ತದೋ ಅಲ್ಲಿ ಪಾನನಿರೋಧ ಮಾಡಿರುವ ಪ್ರದೇಶದಿಂದ ಇಳಿಸಿ ತರಿಸಿಕೊಳ್ಳಬೇಕಾದ ಸಂದರ್ಭದಲ್ಲಿ ಬೇಕಾದ ಸ್ಥಳಕ್ಕೆ ಕೇವಲ ಹತ್ತಿರದಲ್ಲಿ ಸಿಕ್ಕುವ ಜಾಗದಿಂದ ಮಾತ್ರ ಸರಬರಾಯಿ ಮಾಡಿಕೊಳ್ಳುವ ಏರ್ಪಾಡುಮಾಡಿಕೊಳ್ಳಬೇಕು. ದೂರ ಪ್ರದೇಶದಿಂದ ತರಲು ಅವಕಾಶ ಕೊಡಬಾರದು ಎಂದು ಪ್ರಾರ್ಥನೆ ಮಾಡುತ್ತೇನೆ. ಗೋರಿಬಿದನೂರು ಬೆಂಗಳೂರಿಗೆ ಸಮೀಪವಾಗಿದೆ; ಅಲ್ಲಿ ಬೇಕಾದಷ್ಟು ಮರಗಳಿವೆ. ಅಂಥ ಕಡೆಯಿಂದ ತರಲು ಅವಕಾಶಕೊಡಿ, ಹಾಗೆ ಮಾಡತಿದ್ದರೆ ಕಂಟ್ರಾಕ್ಟರನ್ನು ಅಥವಾ ಬೇರೆಯವರನ್ನು ಅನುಕೂಲ ಪಡಿಸಿದ ಹಾಗಾಗುತ್ತದೆಯೇ ವಿನಾ ಹಿಂದುಳಿದ ಜನಾಂಗಕ್ಕೆ ಸಹಾಯ ಮಾಡಿದಂತಾಗುವುದಿಲ್ಲ. ಪಾನನಿರೋಧ ಜಾರಿಯಲ್ಲಿರುವ ಕಡೆ ಪಾನವ್ಯಸನವಿರುವ ವರ್ಗದವರ ಮತ್ತು ಹಿಂದುಳಿದ ಪಂಗಡಗಳ ಹಿತಕ್ಕೆ ಧಕ್ಕೆ ತರಬಾರದು. ಅವರ ಹಿತ ಚಿಂತನೆಯಿಂದ ಪಾನನಿರೋಧವನ್ನು ಜಾರಿಗೆ ತರಲಾಗಿದೆ ಯೆಂಬುದನ್ನು ಗಮನದಲ್ಲಿಡಬೇಕು.

1-30 P. M.

ಪಾನನಿರೋಧ ಜಾರಿಗೆ ಬಂದಾಗಿನಿಂದ ನಿಮಗೆ ಕೂಲಿಯವರು ಸರಿಯಾಗಿ ಸಿಕ್ಕುತ್ತಾ ಇಲ್ಲ. ಏಕೆಂದರೆ ಅವರಿಗೆ ಬರತಕ್ಕ ಆದಾಯ ಅವರಿಗೆ ಸರಿಹೋಗುತ್ತದೆ. ತಾವು ಕೊಡತಕ್ಕ ಡಿಪ್ರೆಸ್ಡ್ ಕ್ಲಾಸ್ ಗ್ರಾಂಟ್ ನಿಂದ ಅವರು ಮನೆ ಮಠ ಕಟ್ಟಿಕೊಳ್ಳುತ್ತಾರೆ. ಆದ್ದರಿಂದ ಕೂಲಿಯವರು ಸಿಕ್ಕುವುದು ಅಭಾವವಾಗಿದೆ. ಆದರೂ ಪರವಾಗಿಲ್ಲ, ಅವರು ಕುಡಿಯುವುದನ್ನು ಬಿಟ್ಟು ಹಣವುಳಿಸಿಕೊಳ್ಳಲಿ ಎಂಬುದೇ ನಮ್ಮ ಆಶೆ. ಅದಕ್ಕೆ ವ್ಯತಿರಿಕ್ತವಾಗಿ ಹಣ ಖರ್ಚುಮಾಡಿಕೊಳ್ಳುವುದಕ್ಕೆ ತಾವು ಬೆಂಬಲಕೊಟ್ಟಂತಾಗುತ್ತದೆ. ಆದರಿಂದ ನಾನು ವಿನಮ್ರದಿಂದ ಪ್ರಾರ್ಥಿಸತಕ್ಕದ್ದೇನೆಂದರೆ, ಖಂಡಿತವಾಗಿಯೂ ತಾವು ಇದಕ್ಕೆ ಬೆಂಬಲಕೊಡಬೇಕು. ಬಹಳ ಅನ್ಯಾಯವಾಗುತ್ತದೆ. ಈ ಆಜ್ಞೆಯನ್ನು ಜಾರಿಗೆಕೊಡುವುದನ್ನು ನಿಲ್ಲಿಸಿ. ಈಗಾಗಲೇ ಅಲ್ಲಲ್ಲಿ ವನಗಳಲ್ಲಿ ಮರಕಟ್ಟಲು ಸಾಮಾನು ಸಂಗ್ರಹಿಸಿಕೊಳ್ಳುತ್ತಾ ಇದ್ದಾರೆ. ಹೆಂಡವನ್ನು ಇಳಿಸುವುದಕ್ಕೆ ವ್ಯಾಪಾರ ಮಾಡುವುದಕ್ಕೆ ಮುಂಚೆಯೇ ತಾವು ಒಂದು ಆಜ್ಞೆಮಾಡಿ ಇದನ್ನು ನಿಲ್ಲಿಸಿದ್ದೇವೆ ಎಂದು ಸ್ಪೇಷಲ್ ಆರ್ಡರ್ ದಯಪಾಲಿಸಿದ್ದೇ ಆದರೆ ಹಿಂದುಳಿದ ಜನಾಂಗಕ್ಕೆ ಬಹಳ ಅನುಕೂಲ ಮಾಡಿಕೊಟ್ಟಹಾಗಾಗುತ್ತದೆ. ಆದ್ದರಿಂದ ದಯವಿಟ್ಟು ಈ ವಿಧವಾದ ಆಜ್ಞೆಯನ್ನು ಕೊಡಬೇಕೆಂದು ಪ್ರಾರ್ಥಿಸುತ್ತೇನೆ.

Mr. SPEAKER.—Resolution moved—

"That this Assembly is of the opinion that the recent order authorising the Deputy Commissioners to issue permission to tap toddy in the seven taluks which have gone dry be withdrawn in the interests of the poor depressed class people of those taluks as also the successful working of prohibition in the area."

I would also wish to draw the attention of the Hon'ble Members of this Assembly to Rule 113 of the Rules of Procedure and Conduct of Business of this House which reads as follows

"No speech on a resolution, except with the permission of the Speaker, shall exceed fifteen minutes in duration

Provided that the mover of a resolution when moving the same and the Minister concerned when speaking for the first time, may speak for thirty minutes or for such longer time as the Speaker may permit."

So no speech should exceed fifteen minutes.

ಶ್ರೀ ಜಿ ದುಗ್ಗಪ್ಪನವರು. (ಹೊಳಲ್ಕೆರೆ ಅನುಸೂಚಿತ ಜಾತಿಗಳು).—ಸ್ವಾಮಿ, ಈಗತಾನೆ ನನ್ನ ಸ್ನೇಹಿತರು ಮಂಡಿಸಿದ ಈ ಠರಾವನ್ನು ಸ್ವಾಗತಿಸುತ್ತಾ ಇದನ್ನು ನಾನು ಅನುಮೋದಿಸುತ್ತೇನೆ. ನನ್ನ ಸ್ನೇಹಿತರು ಅವರ ಭಾಷಣದಲ್ಲಿ ಸರ್ಕಾರದವರು ಈ ಆಜ್ಞೆಯನ್ನು ಜಾರಿಗೆ ಕೊಟ್ಟಲ್ಲಿ ಅದರಿಂದ ಜನರ ಮೇಲೆ ಆಗತಕ್ಕ ದುಷ್ ಪರಿಣಾಮ ಏನು ಎಂಬುದನ್ನು ವಿಸ್ತಾರವಾಗಿ ತಿಳಿಸಿದ್ದಾರೆ. ಚಿತ್ರದುರ್ಗ ಜಿಲ್ಲೆಯ ಹರಿಯೂರು ತಾಲ್ಲೂಕು ಒಂದರಲ್ಲೇ ಮರಗಳನ್ನು ಕಟ್ಟುವ ಬಗ್ಗೆ ಸರ್ಕಾರದವರು ಅಪ್ಪಣೆಕೊಟ್ಟಿದ್ದಾರೆ ಎಂಬ ಒಂದು ವದಂತಿ ತಿಳಿದ ಕೂಡಲೇ ಅದರ ದುಷ್ ಪರಿಣಾಮವಾಗಿ ಹೊಳಲ್ಕೆರೆ ತಾಲ್ಲೂಕಿನಲ್ಲಿ ಕಳ್ಳತನದಿಂದ ಮರಗಳನ್ನು ಕಟ್ಟುವುದಕ್ಕೆ ಪ್ರಾರಂಭವಾಗಿದೆ. ಹೀಗೆ ಕಳ್ಳತನದಿಂದ ಮರಗಳನ್ನು ಕಟ್ಟಿ ಒಂದು ಶೀಸೆಗೆ ಎಂಟುಆಣೆಯಂತೆ ಹೆಂಡವನ್ನು ಪೂರೈಸತಕ್ಕ ಕೆಲವು ರಾಜುವಾತುಗಳು ಬಂದಿವೆ. ಮತ್ತು ಅಂಥ ಅಪರಾಧಿಗಳನ್ನು ಕೋರ್ಟಿನ ಮುಂದೆ ಎಳೆದು ಸರಿಯಾದ ಶಿಕ್ಷೆ ಕೊಡಲಾಗಿದೆ. ಅದಕ್ಕೆಕಾರಣ ಇಷ್ಟೆ. ನಮ್ಮ ತಾಲ್ಲೂಕಿನಲ್ಲಿರತಕ್ಕ ಹಳ್ಳಿಗಳಲ್ಲಿ ಪುನಃ ಮರಗಳನ್ನು ಕಟ್ಟತಕ್ಕದ್ದು ಜಾರಿಗೆ ಬಂದಿದೆ. ಅದೇ ರೀತಿ ಅವರ ತಾಲ್ಲೂಕಿಗೂ ಬರಬಹುದು ಎಂದು ಅದಷ್ಟು ಬೇಗ ಮರಗಳನ್ನು ಕಟ್ಟಬೇಕೆಂಬ ಭಾವನೆ ಎಲ್ಲರಲ್ಲೂ ಹುಟ್ಟುತ್ತದೆ. ಆ ರೀತಿ ಹುಟ್ಟಿ ಕಳ್ಳತನದಿಂದ ಮರಕಟ್ಟುವುದು ಪ್ರಾರಂಭವಾಗುತ್ತದೆ. ಇದೆಲ್ಲಕ್ಕೂ ಮೂಲ ಕಾರಣ ದೂರಾಲೋಚನೆಯಿಲ್ಲದೆ ಇಂಥಾ ಆಜ್ಞೆಗಳನ್ನು ಜಾರಿಮಾಡುವುದರಿಂದ. ಎಂಬುದನ್ನು ಸರ್ಕಾರದವರ

ಗಮನಕ್ಕೆ ತರುತ್ತೇನೆ. ಯಾವ ನಮುದ್ದೇಶದಿಂದ ನಾವು ಸಂಸ್ಥಾನದಲ್ಲಿ ಪಾನ ನಿರೋಧವನ್ನು ತಂದಿದ್ದೇವೆಯೋ ಅದನ್ನು ಎಷ್ಟೇ ಕಷ್ಟವಾದರೂ ಚಿಂತೆಯಿಲ್ಲ ನಡೆಸಿಕೊಂಡು ಬರತಕ್ಕದ್ದು ನಮ್ಮ ಧ್ಯೇಯವಾಗಿರಬೇಕು. ಒಂದು ವೇಳೆ ಜಾರಿಯಲ್ಲಿಲ್ಲದೆ ಇರತಕ್ಕ ಪ್ರದೇಶದಲ್ಲಿ ಮರಗಳನ್ನು ಕಟ್ಟತಕ್ಕದ್ದನ್ನು ಹೆಚ್ಚು ಮಾಡತಕ್ಕ ಆವಶ್ಯಕತೆಯಿದೆ ಎಂದು ಹೇಳೋಣ. ಅಂಥ ಸಂದರ್ಭದಲ್ಲಿ ಆ ಸ್ಥಳಕ್ಕೆ ಹತ್ತಿರದಲ್ಲಿರತಕ್ಕ ಪ್ರದೇಶಗಳಿಗೆ ಮಾತ್ರ ಅವಕಾಶ ಕೊಡಬೇಕೇ ವಿನಾ ನೂರಾರು ಮೈಲಿ ದೂರದ ತಕ್ಕ ಸ್ಥಳಗಳಿಗೆ ಮರ ಕಟ್ಟಲಿಕ್ಕೆ ಅವಕಾಶ ಕೊಡಕೂಡದು. ಕೊಟ್ಟಲ್ಲಿ ಅದರಿಂದ ಒಂದೆ ಅಂಶ ವ್ಯಕ್ತವಾಗುತ್ತದೆ. ಅದೇನೆಂದರೆ ಆ ಮರಗಳನ್ನು ಕಟ್ಟತಕ್ಕಶೀಂದಿ ಕಂಟ್ರಾಕ್ಟರುಗಳನ್ನು ಸರ್ಕಾರದವರು ಪುನರಾಯಿಸುತ್ತಾರೆ ಎಂದು ಭಾವನೆ ಬರುತ್ತದೆ. ನೂರಾರು ಮೈಲಿಯಿಂದ ಬೆಂಗಳೂರು ನಗರಕ್ಕೆ ಸಾಗಿಸುವಾಗ ದಾರಿಯಲ್ಲಿ ಅನೇಕ ಕಡೆ ಶೀಂದಿಯನ್ನು ಕಳ್ಳತನದಿಂದ ಮಾರುವುದಕ್ಕೆ ಅವಕಾಶವಾಗುತ್ತದೆ. ಈ ರೀತಿ ಅಪ್ರತ್ಯಕ್ಷವಾಗಿ ಯಾವ ಒಂದು ತತ್ವವನ್ನು ವಿರೋಧಿಸಿದ್ದೆವೋ ಆ ತತ್ವವನ್ನು ಪ್ರೋತ್ಸಾಹಿಸಿದ ಹಾಗಾಗುತ್ತದೆಯಲ್ಲವೇ ಎಂದು ಸರ್ಕಾರದವರನ್ನು ಕೇಳುತ್ತೇನೆ. ಇದರ ಕೆಟ್ಟ ಪರಿಣಾಮವನ್ನು ನಾನು ಹೆಚ್ಚು ಹೇಳುವಿಸದೆ ಸರ್ಕಾರದವರಲ್ಲಿ ಒಂದು ವಿಷಯ ಮನವಿ ಮಾಡಿಕೊಳ್ಳುತ್ತೇನೆ ಏನೆಂದರೆ : ಅಂಥಾ ಒಂದು ಅವಶ್ಯಕತೆ ಸರ್ಕಾರದವರಿಗೆ ಕಂಡು ಬಂದಲ್ಲಿ ಪಾನ ನಿರೋಧ ಜಾರಿಯಲ್ಲಿರತಕ್ಕಪ್ರದೇಶಗಳಿಗೆ ಮರ ಕಟ್ಟತಕ್ಕ ಅಪ್ಪಣೆ ಕೊಡಿತ ಕೊಡಕೂಡದು. ಒಂದು ವೇಳೆ ಕೊಟ್ಟಲ್ಲಿ ಪಾನನಿರೋಧ ಇಲ್ಲದೇ ಇರುವ ಕಡೆ ಅದಕ್ಕೆ ಹತ್ತಿರ ಇರತಕ್ಕ ಪ್ರದೇಶಗಳಿಗೆ ಮಾತ್ರ ಕೊಡಿ. ಏಕೆಂದರೆ ದೂರ ಪ್ರದೇಶಗಳಿಗೆ ಕೊಟ್ಟಲ್ಲಿ ಅಲ್ಲಿನ ಜನಗಳು ಕುಡುಕರಾಗುತ್ತಾರೆ. ಪಾನ ನಿರೋಧ ಇದ್ದರೂ ಕಳ್ಳತನದಿಂದ ಕುಡಿಯಬಹುದು. ಆದ್ದರಿಂದ ಈ ಒಂದು ತತ್ವವನ್ನು ನೆನಪಿನಲ್ಲಿಟ್ಟುಕೊಂಡು ಘನ ಸರ್ಕಾರದವರು ಇಂಥಾ ಅಜ್ಜಿ ಹೊರಡಿಸುವಾಗ ದೂರಾಲೋಚನೆಯಿಂದ ಹೊರಡಿಸಬೇಕೆಂದು ಹೇಳಿ ಈಗ ಮಂಡಿಸಿರುವ ಈ ಠರಾವನ್ನು ತುಂಬಾ ಸಂತೋಷದಿಂದ ಅನುಮೋದಿಸುತ್ತೇನೆ.

ಶ್ರೀ ಭೆ. ಹುಚ್ಚೇಗೌಡರು (ತುರುವೇಕೆರೆ).—ಸ್ವಾಮಿ, ಈ ನಿರ್ಣಯವನ್ನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇನೆ ಮತ್ತು ಈ ನಿರ್ಣಯವನ್ನು ಮಂಡಿಸಿದ ಶ್ರೀಮಾನ್ ಮಸಿಯಪ್ಪನವರನ್ನು ಅಭಿನಂದಿಸುತ್ತೇನೆ. ಅಷ್ಟೇಅಲ್ಲದೆ ಇದಕ್ಕೆ ಅನುಮೋದನೆ ಕೊಟ್ಟ ಶ್ರೀಮಾನ್ ದುಗ್ಗಪ್ಪನವರನ್ನು ಸಹ ಅಭಿನಂದಿಸಬೇಕಾಗಿದೆ. ಮುಖ್ಯವಾದ ಒಂದು ಇಂಥ ನಿರ್ಣಯ ಅದರಲ್ಲೂ ದೊಡ್ಡ ಪಕ್ಷದವರ ಕಡೆಯವರಿಂದ ಬರುವುದು ಬಹಳ ಅಪರೂಪ. ಯಾವ ಧ್ಯೇಯದಿಂದ ಚುನಾವಣೆಗೆ ನಿಂತರೋ, ತಮ್ಮ ಚುನಾವಣೆ ಘೋಷಣೆ ಏನಿತ್ತೋ, ತಾವು ಹಿಂದೆ ಕಾಂಗ್ರೆಸ್‌ಪಕ್ಷದವರಾಗಿದ್ದು ಜೈಲಿಗೆಹೋಗಿ ಏಕೆ ತ್ಯಾಗ ಮಾಡಿದರೋ—ಈಚಲುಮರ ಕಡಿದು ಜೈಲಿಗೆ ಹೋಗಿದ್ದು ಉಂಟು—ತಮಗೆ ಯಾರಿಂದ ಉಪದೇಶವಾಯಿತೋ ಅಂಥಾ ಮಹಾತ್ಮರ ಹಿಂಬಾಲಕರಾಗಿದ್ದು ಯಾವ ಧ್ಯೇಯವನ್ನು ಹೇಳುತ್ತಾ ಇದ್ದಿರೋ ಅವೆಲ್ಲಕ್ಕೂ ಈಗ ವ್ಯತಿರಿಕ್ತವಾಗಿ ಮಾಡುತಾ, ಇರುವುದರಿಂದ ಹೇಳಬೇಕಾಗಿದೆ. ಅಂಥಾ ಒಂದು ಧ್ಯೇಯಸಾಧನೆಗೆ ಈಗ ತಮ್ಮಿಂದಲೇ ತಡೆಯುಂಟಾಗುತ್ತಾ ಇರುವುದರಿಂದ ಈ ನಿರ್ಣಯವನ್ನು ತಂದಿದ್ದಾರೆ. ಇದಕ್ಕೆ ನಾನು ಸಂತೋಷಪಡುತ್ತೇನೆ. ಸ್ವಾಮಿ, ಮುಖ್ಯವಾಗಿ ಈಗ ನಾವು ಮೈಸೂರುದೇಶದಲ್ಲಿ ಕುಡಿತವನ್ನು ನಿಲ್ಲಿಸಬೇಕು, ಪಾನ ನಿರೋಧವನ್ನು ಜಾರಿಗೆ ತರಬೇಕು ಎಂಬತತ್ವವನ್ನು ಸಂಪೂರ್ಣವಾಗಿ ಒಪ್ಪಿಕೊಂಡಿದ್ದೇವೆ ಆದರಂತೆ ೬ ದಿನ್ಸಿಕ್ಕಿನಲ್ಲಿ ಪಾನನಿರೋಧ ಆಚರಣೆಗೆ ಬಂದಿದೆ. ಹೋದ ವರ್ಷವೂಕೂಡ ಈ ತತ್ವವನ್ನು ಮುಂದುವರಿಸಿ ಬೇಲೂರು ಸಕಲೇಶಪುರಗಳಲ್ಲಿ ಜಾರಿಗೆ ತಂದೆವು. ಈ ವರ್ಷ ಆದೇನೇ ಇದ್ದರೂ ನಮ್ಮ ಮುಖ್ಯ ಮಂತ್ರಿಗಳೂ ಯಾವ ವಿಚಾರವನ್ನೂ ಹೇಳಲಿಲ್ಲ, ಮುಂದೆ ಹೇಳುತ್ತಾರೆಂದು ನಿರೀಕ್ಷಣೆ ಮಾಡುತ್ತೇನೆ. ಏಕೆಂದರೆ ಆ ತತ್ವವನ್ನು ಮುಂದುವರಿಸಬೇಕು—ಇಲ್ಲವೇ ಬಿಟ್ಟು ಬಿಡಬೇಕು—ಈ ಎರಡರಲ್ಲೊಂದು ಖಚಿತವಾಗಿ ಗೊತ್ತಾಗಬೇಕು. ಬಿಟ್ಟುಬಿಡುವುದಿಲ್ಲವೆಂದು ಹೇಳುವುದಾದರೆ, ಅದರ ಸೂಚನೆಯನ್ನು ಅಲ್ಪಸ್ವಲ್ಪವಾದರೂ ಕೊಡುವುದು ಅವರ ಕರ್ತವ್ಯ. ನೋಡೋಣ.

ಈ ನಿರ್ಣಯವನ್ನು ಸಭೆಯ ಮುಂದಿಡುತ್ತಾ ಶ್ರೀಮಾನ್ ಮಸಿಯಪ್ಪನವರು ಕೆಲವು ವಿಚಾರಗಳನ್ನು ಹೇಳಿದ್ದಾರೆ. ಈಗ ಪಾನನಿರೋಧ ಜಾರಿಗೆ ಬಂದು ನಾಲ್ಕು ವರ್ಷವಾಯಿತು. ಈ ನಾಲ್ಕು ವರ್ಷಗಳಿಂದಲೂ ತಮ್ಮ ಪೂರ್ಣ ಅನುಭವವನ್ನು ಸದಸ್ಯರು ಸಭೆಯ ಮುಂದಿಡುತ್ತಾ ಬಂದಿದ್ದಾರೆ. ಹೀಗೆ ಒಂದು ಕಡೆ ಕುಡಿತವಿರುವುದು, ಇನ್ನೊಂದು ಕಡೆ ಇಲ್ಲದಿರುವುದು ಸರಿಯಲ್ಲ. ಪಾನನಿರೋಧವನ್ನು ಕಾನೂನಿಂದಲೇ ನಿಲ್ಲಿಸಬೇಕೆಂಬುದನ್ನು ನಾನು ಹೇಳುತ್ತೇನೆ. ಇದೊಂದು ದುಷ್ಟಚಟ. ಎಷ್ಟು ಬುದ್ಧಿವಂತಿಕೆಯಿಂದ ಈ ಚಟವನ್ನು ಬಿಟ್ಟುಬಿಡಬೇಕೆಂದು ಪ್ರಯತ್ನಪಡಿದರೂ, ಅವರು ಓಡಾಡತಕ್ಕ ವಾತಾವರಣ, ಸಂದರ್ಭ ಸನ್ನಿವೇಶಗಳಿಂದ ಮನಸ್ಸು ಸೋತುಹೋಗಿ ಈ ಚಟದ ಬಲೆಗೆ ಬೀಳುತ್ತಾರೆ. ಅದರಲ್ಲೂ ಕುಡಿಯತಕ್ಕವರು ಶೇಕಡ 90 ಪಾಲು ಬಡವರೆ. ಆ ಬಡ ಜನರ ಉದ್ಧಾರಕ್ಕಾಗಿ ಈ ಸಭೆಯವರು ಹಿಂದೆ ಶಿಫಾರಸು ಮಾಡಿದರು, ಪಾನನಿರೋಧ ಜಾರಿಗೆ ತರಬೇಕು ಎಂದು. ಹೀಗಿರುವಲ್ಲಿ ಪಾನನಿರೋಧ ಜಾರಿ ಮಾಡಿರುವ ಪ್ರದೇಶದ ಪಕ್ಕದಲ್ಲೇ ಹೆಂಡ ಸಾರಾಯಿ ಸಿಕ್ಕಲಕ್ಕೆ ಒಂದು ಅವಕಾಶವಿದ್ದರೆ, ಕುಡಿತ ಯಾವ ರೀತಿ ತಪ್ಪಿಸುವುದಕ್ಕೆ ಸಾಧ್ಯ? ಅಷ್ಟು ಸುಲಭ ಸಾಧ್ಯವಾಗಿದ್ದರೆ, ಹಿಂದಿನಿಂದ ಇದನ್ನು ಬಡವರು ತಾವೇ ತಾವಾಗಿ ಬಿಟ್ಟುಬಿಡುವುದಕ್ಕೆ ಪ್ರಯತ್ನಪಡಬಹುದಾಗಿತ್ತು. ಆದರೆ ಮನುಷ್ಯನ ಈ ದುಷ್ಟಚಟ ಅಂಥಾದ್ದು; ಹಾಗೆ ಸಾಧ್ಯವಿಲ್ಲ. ಕಾನೂನಿನಿಂದಲೇ ಇದನ್ನು ನಿಲ್ಲಿಸಬೇಕು. ಆದರಂತೆ ಕೆಲವು ಪ್ರದೇಶಗಳಲ್ಲಿ ಕಾನೂನನ್ನು ಜಾರಿಗೆ ತಂದಿರಿ. ಆದರೆ, ಆ ಪ್ರದೇಶದಲ್ಲಿ ಹತ್ತಿರದಲ್ಲೇ ಎಲ್ಲಿರಿಗೇ ಅಂಗಡಿಗಳಿದ್ದರೆ ಏನಾಗುತ್ತದೆಂಬುದನ್ನು ಹೇಳಬೇಕಾಗಿಲ್ಲ. ಪಾನನಿರೋಧ ತಾಲೂಕುಗಳನ್ನಷ್ಟೆ ಮಾಡಿದ್ದರೆ, ಕುಡಿಯುವವರು ದಾಬಸುಪೇಟೆಯಲ್ಲಿ ಹೆಂಡಸಿಕ್ಕುವಹಾಗಿದ್ದರೆ ಅಲ್ಲಗೇ ಹೋಗಿ ಕುಡಿದೇ ಕುಡಿಯುತ್ತಾರೆ. ತುಮಕೂರಿನಲ್ಲಿ ಊರಮುಂದೆಯೇ ಹೆಂಡ ಇದ್ದರೆ, ಹೇಗೆ ಬಿಡುತ್ತಾರೆ! Staff ನವರೂ ಸಹ ಈ ಚಟದಿಂದ ತಪ್ಪಿಸಿಕೊಂಡಿದ್ದಾರೆಂದು ಹೇಳುವುದಕ್ಕಾಗುವುದಿಲ್ಲ. ಅವರೆಲ್ಲರೂ ನಿಸ್ಪ್ರಹರೆಂದು ಹೇಳುವುದಕ್ಕಾಗುವುದಿಲ್ಲ. ಆದ್ದರಿಂದಲೇ ಕುಡಿತ ಸಾರೋದ್ಧಾರವಾಗಿ ನಡೆಯುವುದಕ್ಕೆ ಅವಕಾಶವಾಗುತ್ತದೆ. ಯಾವಾಗ ಕುಡಿತ ನಿಲ್ಲಿಸಿದ ಕಡೆ ಹೆಂಡ ಇಳಿಸುವುದಕ್ಕೆ ಪ್ರಾರಂಭವಾಗುತ್ತದೆಯೋ, ಅಲ್ಲಿ ಕುಡಿತ ನಡೆಯುವುದೇ ಇಲ್ಲ ಎಂದು ಹೇಳಲು ಸಾಧ್ಯವಿಲ್ಲ. ಅದನ್ನು ಮುಖ್ಯವಾಗಿ ತಾವು ಗಮನಿಸಬೇಕು.

(ಶ್ರೀ ಬಿ. ಹುಚ್ಚೇಗೌಡರು).

ಇನ್ನೊಂದೇನೆಂದರೆ, ಈಗ ಪಾನನಿರೋಧ ನಮ್ಮ ಡಿಸ್ಟ್ರಿಕ್ಟ್‌ನಲ್ಲಿದೆ. ಇದರಿಂದಾಗಿ, ಮಾನ್ಯ ಸದಸ್ಯರು ಹೇಳಿದ ಹಾಗೆ, ಅಲ್ಲಿ ಕೂಲಯವರು ಸಿಕ್ಕುವುದೇ ಕಷ್ಟವಾಗಿದೆ. ಏಕೆಂದರೆ, ಎಲ್ಲಾ ಅರಸೀಕೆರೆ ಕಡೆಗೆ ಹೋಗಿದ್ದಾರೆ. ಏಕೆ ? ಅಲ್ಲಿ ಕುಡಿತ ಇದೆ. ಎಲ್ಲ ಕುಡಿತ ಇರುತ್ತದೆಯೋ ಅಲ್ಲಿ ಅವರು ಹೋಗಿ ಸೇರುತ್ತಾರೆ. ಆದ್ದರಿಂದ ಈಗ ಪ್ರತಿಯೊಬ್ಬನೂ ಒಂದು ಅಂಶವನ್ನು ಗಣನೆಗೆ ತೆಗೆದುಕೊಳ್ಳಬೇಕು. ಕುಡಿತ ನಿಲ್ಲುವುದಕ್ಕೆ ಮುಂಚೆ ಆ ಜನರ ಸ್ಥಿತಿಗತಿ ಹೇಗಿತ್ತು, ಈಗ ಹೇಗಿದೆ ಎಂಬುದನ್ನು. ನಾನು ನೋಡಿದಮಟ್ಟಿಗೆ ಪಾನನಿರೋಧ ಸರಿಯಾಗಿ ಜಾರಿಯಲ್ಲರುವ ಕಡೆ ಶೇಕಡ 90 ಜನರು ಕುಡಿತದ ಚಟ ಬಿಟ್ಟು ಸಂಸಾರಗಳನ್ನು ಸುಖವಾಗಿ ನಡೆಸಿಕೊಂಡು ಹೋಗುತ್ತಿದ್ದಾರೆ. ಕೇವಲ 10 ಪಾಲು ಜನರು, ಹಣ ಸ್ವಲ್ಪ ಇರುವವರು ಡಾಬಸ್ ಪೇಟೆಗೆ, ಹಾಸನ ಡಿಸ್ಟ್ರಿಕ್ಟ್‌ಗೆ ಹೋಗುತ್ತಿದ್ದಾರೆ ಅಷ್ಟೆ. ಆದ್ದರಿಂದ ಇದನ್ನೂ ತಪ್ಪಿಸಬಹುದಾಗಿತ್ತು. ಅದಾಗದಿರುವುದಕ್ಕೆ ಸರ್ಕಾರದ ಇಂದಿನ ಪದ್ಧತಿಯೇ ಕಾರಣ. ಏನೆಂದರೆ, ಈಗ ಅರಸೀಕೆರೆಯಲ್ಲಿ ಪಾನನಿರೋಧವಿಲ್ಲ. ಆದರೆ ಅದರ ಸುತ್ತಲೂ ಮೂರು ಡಿಸ್ಟ್ರಿಕ್ಟ್‌ಗಳು Dry ಆಗಿರುವ ಪ್ರದೇಶಗಳಾಗಿವೆ : ಚಿತ್ರದುರ್ಗ, ಕಡೂರು, ಇತ್ತ್ರಕಡೆ ತುಮಕೂರು ಈ ಮೂರು ಡಿಸ್ಟ್ರಿಕ್ಟ್‌ನವರೂ ಇಲ್ಲಿಗೆ ಬಂದು ಕುಡಿಯುವುದಕ್ಕೆ ಇದು ಅನುಕೂಲವಾಯಿತು ! ಕಂಟ್ರಾಕ್ಟರುಗಳನ್ನು ಬದುಕಿಸುವುದಕ್ಕೆ ಇದನ್ನು ಮಾಡಿರುವುದು ಅಷ್ಟೆ. ರಕ್ಷಾಧೀಶರಾದ ಇಂಥಾ ಕಂಟ್ರಾಕ್ಟರುಗಳನ್ನು ಬದುಕಿಸುವುದಕ್ಕೆ ಹೀಗೆ ಮಾಡಿದರೆ ಹೇಗೆ ! ಕಣಕಟ್ಟೆ ಊರನ್ನು ನೋಡುವುದಾದರೆ, ಅದು ನಾಲ್ಕು ಡಿಸ್ಟ್ರಿಕ್ಟ್‌ಗಳ ಸರಹದ್ದಿನಲ್ಲಿದೆ. ಅದರ ಸುತ್ತಲು ಮೂರು ಡಿಸ್ಟ್ರಿಕ್ಟ್‌ಗಳು 'ಡ್ರೈ' ಪ್ರದೇಶಗಳು. ಹಾಗಿರುವಾಗ ಕಣಕಟ್ಟೆ ಒಂದಂಗಡಿಯಲ್ಲಿ ಎಷ್ಟು ವ್ಯಾಪಾರವಾಗ ಬಹುದೆಂಬದನ್ನು ನೀವೇ ಊಹಿಸಿ. ಈ ರೀತಿ ಪಾನನಿರೋಧ ಪ್ರದೇಶಗಳ ಹತ್ತಿರ ಇಂಥ ಒಂದೊಂದು Pockets ಇದ್ದರೆ ಸಾಕು. ಏಕೆ ಹೀಗೆ ಒಬ್ಬರಿಂದ ಒಬ್ಬರನ್ನು ಉದ್ಧಾರ ಮಾಡುವುದು ! ಅಂಥಾ ಪ್ರದೇಶಗಳಲ್ಲೂ ನಿಲ್ಲಿಸಬಾರದಿತ್ತೇ ! ಮುಖ್ಯವಾಗಿ ಅದನ್ನು ನಿಲ್ಲಿಸುವುದಕ್ಕೆ ಸಾಧ್ಯವಿಲ್ಲವೆಂದೇ ನನ್ನ ಭಾವನೆ. ಏಕೆಂದರೆ ಆ ಕಂಟ್ರಾಕ್ಟರುಗಳು ಅಂಥಾ ಪ್ರಭಾವಶಾಲಿಯಾದ ವ್ಯಕ್ತಿಗಳು. ಮಂತ್ರಿವರ್ಗದವರಿಗೂ ಅವರ ಕೈಯಿಂದ ತಪ್ಪಿಸಿಕೊಳ್ಳುವುದಕ್ಕಾಗುವುದಿಲ್ಲ. ಏನೋ, ಈ ಬ್ಯಾರೆಟ್ ಆರ್ಡರಿನಲ್ಲಿ ಅದೃಷ್ಟವಶಾತ್ ಈ ನಿರ್ಣಯಕ್ಕೆ ಪ್ರಥಮ ಸ್ಥಾನ ಬಂದಿದೆ. ಅದು ಅದೃಷ್ಟವೆಂದೇ ಹೇಳಬೇಕು. ಆದ್ದರಿಂದ ಈ ನಿರ್ಣಯವನ್ನು ತಂದ ಮಾನ್ಯ ಸದಸ್ಯರಿಗೆ ನನ್ನ ವಂದನೆಗಳನ್ನು ಸಲ್ಲಿಸಿ, ನಾನು ಈ ನಿರ್ಣಯವನ್ನು ಒತ್ತಾಯಪಡಿಸುತ್ತೇನೆ.

*ಶ್ರೀ ವೈ. ಎಂ. ಚಂದ್ರಶೇಖರಯ್ಯನವರು (ಕಡೂರು).—ಅಧ್ಯಕ್ಷರೇ, ಸರ್ಕಾರದವರು ನಮ್ಮ ತಾಲ್ಲೂಕಿನಲ್ಲಿ ಪಾನನಿರೋಧವನ್ನು ಜಾರಿಗೆ ಕೊಟ್ಟು ಮುಂದಿಂದ ಹೆಂಡ ಇಳಿಸುವುದಕ್ಕೆ ಅವಕಾಶ ಮಾಡಿದ್ದಾರೆ ಅದಾಗ್ಲೂ ನಮ್ಮ ಕಡೂರಿನಲ್ಲಿ ನಮ್ಮ ಊರ ಮಗ್ಗುಲನಲ್ಲೇ, ಮನೆಯ ಪಕ್ಕದಲ್ಲೇ ಹೆಂಡ ಇಳಿಸುತ್ತಿದ್ದಾರೆ. ಇದರಿಂದ ಪಾನನಿರೋಧ ನೀತಿಗೆ ಎಷ್ಟು ಕುಂದುಕ ಒರುತ್ತದೆಂಬುದನ್ನು ಹೇಳಿದೆಯೂ ಅನೇಕ ಸಾರಿ ಸರ್ಕಾರದವರ ಗಮನಕ್ಕೂ ತಂದಿದೆ. ಕಾಂಗ್ರೆಸ್ ಅಧಿವೇಶನದಲ್ಲೂ ಇದನ್ನೆಲ್ಲಾ ಎಷ್ಟರ ಪಾಲಿಗೆ ಹೇಳಿದ್ದೇವೆ. ಕಡೂರು ತಾಲ್ಲೂಕಿನ ಅನೇಕ ಜನ ಬಂದು ನಮ್ಮ ತಾಲ್ಲೂಕಿನಲ್ಲಿ ಮರಕಟ್ಟುವುದನ್ನು ನಿಲ್ಲಿಸಿಬಿಡಿ ಎಂದು ಮಂತ್ರಿವರ್ಗದವರಲ್ಲಿ ಅರಿಕೆ ಮಾಡಿಕೊಂಡಿದ್ದಾರೆ. ಕಂಟ್ರಾಕ್ಟರುಗಳನ್ನು ಬದುಕಿಸಬೇಕೆಂದು ಕೊಟ್ಟಿದ್ದಾರೆಂದು ಅನೇಕರು ಆಪಾದನೆ ಕೂಡ ಮಾಡುತ್ತಿದ್ದಾರೆ. ಹೀಗೆ ತಾವು ಮರಕಟ್ಟುವುದಕ್ಕೆ ಅವಕಾಶ ಕೊಟ್ಟರುವುದರಿಂದ ಕಂಟ್ರಾಕ್ಟರಿಗೆ ಎಷ್ಟು ದುಡ್ಡು ಬರುತ್ತದೆಂಬುದನ್ನು ಬಿಡಿಸಿ ಹೇಳಬೇಕಾಗಿಲ್ಲ. ಕಡೂರು ತಾಲ್ಲೂಕಿನಿಂದ ಮೊದಲು ಸರ್ಕಾರಕ್ಕೆ ಎಷ್ಟು ದುಡ್ಡು ಬರುತ್ತಿತ್ತೋ ಇಂದು ಅದಷ್ಟೂ ಕಂಟ್ರಾಕ್ಟರಿಗೆ ಬರುತ್ತಿದೆ. ಆದ್ದರಿಂದಲೇ ಒಂದೊಂದು ಸ್ಥಳಕ್ಕೂ 1,000 ರೂಪಾಯಿಗೆ ಗುತ್ತಿಗೆಗೆ ತೆಗೆದುಕೊಂಡು ಹೆಂಡ ಮಾರುವುದಕ್ಕೆ ಅವರು ಅವಕಾಶ ಪಡೆದಿದ್ದಾರೆ. ನಾನೇ ಖುದ್ದು ನೋಡಿದ್ದೇನೆ; ಯಾವ ಅಧಿಕಾರಿಗಳು ನನ್ನೊಡನೆ ಬರಲಿ ಕಡೂರು ಟೌನ್ ಪಕ್ಕದಲ್ಲೆ, ಊರಿನ ಮನೆ ಮಗ್ಗಲನಲ್ಲೇ ಹೆಂಡ ಇಳಿಸಲು ಮರಕಟ್ಟಿರುವುದನ್ನು ತೋರಿಸುತ್ತೇನೆ. ಕಡೂರಿಗೆ ಒಂದು ಫರ್ಲಾಂಗ್ ಕೂಡ ದೂರ ಎಲ್ಲ, 50 ಗಜ ದೂರದಲ್ಲೇ ಮರಗಳಿಗೆ ಕಟ್ಟಿದ್ದಾರೆ. ಹೆಂಡ ಕುಡಿಯುವುದಕ್ಕೆ ಹರಿಹರ, ದಾವಣಗೆರೆ, ಕಡೂರು ಬಿಟ್ಟರೆ ಬೆಂಗಳೂರಿನ ವರೆಗೂ ಎಲ್ಲೂ ಅನ್ಕೂಲವಿಲ್ಲದಂತೆ ಮಾಡುವುದನ್ನು ಬಿಟ್ಟು ಮಧ್ಯೆ ಸರಿಯಾಗಿ ಅರಸೀಕೆರೆಯಲ್ಲಿ ಅವಕಾಶ ಕೊಟ್ಟು ಬಿಟ್ಟರೆ ಏನು ಪ್ರಯೋಜನ ? ಅದರಲ್ಲೂ ಈಗ ಹರಿಹರ, ದಾವಣಗೆರೆ ಬಿಟ್ಟರೆ ಕಡೂರಿನಲ್ಲಿ ಊರ ಮಗ್ಗುಲಲ್ಲೇ ಕುಡಿಯುವುದಕ್ಕೆ ಹೆಂಡ ಸಿಕ್ಕುತ್ತದೆಂದಾದರೆ ಏನು ಆಭಾನ ! ಟೌನ್ ಪಕ್ಕದಲ್ಲದ್ದಮೇಲೆ ಸಾಮಾನ್ಯವಾಗಿ ಎಲ್ಲಾ ಕೆಲಸಗಾರರೂ ಅದಿಕರ್ಣಾಟಕರೂ ಕಳ್ಳ ಬಟ್ಟಿ ಸೇವನೆಗೆ ಸಾಯಂಕಾಲವಾದಮೇಲೆ ತಪ್ಪಿಸಿಕೊಂಡು ಹೊರಟುಹೋಗುವುದಕ್ಕೆ ಅನುಕೂಲವಾಗಿ ಬಿಟ್ಟಿದೆ. ಮರ ಕಟ್ಟಲಿಕ್ಕೆ ಇಂಥ ಒಂದೊಂದು ಸ್ಥಳದಲ್ಲೂ ಇಷ್ಟಿಷ್ಟು ದುಡ್ಡು ಎಂದು ಗೊತ್ತುಮಾಡಿಕೊಂಡು ಟೌನ್ ಮಗ್ಗಲನಲ್ಲೇ ಇದ್ದರೆ ಇವರೆಲ್ಲರಿಗೂ ಅನುಕೂಲವಾಯಿತು. ಆದ್ದರಿಂದ ಯಾವಾವ ತಾಲ್ಲೂಕಿನಲ್ಲ ಪಾನನಿರೋಧ ಜಾರಿಗೆ ತಂದಿದೆಯೋ ಅಲ್ಲ ಆದಷ್ಟುಮಟ್ಟಿಗೆ ಮರಕಟ್ಟುವುದಕ್ಕೆ ಅವಕಾಶ ಕೊಡಬಾರದೆಂದು ನಾನು ಹೇಳುತ್ತೇನೆ.

ಶ್ರೀ ಟಿ. ಹನುಮಯ್ಯನವರು (ಹಿರಿಯೂರು–ಅನುಸೂಚಿತ ಜಾತಿಗಳು).—ಅಧ್ಯಕ್ಷ ಮಹಾಶಯರೆ, ಈಗ ತಾನೆ ನಮ್ಮ ಮಾನ್ಯ ಸ್ನೇಹಿತರಾದ ಶ್ರೀಮಾನ್ ಮಸಿಯಪ್ಪನವರು ಮಂಡಿಸಿರತಕ್ಕ ನಿರ್ಣಯವನ್ನು ಸಮರ್ಥಿಸುತ್ತಾ ಕೆಲವು ರಚನಾತ್ಮಕ ಸಲಹೆಗಳನ್ನು ಸರ್ಕಾರದವರಿಗೆ ಕೊಡಬೇಕೆಂದಿಟ್ಟಿನುತ್ತೇನೆ.

ಸ್ವಾಮಿ, ಈ ಮದ್ಯಪಾನನಿರೋಧವನ್ನು ಈ ಏಳು ತಾಲ್ಲೂಕುಗಳಲ್ಲಷ್ಟೂ ಜಾರಿಗೆ ತಂದಿದ್ದಾರೆ. ಅಲ್ಲ ಜನತೆಯಲ್ಲಿ ಯಾರಾದರೂ ತಪ್ಪು ಮಾಡಿದರೆ, ಎಂದರೆ, ಕಳ್ಳತನದಲ್ಲಿ ಹೆಂಡವನ್ನು ಇಳಿಸಿದರೆ ಅಥವ ಕಳ್ಳಭಟ್ಟಿ ಸಾರಾಯಿ ಇಳಿಸಿದರೆ, ಸರ್ಕಾರದವರು ಅಂಥವರನ್ನು ಶಿಕ್ಷೆ ಮಾಡುತ್ತಾರೆ. ಕಾರಣ, ಅದು ಪಾನನಿರೋಧಿತ ಪ್ರದೇಶವಿರುವ ಪ್ರದೇಶ ಎಂದು ಆದರೆ ಸರ್ಕಾರದವರೇ ಅಲ್ಲ ಹೀಗೆ ಮಾಡುವುದನ್ನು ನೋಡಿದರೆ ಏನು ಪರಿಣಾಮ ಎಂಬುದನ್ನು ಸರ್ಕಾರದವರು ಗಾಢವಾಗಿ ಯೋಚನೆ ಮಾಡಬೆಕೆಂದು ಅತ್ಯಂತ ವಿನಯದಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಏಕೆಂದರೆ, ಈ ಹೊತ್ತು ತಾವು ನತದೃಷ್ಟವಾಗಿ ಜನತೆಯನ್ನು ಉದ್ಧಾರಮಾಡಬೇಕೆಂಬ ಯಾವ ಸಂಕಲ್ಪದಿಂದ ಹೊರಟಿದ್ದೀರೋ ಅದು ತಲೆಕೆಳಗಾಗುವ ಪರಿಸ್ಥಿತಿ ಬರುತ್ತದೆ. ಜನತೆ ಸಾಷ್ಟಾದ

*Speeches indicated by astrisks have not been revised by the Members concerned.

ಸಂಪತ್ತು, ರಾಷ್ಟ್ರದ ಶಕ್ತಿ. ಜನತೆ ಸುಖಮಯವಾಗಿದ್ದರೆ ದೇಶ ಮುಂದೆ ಬರುತ್ತದೆ. ಜನತೆಯಲ್ಲಿ ಅನೇಕರು ಬಡವರು. ಐಶ್ವರ್ಯವಂತರೂ ಕೆಲವರಿದ್ದಾರೆ. ಅದರಲ್ಲಿಯೂ, ಶ್ರೀಮಾನ್ ಮಸಿಯಪ್ಪನವರು ಹೇಳಿದಂತೆ, ಅನೇಕವಾಗಿ, ಬಡವರೂ ಹಿಂದುಳಿದ ಹರಿಜನರೂ ಹೆಂಡ ಕುಡಿದರೆ ತಮ್ಮಲ್ಲಿ ಕೆಲಸಕ್ಕೆ ಬರುತ್ತಾರೆಂದು ಮನಸ್ಸಿನಲ್ಲಿಟ್ಟುಕೊಂಡಿರುತ್ತಾರೆ. ಇದಕ್ಕೆ ಹೆಚ್ಚು ಸಹಾಯ ಮಾಡಿದಂತಾಗುತ್ತದೆ. ಮದ್ಯಪಾನ ನಿರೋಧವಾಗಿರತಕ್ಕ ತಾಲ್ಲೂಕುಗಳಲ್ಲಿರುವ ಯಾವ ಜನರೂ ಕೂಡ ಆ ತಾಲ್ಲೂಕುಗಳಲ್ಲಿ ಹೆಂಡವನ್ನಿಳಿಸಿ ಮಾರಾಟಮಾಡಿ ಎಂದು ಸರ್ಕಾರದಲ್ಲಿ ಮನವಿ ಮಾಡಲಲ್ಲ. ಕೇವಲ ಕಂಟ್ರಾಕ್ಟರುಗಳನ್ನು ಉದ್ಧಾರ ಮಾಡುವುದಕ್ಕೆ ಈ ಕೆಲಸ ನಡೆದಿದೆ. ಒಂದು ವೇಳೆ ಸರ್ಕಾರಕ್ಕೆ ಹಣ ಇದರಿಂದ ಬಂದರೂ ಇದೇನೂ ಅಷ್ಟು ಹೆಚ್ಚಿನದಲ್ಲವೆಂದು ನನ್ನ ಭಾವನೆ. ಪಾನನಿರೋಧವನ್ನು ಜಾರಿಗೆ ತಂದಿರತಕ್ಕ ಈ ಏಳು ತಾಲ್ಲೂಕುಗಳಲ್ಲಿ ಸರ್ಕಾರದವರು ಈಗ ಏನು ಆಜ್ಞೆ ಮಾಡಿದ್ದಾರೋ ಅದನ್ನು ವಾಪಸ್ಸು ತೆಗೆದುಕೊಳ್ಳುವುದು ಬಹಳ ಒಳ್ಳೆಯದೆಂದು ಕಾಣುತ್ತದೆ. ಭಾರತ ರಾಜ್ಯಾಂಗದ ಡೈರೆಕ್ಟಿವ್ ಪ್ರಿನ್ಸಿಪಲ್ಸ್‌ನ 47ನೆಯ ನಿಧಿಯಲ್ಲಿ ಹೀಗೆ ಹೇಳಿದೆ.

> "Article 47.—The State shall regard the raising of the level of nutrition and the standard of living of its people and the improvement of public health as among its primary duties and, in particular, the State shall endeavour to bring about prohibition of the consumption except for medicinal purposes of intoxicating drinks and of drugs which are injurious to health."

ಹೀಗಿರುವಾಗ, ಸರ್ಕಾರದವರು ಪಾನನಿರೋಧವನ್ನು ಜಾರಿಗೆ ತಂದಿರತಕ್ಕ ತಾಲ್ಲೂಕುಗಳಲ್ಲಿ ಪುನಃ ಕುಡಿಯುವುದನ್ನು ಜಾರಿಮಾಡಿದ ಹಾಗಾಗುತ್ತದೆ. ಹೆಂಡ ಕುಡಿಯುವುದು, ಇಸ್ಪೀಟಾಡುವುದು ಮುಂತಾದವು ವ್ಯಾಮೋಹಕವಾದ ವಸ್ತುಗಳು. ಇವುಗಳನ್ನು ನೋಡಿದರೆ ಯಾರುತಾನೆ ಸುಮ್ಮನಿರುತ್ತಾರೆ? ಹೆಂಡವನ್ನು ಇಳಿಸಿ, ಅದನ್ನು ಕುಡಿಯಬೇಡಿ, ಮುಟ್ಟಬೇಡಿ ಎಂದು ಹೇಳಿದರೆ, ಅದು ಸರ್ವಥಾ ಸಾಧ್ಯವಿಲ್ಲ. ಹಿಂದಿನ ಸರ್ಕಾರದವರು ಹೇಳುತ್ತಿದ್ದುದು ಜ್ಞಾಪಕಕ್ಕೆ ಬರುತ್ತದೆ. ಹೆಂಡವನ್ನು ನಿಲ್ಲಿಸಿ ಎಂದರೆ, ಜನರು ಹೆಂಡ ಕುಡಿಯುವುದನ್ನು ಬಿಟ್ಟರೆ, ಕೊಳ್ಳುವುದಕ್ಕೆ ಜನರು ಬಾರದೇಯಿದ್ದರೆ ನಾವೇ ನಿಲ್ಲಿಸುತ್ತೇವೆ ಎಂದು ಹೇಳುತ್ತಿದ್ದರು. ಹಾಗಾಯಿತು ಈಗ ಮಾಡಿರುವುದು. ಹೆಂಡದ ಅಂಗಡಿಯಿದ್ದರೆ ಜನರು ಕುಡಿಯುವುದಕ್ಕೆ ಬರುತ್ತಾರೆ. ಆದ್ದರಿಂದ ಇದು ಬೇಡಿ, ನೀವು ಒಂದು ಹೆಜ್ಜೆ ಮುಂದಿಟ್ಟು ಧೈರ್ಯವಾಗಿ ಮುಂದೆ ನುಗ್ಗಿ, ನಾವು ಬೆಂಬಲ ಕೊಡುತ್ತೇವೆ. ಮುಂದಿಟ್ಟ ಹೆಜ್ಜೆಯನ್ನು ಹಿಂದಿಡುವುದು ಸರ್ವಥಾ ನ್ಯಾಯವಲ್ಲ. ಹಿಂದುಳಿದಿರುವ ಜನರಿಗೆ ಇದರಿಂದ ತೊಂದರೆಯಾಗುತ್ತದೆ. ಪಾನನಿರೋಧ ಜಾರಿಯಲ್ಲಿರುವ ತಾಲ್ಲೂಕುಗಳಿಗೆ ಹೋಗಿ ಅಲ್ಲಿನ ಬಡ ಜನರನ್ನು ಕೇಳಿದರೆ ಗೊತ್ತಾಗುತ್ತದೆ. ಪಾನನಿರೋಧದಿಂದ ಅವರಿಗೆ ಹೊಟ್ಟೆ ಬಟ್ಟೆಗೆ ಅನುಕೂಲವಾಗಿದೆ, ಚೆನ್ನಾಗಿ ದುಡಿಯುತ್ತಾರೆ; ಬೆಂದ ಹಣದಲ್ಲಿ ತಾವು ಜಮೀನು ಆಸ್ತಿ ಪಾಸ್ತಿ ಮಾಡಿಕೊಂಡು ಮನೆ ಮಠಗಳನ್ನು ಕಟ್ಟಿಕೊಂಡು ಸುಖವಾಗಿದ್ದಾರೆ. ಪಾನನಿರೋಧ ಬರುವುದಕ್ಕೆ ಮುಂಚೆ ಅಲ್ಲಿ ಮಧ್ಯಾಹ್ನ ಎರಡುಗಂಟೆಗೇ ಹೆಂಡದಂಗಡಿಗೆ ಹೋಗಿರುತ್ತಿದ್ದರು. ಈ ಹೊತ್ತು ನೋಡಿದರೆ, ಅಂಥವರು ಪ್ರತಿಯೊಬ್ಬರೂ ತಮ್ಮ ಹೆಂಡತಿ ಮಕ್ಕಳುಗಳಿಗೆ ಒಡವೆ ವಸ್ತು ಮಾಡಿಸಿಕೊಂಡು, ಜಮೀನು ಮಾಡಿಕೊಂಡು ಸುಖವಾಗಿದ್ದಾರೆ. ಜನರ ಪ್ರತಿನಿಧಿಗಳ ಅಭಿಪ್ರಾಯವನ್ನು ಸರ್ಕಾರದವರು ಕೇಳಬೇಕು. ನಾವು ಲಕ್ಷಾಂತರ ಪ್ರಜೆಗಳ ಪರವಾಗಿ ಬಂದಿರತಕ್ಕ ಪ್ರತಿನಿಧಿಗಳು. ನಾವು ಹೇಳುವುದು ನ್ಯಾಯವೇ ಅಥವ ಅಲ್ಲವೆ ಎಂಬುದನ್ನು ತಿಳಿಯದೆ ಮಾಡುವುದು ಸರಿಯಲ್ಲ. ಪಾನನಿರೋಧವಿರುವ ಪ್ರದೇಶದಲ್ಲಿ ಹೆಂಡವನ್ನಿಳಿಸಿಕೊಂಡುಬಂದರೆ, ದಾರಿಯಲ್ಲಿ ಬಹಳ ಬಾಯಾರಿಕೆಯೆಂದು ಕೇಳಿದರೆ ಅವರಿಗೆ ಕೊಟ್ಟು ಇನ್ನಷ್ಟು ನೀರು ಹಾಕುತ್ತಾರೆ. ಇದನ್ನು ಯಾರೂ ತಡೆಯುವುದಕ್ಕಾಗುವುದಿಲ್ಲ. ಆದಕಾರಣ, ಪಾನನಿರೋಧ ಜಾರಿಯಲ್ಲಿರುವ ಏಳು ತಾಲ್ಲೂಕುಗಳಲ್ಲಿ ಹೆಂಡವನ್ನಿಳಿಸುವುದು ಒಳ್ಳೆಯದಲ್ಲ. ಇದು ಕಾನೂನಿಗೆ ವಿರೋಧ. ಡೈರೆಕ್ಟಿವ್ ಪ್ರಿನ್ಸಿಪಲ್ಸ್‌ನಲ್ಲಿರುವ 47ನೆಯ ವಿಧಿಗೇ ವಿರೋಧ. ಒಂದು ಸಾರಿ ಪಾನನಿರೋಧವನ್ನು ಜಾರಿಮಾಡಿದಮೇಲೆ ಏನೇ ಕಷ್ಟ ಬಂದರೂ ಅಲ್ಲಿ ಪುನಃ ಪಾನಮಾಡಲು ಅವಕಾಶ ಮಾಡಲು ದಾರಿಯಿಲ್ಲ. ಮುಂದೆ ನುಗ್ಗಬೇಕೇ ಹೊರತು ಹಿಂದೆ ಹೋಗುವುದು ಸರಿಯಲ್ಲ. ಆದುದರಿಂದ ದಯವಿಟ್ಟು ಈ ಏಳು ತಾಲ್ಲೂಕುಗಳಲ್ಲಿ ಈಗ ತಾವು ಈಚಲು ವೃಕ್ಷಗಳನ್ನು ಕಟ್ಟುವುದಕ್ಕೆ ಕೊಟ್ಟಿರುವ ಅವಕಾಶವನ್ನು ವಾಪಸ್ಸು ತೆಗೆದುಕೊಂಡು ಅಲ್ಲಿರತಕ್ಕ ಜನರಿಗೆ, ಅವರು ಒಳ್ಳೆಯ ಪ್ರಜೆಗಳಾಗುವಂತೆ ಸಹಾಯಮಾಡಬೇಕೆಂದು ಪ್ರಾರ್ಥಿಸುತ್ತೇನೆ.

ಶ್ರೀ ಯು. ಎಂ. ಮಾದಪ್ಪನವರು (ಚಾಮರಾಜನಗರ).—ಅಧ್ಯಕ್ಷರೇ, ಶ್ರೀಮಾನ್ ಮಸಿಯಪ್ಪನವರು ತಂದಿರತಕ್ಕ ನಿರ್ಣಯ ಬಹಳ ಮಹತ್ವದ್ದಾದುದು. ಇಂತಹ ಮಹತ್ವದ ನಿರ್ಣಯವನ್ನು ಮೋದಿಸುತ್ತಾ ಒಬ್ಬರು ಮಹಾನುಭಾವರು ಹೇಳಿತರಕ್ಕ ಒಂದು ಮಹತ್ವದ ಮಾತನ್ನು ಹೇಳಬಯಸುತ್ತೇನೆ. "ಮಧುವಿನ ಆಸೆಗೆ ಅಲಗ ನೆಕ್ಕುವ ಸೊಣಗನಂತೆ ಮನಸ್ಸು ತನ್ನ ಸ್ವಭಾವವನ್ನು ಬಿಡದು" ಎಂದು ಒಬ್ಬರು ಮಹಾವಿಭೂತಿಗಳು ಹೇಳಿದ್ದಾರೆ. ಯಾವ ಪ್ರದೇಶದಲ್ಲಿ ಪಾನನಿರೋಧವನ್ನು ಜಾರಿಮಾಡಿದ್ದೇವೋ ಅಂತಹ ಪ್ರದೇಶದಲ್ಲಿ ಪುನಃ ಹೆಂಡವನ್ನು ಕಟ್ಟುವುದಾದರೆ, ಮನಸ್ಸಿನ ಆಸೆ ಪುನಃ ಕುಡಿಯುವುದರ ಕಡೆ ಹೋಗದೆ ಬಿಡುವುದು ಸಾಧ್ಯವೆ? ಇದು ಮನಸ್ಸಿಗೆ ಸಂಬಂಧಪಟ್ಟ ವಿಷಯ. ಮನಸ್ಸು ಸಾಮಾನ್ಯವಾಗಿ ವ್ಯತ್ಯಾಸವಾಗುತ್ತಿರುತ್ತದೆ. ಸಿಹಿಯನ್ನು ತಮ್ಮ ಮುಂದಿಟ್ಟು ಅದನ್ನು ತಿನ್ನಲು ಅವಕಾಶ ಕೊಡದೇಯಿದ್ದರೆ, ತಮ್ಮ ನಾಲಗೆಯಲ್ಲಿ ನೀರೆ ಜೊಲ್ಲು ಸುರಿಯುತ್ತದೆ; ಅನೇಕರಿಗೆ ಈ ಅನುಭವವಾಗಿರಬಹುದು. ನಮಗೆ ಸಿಹಿಯು ಯಾವರೀತಿ ಇದೆಯೋ ಹಾಗೆ ಕುಡಿಯುವವರು ಮದ್ಯವನ್ನು ಸಿಹಿಯಂತೆ ತಿಳಿದು ಎಷ್ಟೋಸಾರಿ ಅದಕ್ಕಾಗಿ ಪ್ರೇಮಿಸುತ್ತಾರೆ, ತಮಗೆ ಅದರಿಂದಾಗುವ ಕಷ್ಟ ನಷ್ಟಗಳನ್ನೂ ಮನಸ್ಸಿಗೆ ತೆಗೆದುಕೊಳ್ಳದೆ, ಕುಡಿಯುವುದಕ್ಕೆ ಮನಸೋಲುತ್ತಾರೆ. ಇದನ್ನು ನಾವು ಜೆನ್ನಾಗಿ ಯೋಚಿಸುವುದು ನಮ್ಮ ಕರ್ತವ್ಯ. ಕುಡಿತದಿಂದ ಮಾನವನ ನೈತಿಕ ಮಟ್ಟ ಕೆಳಗಿಳಿಯುತ್ತದೆಯೆಂಬುದನ್ನು ನಾವು ಗಮನಕ್ಕೆ ತೆಗೆದುಕೊಳ್ಳಬೇಕು. ಕಳ್ಳತನದಿಂದ ಮದ್ಯವನ್ನು ಸೇವಿಸುವುದಕ್ಕೆ ಪ್ರಯತ್ನ ಪಟ್ಟರೆ, ನೈತಿಕ ಮಟ್ಟ ಇನ್ನೂ ಹಾಳಾಗುವ ಸಂದರ್ಭ ಬರುತ್ತದೆ. ಇಂತಹ ಸಂದರ್ಭದಲ್ಲಿ ನಾವು ದೇಶದಲ್ಲಿ ಒಂದು ಕಾನೂನನ್ನು ಜಾರಿಗೆ ತರಬೇಕಾದರೆ, ಮಾನ

(ಶ್ರೀ ಯು. ಎಂ. ಮಾದಪ್ಪನವರು).

ಮನ ನೈತಿಕ ಮಟ್ಟ ಸರಿಯಾಗಿಲ್ಲದಿದ್ದರೆ ಯಾವ ಕಾನೂ ನನ್ನು ಜಾರಿಗೆ ತಂದರೂ ಪ್ರಯೋಜನವಿಲ್ಲ. ಕಾನೂನು ರಚಿಸುವ ಈ ಸಭೆಯವರು ಇದನ್ನು ಗಣನೆಗೆ ತೆಗೆದು ಕೊಳ್ಳಬೇಕು. ನಮಗೆ ಆರ್ಥಿಕ ದೃಷ್ಟಿಯೊಂದೇ ಅಲ್ಲ, ನೈತಿಕ ದೃಷ್ಟಿಯೂ ಬೇಕು. ಸರ್ಕಾರಕ್ಕೆ ಹಣ ಸಾಲದು ಎಂಬ ದೃಷ್ಟಿಯಿಂದ ಏನಾದರೂ ಜಾರಿಯಲ್ಲಿ ತಂದರೆ, ಒಂದು ವಿಷಯವನ್ನು ನಾವು ಯೋಚನೆಮಾಡ ಬೇಕು. ಭಗವಾನ್ ಬಸವಣ್ಣನವರು ಹೇಳಿರುವ ಹಾಗೆ "ಪಾಪಿಯ ಧನ ಪ್ರಾಯಶ್ಚಿತ್ತಕ್ಕಲ್ಲದೆ ನತ್ಪಾತ್ರಕ್ಕೆ ಸಲ್ಲುವುದೆ ? ನಾಯಿಯ ಹಾಲು ನಾಯಿಯ ಕುಸಿಗ ಲ್ಲದೆ ಪಂಚಾಮೃತಕ್ಕೆ ಸಲ್ಲದು" ಎಂಬಂತೆ ಆಗುತ್ತದೆ. ಈ ಮಾತುಗಳನ್ನು ಗಮನಕ್ಕೆ ತಂದುಕೊಳ್ಳಬೇಕು. ಇದ ರಿಂದ ಏನು ಅರ್ಥವಾಗುತ್ತದೆಂದರೆ: ನಾವು ಈ ಮಾರ್ಗ ದಿಂದ ಹಣ ಸಂಪಾದಿಸಿ ದೇಶ ಸೇವೆಯನ್ನು, ಜನರಸೇವೆ ಯನ್ನು ಮಾಡಬೇಕೆಂದು ಹೊರಟಿದ್ದೇ ಆದರೆ, ಈ ಕಾರ್ಯವನ್ನು ಮಾಡಿದಹಾಗಾಗುವುದಿಲ್ಲವೆಂದು ನಿರ್ದಿ ಷ್ಟವಾಗಿ ಹೇಳುತ್ತೇನೆ. ಜನರು ಬದುಕಲಿ, ಉದ್ಧಾರ ವಾಗಲಿ ಎಂದು ರಾಷ್ಟ್ರಪಿತರಾದ ಮಹಾತ್ಮಾ ಗಾಂಧಿ ಯವರು ಯಾವ ಮೂಲ ತತ್ವಕ್ಕಾಗಿ ತಾವು ಬಾಳಿ ಅಳಿ ದುಹೋದರೋ ಆ ತತ್ವಕ್ಕೇ ಧಕ್ಕೆ ತರುವುದಾದರೆ, ನಮ್ಮ ರಾಷ್ಟ್ರದ ಕೀರ್ತಿಗೇ ಧಕ್ಕೆ ತಂದಂತಾಗುತ್ತ ದೆಂದು ಹೇಳುತ್ತೇನೆ. ನಮ್ಮ ದೇಶದ ಕೀರ್ತಿಗೆ, ಸಂಸ್ಕೃತಿಗೆ ಧಕ್ಕೆ ಬಾರದಂತೆ ನೋಡಿಕೊಳ್ಳುವುದು ನಮ್ಮ ಕರ್ತವ್ಯವಾಗಿದೆಯೆಂದು ಒತ್ತಿ ಹೇಳುತ್ತೇನೆ. ಇಂತಹ ಸಂದರ್ಭದಲ್ಲಿ ನಮ್ಮ ಪ್ರಜಾಸರ್ಕಾರದವರು ಪ್ರಜೆಗಳ ಇಷ್ಟಾನುಸಾರವಾಗಿ, ಅವರ ಅಭಿಮತದಂತೆ ನಡೆಯುತ್ತಾರೆಂದು ನಾನು ನಂಬಿದ್ದೇನೆ.

2 P.M.

ಹೀಗೆ ಮದ್ಯಪಾನಕ್ಕೆ ಅಪ್ರತ್ಯಕ್ಷವಾಗಿ ಅವಕಾಶ ಕೊಡುವುದು ಆಡಳಿತದ ಅಪರಾಧವಾಗುತ್ತದೆಂದು ಹೇಳಿದರೂ ತಪ್ಪಾಗಲಾರದೆಂದು ಕೆಲವು ಮಾನ್ಯ ಸದ ಸ್ಯರು ಹೇಳಿದ್ದಾರೆ. ಈ ಒಂದು ಸದುದ್ದೇಶದಿಂದಲೇ ರಾಜ್ಯಾಂಗದ 46-47ನೆಯ ಆರ್ಟಿಕರ್‌ನಲ್ಲಿ ಇದನ್ನು ಸೂಚಿಸಿದ್ದಾರೆಂದು ನನಗೆ ಅರ್ಥವಾಗುತ್ತದೆ. ಇಂತಹ ಒಂದು ಮಹದ್ವಿಚಾರಕ್ಕೆ ತಾವೆಲ್ಲರೂ ಗಮನಕೊಟ್ಟು ಇದನ್ನು ಅನುಮೋದಿಸಬೇಕೆಂದು ಪ್ರಾರ್ಥಿಸಿಕೊಳ್ಳು ತ್ತೇನೆ.

ಇಲ್ಲಿಗೆ 3-4 ದಿವಸಗಳ ಹಿಂದೆ ನಮ್ಮ ದೇಶದ ನಾಯ ಕರಾದ ಪ್ರಧಾನಿ ನೆಹರೂರವರು ನೀತಿವಂತ ಸಮಾಜ ಸೃಷ್ಟಿಯ ದೃಷ್ಟಿಯಿಂದ ರಚಿಸಿರುವ ಭಾರತ ಸೇವಕ ಸಮಾಜದ ಪ್ರಾರಂಭೋತ್ಸವ ಸಮಯದಲ್ಲಿ ಮಾತನಾ ಡುತ್ತ, ಜನರ ರೀತಿ ನೀತಿ ದಿನದಿನಕ್ಕೂ ಬದಲಾಯಿಸು ತ್ತಿದೆ, ಜನತೆಯ ನೀತಿ ಕುಂದುತ್ತಿದೆ, ದೇಶದಲ್ಲಿ ನೀತಿ ಪತನವಾಗುತ್ತಿದೆ, ಇದನ್ನು ಪ್ರಜಾಸರ್ಕಾರ ತಡೆಗಟ್ಟ ಬೇಕಾಗಿದೆ ಎಂದು ಸಾರಿ ತಿಳಿಸಿದ್ದಾರೆ. ಇಂಥ ನೀತಿ ಪತನವಾಗುವುದನ್ನು ತಡೆಗಟ್ಟುವಕ್ಕೆ ಮಾರ್ಗಗಳಲ್ಲ ಇದೂ ಒಂದಾಗಿರುವುದರಿಂದ ತಾವೆಲ್ಲರೂ ಈ ನಿರ್ಣ ಯಕ್ಕೆ ತಮ್ಮ ಬೆಂಬಲ ನೀಡಬೇಕೆಂದು ಪ್ರಾರ್ಥಿಸು ತ್ತೇನೆ.

Sri K. HANUMANTHAIYA (Leader of the House).—May I suggest this? I am interested in as many resolutions as possible being taken up.

Sri B. HUTCHE GOWDA.—I rise to a point of order, Sir. The Hon'ble Chief Minister is not sitting in his seat. He cannot therefore speak from another seat. I want a ruling.

Sri M. MADIAH (Nanjangud-Scheduled Castes).—I rise to a point of order, Sir. No seats are allotted by the Hon'ble Speaker so far as the members are concerned. The members to whom seats are not allotted are free to sit anywhere in the Assembly Hall.

Sri B. HUTCHE GOWDA.—Can a member speak from any other seat?

Sri K. HANUMANTHAIYA.—This is not so important a matter as to deserve any consideration of the House. Besides, for the satisfaction of my Hon'ble friend, I may say the Ministry is one of joint responsibility and it does not matter wherefrom the reply comes.

ಸ್ವಾಮಿ, ಈಗ ಚರ್ಚೆಯಾಗತಕ್ಕ ವಿಷಯ ಏನೆಂ ಬುದು ಎಲ್ಲರಿಗೂ ಗೊತ್ತಿದೆ. ಈ ಬಗ್ಗೆ ಈಗಾಗಲೆ ಮಾನ್ಯ ಸದಸ್ಯರೆಲ್ಲರೂ ವ್ಯಕ್ತಪಡಿಸಿರತಕ್ಕ ಅಭಿಪ್ರಾ ಯಕ್ಕೂ ಮತ್ತು ಸರ್ಕಾರದವರ ಅಭಿಪ್ರಾಯಕ್ಕೂ ಯಾವ ವ್ಯತ್ಯಾಸವೂ ಇಲ್ಲ. ಆದರೆ ಈ ವಿಷಯದಲ್ಲಿ ಇರ ತಕ್ಕ ತೊಂದರೆ ಏನು, ಇದನ್ನು ವಿಧಕ್ಕಾಗಿ ಕಾರ್ಯ ರೂಪಕ್ಕೆ ತರಲಾಗಲಲ್ಲ ಎಂಬ ಅಂಶಗಳ ಬಗ್ಗೆ, ಸರ್ಕಾರ ದವರು ಕೊಡತಕ್ಕ ಉತ್ತರವನ್ನು ಕೇಳಿದರೆ, ಮುಂದಿನ ಚರ್ಚೆಗೆ ಸೌಲಭ್ಯವಾಗುತ್ತದೆ ಎಂಬುದೇ ಅನ್ನಿಸಿದೆ.

Mr. SPEAKER.—The concerned Minister will reply. Is that what the Chief Minister suggests?

Sri K. HANUMANTHAIYA.—Yes.

*ಶ್ರೀ ಟಿ. ಚೆನ್ನಯ್ಯನವರು (ಜನಾರೋಗ್ಯ ರಕ್ಷಣೆ ಮತ್ತು ಸ್ಥಳೀಯ ಪ್ರಜಾಧಿಕಾರ ಶಾಖಾ ಸಚಿವರು).—ಮಾನ್ಯ ಅಧ್ಯಕ್ಷರೇ, ಸ್ವಾಮಿ, ಈಗ ಅನೇಕ ಮಂದಿ ನನ್ನ ಸ್ನೇಹಿತರು ಈ ಪಾನನಿರೋಧವನ್ನು ಜಾರಿಗೆ ತಂದಿರ ತಕ್ಕ ಪ್ರದೇಶದಲ್ಲಿರುವ ಏಳು ತಾಲ್ಲೂಕುಗಳಲ್ಲಿ ಶೇಂದಿ ಯನ್ನು ಉತ್ತಾರು ಮಾಡಿಕೊಂಡು ಬರತಕ್ಕ ವಿಷಯದಲ್ಲಿ ತಮ್ಮ ತಮ್ಮ ಸಲಹೆಗಳನ್ನು ಈಗಾಗಲೇ ವಿಶದವಾಗಿ ತಿಳಿಸಿದ್ದಾರೆ. ಈ ವಿಷಯದ ಸಂಬಂಧವಾಗಿ ನಾನು ಕೆಲವು ಅಂಶಗಳನ್ನು ಸಭೆಯ ಮುಂದಿಡಲು ಇಚ್ಛಿಸು ತ್ತೇನೆ.

ಈಗ ನಮ್ಮ ಸರ್ಕಾರಕ್ಕೆ ಬೆಂಗಳೂರು ಜಿಲ್ಲೆ ಯೊಂದರಿಂದಲೇ ಸುಮಾರು ೫೧ ಲಕ್ಷ ರೂಪಾಯಿ ಗಳಷ್ಟು ಆದಾಯವು ಎಕ್ಸೈಜ್ ರೂಪದಲ್ಲಿ ಬರುತ್ತಿದೆ. ಈ ಜಿಲ್ಲೆಯಲ್ಲಿ ಈಗ ಶೇಂದಿ ಅಂಗಡಿಗಳು, ನಗರ ಪ್ರದೇಶದಲ್ಲೂ, ತಾಲ್ಲೂಕು ಪ್ರದೇಶಗಳಲ್ಲೂ ಮತ್ತು ಸಿವಿರ್ ಪ್ರದೇಶದಲ್ಲೂ ಇರುತ್ತವೆ. ಅದಕ್ಕಾಗಿ ಈ ಜಿಲ್ಲೆಗೆ ಹೊರಗಡೆಯ ಜಿಲ್ಲೆಗಳಿಂದ ಶೇಂದಿಯನ್ನು ತರ ತಕ್ಕ ಅವಕಾಶವನ್ನು ಕೊಡಬೇಕಾಗಿ ಬಂದಿದೆ. ಈ ಜಿಲ್ಲೆಯಲ್ಲಿರತಕ್ಕ ಮರಗಳಿಂದ ಶೇಂದಿಯನ್ನು ಉತ್ತಾರು ಮಾಡಿದನಂತರ, ಎಷ್ಟು ಬಳಕೆಗೆ ಸಾಲದೆ ಬರುತ್ತ

ದೆಯೋ ಅಷ್ಟನ್ನು ಹೊರೆಗಡೆಯಿಂದ, ಎಂದರೆ ಎಲ್ಲಿ ಈ ಪಾನುರೋಧ ಜಾರಿಯಲ್ಲಿರುತ್ತೋ ಅಂಥ ತಾಲ್ಲೂಕು ಪ್ರದೇಶದಿಂದ ತರುವಂತೆ ಏರ್ಪಾಡು ಮಾಡಿದ್ದೇವೆ.

ಈಗ ಸೂಚಿಸಿರತಕ್ಕ ಏಳು ತಾಲ್ಲೂಕುಗಳಲ್ಲಿಯೂ ಪಾನುರೋಧ ಜಾರಿಯಲ್ಲಿದೆ. ಹಾಗೆ ಅಲ್ಲಿ ಶೇಂದಿಯನ್ನು ಇಳಿಸುವುದಕ್ಕೆ ಅವಕಾಶಕೊಟ್ಟರೆ ವುದರಿಂದ ಏನಾದರೂ ಇದರಿಂದ ಜನರಿಗೆ ಪುನಃ ಆನೆ ಹುಟ್ಟಬಹುದೆಂಬ ಒಂದು ಅನುಮಾನವನ್ನು ತಾವುಗಳಾರೂ ಭಾವಿಸಬೇಕಾಗಿಲ್ಲ. ಕಾರಣವೇನೆಂದರೆ ಆ ಪ್ರಾಂತದಲ್ಲಿ ಈಗಾಗಲೇ ಪಾನುರೋಧ ಬರಲಿರುವುದರಿಂದ ಅಲ್ಲಿ ಇಳಿಸಿದ ಶೇಂದಿಯನ್ನು ಅಲ್ಲಿಂದ ಹೊರಗಡೆಗೆ ಸುರಕ್ಷಿತವಾಗಿ, ಅದು ಅಲ್ಲಿ ಯಾವ ರೀತಿಯಲ್ಲೂ ಉಪಯೋಗಕ್ಕೆ ಅವಕಾಶಕೊಡದಂತೆ, ಸಾಗಿಸಲು ಪೋಲೀಸ್ ಮತ್ತೂ ಆಬ್ಕಾರಿ ಶಿಬ್ಬಂದಿಯನ್ನು ಕಾವಲಿದಲಾಗಿದೆ. ಅಂಥ ಅಕ್ರಮ ನಡೆವಳಿಕೆಗಳೇನಾದರೂ ನಡೆದ ಪಕ್ಷದಲ್ಲಿ ಕೂಡಲೇ ಅಂಥವರ ಬಗ್ಗೆ ತಕ್ಕ ಕಾರ್ಯಕ್ರಮವನ್ನು ಕೈಗೊಳ್ಳುತ್ತಾರೆ. ಸರ್ಕಾರ ಇಷ್ಟೆಲ್ಲಾ ಏರ್ಪಾಡುಗಳನ್ನು ಮಾಡಿರುತ್ತದೆ. ಹೀಗೆ ಇಳಿಸಲಾದ ಶೇಂದಿಯನ್ನು ಕೂಡಲೇ ಲಾರಿಗಳ ಮೂಲಕ ಹೊರಕ್ಕೆ ಸಾಗಿಸಲು ಲಾರಿಗಳಿಗೆ ಬೇಕಾದ ಪರ್ಮಿಟ್‌ಗಳನ್ನು ಕೊಡರಾಗಿದೆ; ಮತ್ತು ಹಾಗೆ ಪರ್ಮಿಟ್ ಕೊಡಲು ಸರ್ಕಾರ ಆಜ್ಞೆಯನ್ನು ಮಾಡಿರುತ್ತದೆ. ಈ ಕಾರಣಗಳಿಂದ ಆ ಏಳು ತಾಲ್ಲೂಕುಗಳ ಪ್ರದೇಶದಲ್ಲಿರತಕ್ಕ ಜನರಿಗೆ ಯಾವ ತೊಂದರೆಯೂ ಉಂಟಾಗುವುದಿಲ್ಲ. ಆದುದರಿಂದ ಈ ನಿರ್ಣಯವನ್ನು ತಂದಿರತಕ್ಕ ನನ್ನ ಮಾನ್ಯ ಮಿತ್ರರು ತಮ್ಮ ನಿರ್ಣಯವನ್ನು ವಾಪಸ್ಸು ತೆಗೆದುಕೊಳ್ಳಬೇಕೆಂದು ನಾನು ಪ್ರಾರ್ಥಿಸುತ್ತೇನೆ.

ಶ್ರೀ ಎ. ಮಸಿಯಪ್ಪನವರು.—ಮಾನ್ಯ ಸಚಿವರು ಈ ನಿರ್ಣಯದ ವಿಷಯವಾಗಿ ಸಮರ್ಪಕವಾದ ಒಂದು ಭರವಸೆಯನ್ನು ಕೊಟ್ಟಿರುವುದರಿಂದ ಆ ಆಧಾರದ ಮೇರೆ ನಾನು ನನ್ನ ನಿರ್ಣಯವನ್ನು ವಾಪಸ್ಸು ತೆಗೆದು ಕೊಳ್ಳಲು ಸಭೆಯ ಅನುಮತಿಯನ್ನು ಬೇಡುತ್ತೇನೆ.

The resolution was, by leave, withdrawn.

Sri B. HUTCHE GOWDA.—It may be put to vote.

Mr. SPEAKER.—The House has granted permission to withdraw the resolution.

Sri B. HUTCHE GOWDA.—I demand a poll.

Mr. SPEAKER.—Not necessary. Leave is granted and the mover has withdrawn his resolution.

Request to dispose of as many resolutions as possible.

ಶ್ರೀ ಮುಲ್ಕ ಗೋವಿಂದರೆಡ್ಡಿಯವರು (ಚಿತ್ರದುರ್ಗ).—ಮಾನ್ಯ ಅಧ್ಯಕ್ಷರೆ, ನಿರ್ಣಯಗಳ ವಿಚಾರವಾಗಿ ಒಂದು ಮಾತು ಹೇಳಬೇಕೆಂದಿದ್ದೇನೆ. ಈಗ 81 ನಿರ್ಣಯಗಳು ಬಂದಿವೆ. ಆದ್ದರಿಂದ ಅದಷ್ಟು ಜಾಗ್ರತೆಯಾಗಿ ಅದಷ್ಟು ನಿರ್ಣಯಗಳನ್ನು ಸಭೆಯ ಮುಂದೆ ಚರ್ಚಿಸುವುದು ನ್ಯಾಯವಾಗಿ ಕಾಣುತ್ತದೆ. ಅದಕ್ಕೆ ಕಾಂಗ್ರೆಸ್ ಪಕ್ಷದ ಪರವಾಗಿ ಇಬ್ಬರು ಅಥವಾ ಮೂರು ಮಂದಿ, ನಮ್ಮ ಕಡೆಯಿಂದ ಇಬ್ಬರು ಅಥವಾ ಮೂರು ಸದಸ್ಯರು ಮಾತನಾಡುವುದಕ್ಕೆ ಅವಕಾಶ ಕೊಟ್ಟರೆ ವಿರೋಧಾಭಿಪ್ರಾಯವನ್ನು ಸಭೆಯ ಮುಂದೆ ತಿಳಿಸುವುದಕ್ಕೆ ಅವಕಾಶವಾಗುತ್ತದೆ ಮತ್ತು ಹೆಚ್ಚು ನಿರ್ಣಯಗಳೂ ತೆಗೆದುಕೊಳ್ಳಲ್ಪಡುತ್ತವೆ. ಆದ್ದರಿಂದ ಆ ರೀತಿ ಒಂದು ನೀತಿಯನ್ನನುಸರಿಸಬೇಕೆಂಬುದು ನನ್ನ ಅಭಿಪ್ರಾಯ.

Mr. SPEAKER.—If the Hon'ble Members come to some understanding, that may be considered.

Sri Mulka GOVINDA REDDY.—That is left to the Chair.

Mr. SPEAKER.—We will see to it. Tomorrow also we have Resolutions.

No. 2. Abolition of Middle School Examinations.

ಶ್ರೀ ಎಸ್. ಕರಿಯಪ್ಪನವರು (ವಿರೂಪಾಕ್ಷಪುರ).—ಸ್ವಾಮಿ, ನನ್ನ ನಿರ್ಣಯ ಈ ರೀತಿ ಇದೆ.—

"ಎಂಡ್ಲ್ ಸ್ಕೂಲು ಪರೀಕ್ಷೆಯನ್ನು ರದ್ದುಮಾಡ ಬೇಕೆಂದು ಈ ಸಭೆಯವರು ಅಭಿಪ್ರಾಯ ಪಡುತ್ತಾರೆ."

ಒಂದು ದೇಶದ ಆಗು ಹೋಗುಗಳು ಹೇಗಾಗಬಹುದೆಂಬುದನ್ನು ಕಂಡುಹಿಡಿಯಬೇಕಾದರೆ ಆ ದೇಶದ ವಿದ್ಯಾಭ್ಯಾಸ ಕ್ರಮ ಹೇಗಿದೆ ಎನ್ನುವುದನ್ನು ನೋಡಬೇಕು. ಇಂದಿನ ಮಕ್ಕಳೇ ಮುಂದಿನ ಪ್ರಜೆಗಳು ಎಂಬುದು ಎಲ್ಲರಿಗೂ ಗೊತ್ತಿರತಕ್ಕ ವಿಚಾರ. ನಾವು ಕೊಟ್ಟಿರುವ ತರಬೇತು ಸರಿಯಾಗಿಲ್ಲದೇ ಇರುವ ಭಾಗದಲ್ಲಿ ದೇಶದ ಮುಂದಿನ ಪ್ರಜೆಗಳು ಸರಿಯಾಗಿ ತರಬೇತು ಹೊಂದದೆ ದೇಶಕ್ಕೆ ಒಂದಲ್ಲ ಒಂದು ವಿಧದಲ್ಲಿ ಅನಾನುಕೂಲ, ತೊಂದರೆ ಉಂಟಾಗುವುದು ಸ್ವಾಭಾವಿಕ. ಆದಕಾರಣ ಸರಿಯಾದ ಪ್ರಜೆಗಳನ್ನು ತಯಾರು ಮಾಡುವುದಕ್ಕೆ ನಿಜವಾಗಿಯೂ ಒಂದು ಸೂಕ್ತವಾದ ವಿದ್ಯಾಭ್ಯಾಸ ಕ್ರಮ ಇರುವುದು ತುಂಬಾ ಅವಶ್ಯಕ. ಈಗ ನಮ್ಮ ದೇಶದಲ್ಲಿರತಕ್ಕಂಥ ವಿದ್ಯಾಭ್ಯಾಸ ಕ್ರಮವನ್ನು ಜಾರಿಗೆ ತಂದು ಅನೇಕ ವರ್ಷಗಳಾಗಿವೆ. ಈಗಿರುವ ಪದ್ಧತಿಯನ್ನೇ ಬದಲಾವಣೆ ಮಾಡದೆ, ಈಗಿನ ಪರಿಸ್ಥಿತಿಗೆ ತಕ್ಕಂತೆ ಮಾರ್ಪಡಿಸದೆ ಅದನ್ನೇ ಅನುಸರಿಸುತ್ತೇವೆಂದು ಹೇಳಿದರೆ ಆರು ತಿಂಗಳಾಗಿರುವ ಮಗುವಿಗೆ ಹೊಲಿಸಿದ ಅಂಗಿಯನ್ನು ಆರು ವರ್ಷಗಳ ಮಗುವಿಗೆ ತೊಡಿಸುವುದಕ್ಕೆ ಪ್ರಯತ್ನಪಟ್ಟ ಹಾಗಾಗುತ್ತದೆ. ಆದಕಾರಣ ಈಗ ಬದಲಾಯಿಸಿರುವ ಪರಿಸ್ಥಿತಿಗೆ ತಕ್ಕ ಹಾಗೆ ವಿದ್ಯಾಭ್ಯಾಸ ಕ್ರಮವನ್ನು ಸಹ ನಾವು ಬದಲಾವಣೆ ಮಾಡಬೇಕಾದದ್ದು ತುಂಬಾ ಅವಶ್ಯಕವಾದುದು ಎನ್ನುವುದನ್ನು ವಿದ್ಯಾಭ್ಯಾಸದ ವಿಚಾರದಲ್ಲಿ ನೈಪುಣ್ಯವನ್ನು ಹೊಂದಿರುವವರೇ ಹೇಳಿದ್ದಾರೆ. ಈಗ ನಾನಾದರೂ ಈ ನಿರ್ಣಯದಲ್ಲಿ ತಂದಿರತಕ್ಕಂಥ

(ಶ್ರೀ ಎಸ್. ಕರಿಯಪ್ಪನವರು).

ಏಚಾರ ವಿದ್ಯಾಭ್ಯಾಸ ಕ್ರಮದಲ್ಲಿ ಆಗಬೇಕಾದ ಸುಧಾರಣೆಗಳ ಪೈಕಿ ಒಂದು ಮಾತ್ರ ಆಗಿದೆ. ಅದು ಮಾಧ್ಯಮಿಕ ಶಾಲೆಯ ಪರೀಕ್ಷೆಯನ್ನು ರದ್ದು ಮಾಡಬೇಕೆಂಬುದು. ಮಾಧ್ಯಮಿಕ ಶಾಲೆಯ ಪರೀಕ್ಷೆಯನ್ನು ಬಹಳ ಕಾಲದ ಹಿಂದೆ ವಿದ್ಯಾಭ್ಯಾಸ ಕ್ರಮದಲ್ಲಿ ಅಳವಡಿಸಿದರು. ಆಗ ಈ ಪರೀಕ್ಷೆಗೆ ಕುಳಿತುಕೊಳ್ಳುವ ಮಕ್ಕಳ ಸಂಖ್ಯೆ ಕೇವಲ ಕಡಿಮೆಯಾಗಿತ್ತು. ಅಲ್ಲದೆ ಆಗ ಹೆಚ್ಚಾಗಿ ಓದುವವರು ಕಡಮೆಯಾಗಿದ್ದರಿಂದ ಆ ಪರೀಕ್ಷೆ ಇಡಬಹುದಾಗಿತ್ತು. ಅಲ್ಲದೆ ಆಗ ದೇಶದಲ್ಲಿ ಕಾಲೇಜುಗಳೂ, ಹೈಸ್ಕೂಲುಗಳೂ ಕಡಮೆಯಾಗಿದ್ದುವು. ಅಂಥ ಸಂದರ್ಭದಲ್ಲಿ ಒಂದು ಪರೀಕ್ಷೆ ದೇಶದಲ್ಲಿ ಮಕ್ಕಳಿಗೆ ಅವಶ್ಯಕವಾಗಿತ್ತು. ಓದಲು ಮಕ್ಕಳು ಮುಂದೆ ಬರಬಹುದು ಎಂಬ ದೃಷ್ಟಿಯಿಂದ ಆಗ ಅದನ್ನು ಏರ್ಪಡಣಿಗೆ ತಂದರು ಆಗ ದೇಶದಲ್ಲಿ ಕಾಲೇಜುಗಳು ಅಷ್ಟಿರಲಿಲ್ಲ; ಈಗ 33 ಕಾಲೇಜುಗಳಿವೆ, 220 ಹೈಸ್ಕೂಲುಗಳಿವೆ. ಹೀಗೆ ಹೆಚ್ಚಾಗಿ ಮೇಲ್ದರ್ಜೆ ವಿದ್ಯಾಭ್ಯಾಸ ಪಡೆಯುವುದಕ್ಕೆ ಬೇಕಾದಷ್ಟು ಸೌಕರ್ಯಗಳು ಈಗ ಒದಗಿವೆ. ಅಲ್ಲದೆ ಶಾಲೆಗೆ ಬರುವ ಮಕ್ಕಳ ವಯಸ್ಸು ತೀರಾ ಕಡಮೆಯಾಗಿದೆ. ಮೊದಲು ನಮಗೆ ಗೊತ್ತಿರುವ ಹಾಗೆ ಹಲವಾರು ವರ್ಷಗಳ ಹಿಂದೆ ಮಿಡ್ಲ್ ಸ್ಕೂರ್ ಪರೀಕ್ಷೆಗೆ ಕುಳಿತುಕೊಳ್ಳಬೇಕಾದರೆ ಸುಮಾರು 16–17 ವರ್ಷ ವಯಸ್ಸಾದವರು ಬರುತ್ತಿದ್ದರು, ಈ ದಿವಸ ಕುಳಿತುಕೊಳ್ಳುವ ಮಕ್ಕಳ ವಯಸ್ಸು ಕೇವಲ 9-10 ವರ್ಷಗಳು, ಈಗ ಇಂಥ ಸ್ಥಿತಿಯಿದೆ. ಮಕ್ಕಳಿಗೆ ಚಿಕ್ಕ ವಯಸ್ಸಿನಲ್ಲಿ ಹೆಚ್ಚಾಗಿ ಶ್ರಮವಾಗುವಂಥ ಕೆಲಸವನ್ನು ಮತ್ತು ಅವರ ಮನಸ್ಸಿಗೆ ಹೆಚ್ಚು ಕೆಲಸವನ್ನು ಕೊಡುವ ಯಾವ ಕಾರ್ಯಗಳನ್ನೂ ಕೂಡ ಕೊಡಬಾರದೆಂದು ನಿಪುಣರು ಹೇಳುತ್ತಾರೆ ಮತ್ತು ನಮ್ಮ ಅನುಭವದಲ್ಲೂ ಅದು ನ್ಯಾಯವಾಗಿ ಕಂಡುಬಂದಿದೆ. ಈಗ ಈ ಪರೀಕ್ಷೆ ಇರುವುದರಿಂದ ಏನಾಗುತ್ತಿದೆಯೆಂದರೆ ಮಕ್ಕಳ ಮನಸ್ಸಿಗೆ ಕೇವಲ ಪರೀಕ್ಷೆ ಇದೆಯೆಂದು ಗಾಬರಿ ಉಂಟಾಗುವುದಕ್ಕೂ, ಅದರ ಬಗ್ಗೆ ರಾತ್ರಿ ಹಗಲು ಯೋಚನೆ ಮಾಡಿ ತೀರ್ಗಡೆಯಾಗಬೇಕೆಂದು ಅತಿಯಾಗಿ ಶ್ರಮಪಡುವುದಕ್ಕೂ ಈ ಮೂಲಕ ಮಕ್ಕಳ ಮನಸ್ಸಿಗೆ ಒಂದು ಭಯ ಮತ್ತು ಶ್ರಮ ಉಂಟಾಗುವುದಕ್ಕೂ ಕಾರಣವಾಗಿದೆ.

ಈಗ ನಾವು ನೋಡುವ ಹಾಗೆ ಸ್ಕೂಲು ಮತ್ತು ಕಾಲೇಜುಗಳಲ್ಲಿ ಸ್ಟ್ಯಾಂಡರ್ಡ್ ಬಹಳ ಬಿದ್ದುಹೋಗಿದೆ. ಅದಕ್ಕೆ ಅನೇಕ ಕಾರಣಗಳನ್ನು ಹೇಳಿದ್ದಾರೆ. ಈಗ ಕೇವಲ ಚಿಕ್ಕ ವಯಸ್ಸಿನಲ್ಲಿ ಎಳೆಯ ಮನಸ್ಸಿಗೆ ಹೆಚ್ಚು ಶ್ರಮವುಂಟಾಗುವುದರಿಂದ ಮುಂದೆ ಬಹಳ ದುಷ್ಪರಿಣಾಮವಾಗುತ್ತದೆಂದು ಹೇಳದೆ ವಿಧಿಯಿಲ್ಲ. ಮಕ್ಕಳ ಮಾನಸಿಕ ಶಕ್ತಿ ಕುಂದುವುದು, ಆ ಮೂಲಕ ದೈಹಿಕ ಶಕ್ತಿಯೂ ಕುಂದುವುದಕ್ಕೆ ಅವಕಾಶವಾಗುವುದು, ಇದಕ್ಕೆ ಕೇವಲ ಚಿಕ್ಕ ವಯಸ್ಸಿನಲ್ಲಿ ಪರೀಕ್ಷೆಗೆ ಕಳುಹಿಸುವುದೇ ಕಾರಣವಾಗಿದೆ. ಇಷ್ಟೇ ಅಲ್ಲದೆ ಇನ್ನೂ ಹಲವಾರು ಕಾರಣಗಳಿಂದ ಈ ಪರೀಕ್ಷೆ ಹೋಗದೇಕಾದುದು ಅವಶ್ಯಕ ಎಂಬುದು ಅನೇಕರ ಮನಸ್ಸಿಗೆ ಕಂಡುಬಂದಿದೆ. ಈಗ ನಾವು ನೋಡುವುದಾದರೆ ನಾಲ್ಕು ವರ್ಷದಲ್ಲಿ 15 ಸಾವಿರ ಮಕ್ಕಳು ಮಾಧ್ಯಮಿಕ ಶಾಲೆ ಪರೀಕ್ಷೆಗೆ ಕುಳಿತುಕೊಳ್ಳುತ್ತಿದ್ದರು. ಈ ದಿವಸ 41 ಸಾವಿರ ಮಕ್ಕಳು ಕುಳಿತುಕೊಳ್ಳುತ್ತಿದ್ದಾರೆ ಇಷ್ಟು ಸಂಖ್ಯೆಯಲ್ಲಿ ಕುಳಿತುಕೊಳ್ಳುವ ಮಕ್ಕಳಿಗೆ ಪರೀಕ್ಷೆಯೆಂಬುದೇ ಒಂದು ದೊಡ್ಡ ಸಮಸ್ಯೆಯಾಗಿದೆ.

ಪ್ರಶ್ನೆ ಪತ್ರಿಕೆಗಳನ್ನು ಅಚ್ಚು ಹಾಕಿಸರಾಗುತ್ತಿದೆ. ಅಚ್ಚು ಹಾಕುವಾಗ ಆ ಪ್ರಶ್ನೆಗಳು ಮಕ್ಕಳಿಗೆ ಗೊತ್ತಾಗದ ರೀತಿಯಲ್ಲೂ, ಹೊರಗೆ ಬಾರದಂತೆಯೂ ನೋಡಿಕೊಳ್ಳತಕ್ಕದ್ದೂ ಬಹಳ ಶ್ರಮ ಸಾಧ್ಯವಾದ ಕೆಲಸವಾಗಿದೆ. ಹಾಗೆ ಬಹಳ ಕಟ್ಟುನಿಟ್ಟಿನಲ್ಲಿ ಬಹಳ ರಹಸ್ಯವಾಗಿ ಪರೀಕ್ಷೆ ಪತ್ರಿಕೆಗಳನ್ನು ಅಚ್ಚುಹಾಕಿಸಿ ಪರೀಕ್ಷೆ ದಿವಸ ಮಕ್ಕಳಿಗೆ ಕೊಡುವುದು ಸರಿಯಾದ ಮಾರ್ಗ. ಆದರೆ ಅಧಿಕ ಸಂಖ್ಯೆಯಲ್ಲಿ ಅಚ್ಚು ಹಾಕಿಸುವುದರಿಂದ ರಹಸ್ಯವಾಗಿಡುವುದು ಕಷ್ಟವಾಗಿ ಅನೇಕ ಪಟ್ಟಣಗಳಲ್ಲಿರುವ ಮಕ್ಕಳಿಗೆ ಮೊದಲೇ ಎರ್ಲಾ ಪ್ರಶ್ನೆಗಳೂ ಗೊತ್ತಾಗಿ, ಹಳ್ಳಿಗಳ ಶಾಲೆಗೆ ಹೋಗುವ ಮಕ್ಕಳಿಗೆ ಒಂದು ಪ್ರಶ್ನೆಯೂ ಗೊತ್ತಾಗದೆ ಬಹು ತೊಂದರೆಯುಂಟಾಗುವುದಕ್ಕೆ ಕಾರಣವಾಗಿದೆ. ಪರೀಕ್ಷೆಯ ಫಲತಾಂಶ ಪಟ್ಟಣದಲ್ಲಿ ಬರುವುದಕ್ಕೂ ಹಳ್ಳಿಯಲ್ಲಿ ಬರುವುದಕ್ಕೂ ಹೋಲಿಸಿ ನೋಡಿದರೆ ನಿಜವಾದ ಸಂಗತಿ ಗೊತ್ತಾಗುತ್ತದೆ. ಹೀಗೆ ಪ್ರಶ್ನೆ ಪತ್ರಿಕೆಗಳು ಹೊರಗೆ ಬರುತ್ತವೆಂದು ಗೊತ್ತಾಗಿ ಅವನ್ನು ಸಾಹಸಪಟ್ಟು ತಿಳಿದು ಕೊಳ್ಳಬೇಕೆಂಬ ಒಂದು ದುಷ್ಟ ಪದ್ಧತಿ ಮಕ್ಕಳ ಮನಸ್ಸಿನಲ್ಲಿ ಮೂಡುವುದಕ್ಕೆ ಕಾರಣವಾಗಿದೆ. ಮಕ್ಕಳು ಸತ್ಪ್ರಜೆಗಳಾಗಬೇಕು, ಬಹಳ ನೀತಿವಂತರಾಗಬೇಕು ಎಂದು ಮನಸ್ಸಿರುವಾಗ, ಚಿಕ್ಕ ವಯಸ್ಸಿನ ಮಕ್ಕಳಿಗೆ ಪ್ರಶ್ನೆ ಪತ್ರಿಕೆಗಳನ್ನು ಪತ್ತೆ ಹಚ್ಚಿ ತೀರ್ಗಡೆಯಾಗೋಣ ಎಂಬ ಚಿತ್ತವೃತ್ತಿ ಬೆಳೆಯುವಂತೆ ಮಾಡುವುದು ಎಂದಿಗೂ ಸಾಧುವಲ್ಲ. ಇಷ್ಟೇ ಅಲ್ಲದೆ ಪರೀಕ್ಷೆ ಇನ್ನೊಂದು ವಾರ ಇರಬೇಕಾದರೆ ಪ್ರಶ್ನೆಗಳನ್ನು ಬರೆದು ತೆಗೆದು ಕೊಂಡು ಬಂದು ಮಾರ್ಕೆಟ್ಟಿನಲ್ಲಿ ತರ್ಕಾರಿ ಮಾರುವಂತೆ ಮಾರುವ ಪರಿಸ್ಥಿತಿ ಈಗ ಒದಗಿದೆ.

Sri H. K. SHIVARUDRAPPA.—On a point of order, Sir. Is it relevant, Sir?

Mr. SPEAKER.—The Hon'ble Member may please hear him.

ಶ್ರೀ ಎಸ್. ಕರಿಯಪ್ಪನವರು.—ಅಷ್ಟೇ ಅಲ್ಲದೆ 41,000 ಹುಡುಗರ ಪ್ರಶ್ನೆಪತ್ರಿಕೆಗಳನ್ನು ವ್ಯಾಲ್ಯು ಮಾಡಬೇಕಾದರೆ, ಅವುಗಳನ್ನು ಏಮರ್ಕೆಮಾಡಿ ನೋಡಬೇಕಾದರೆ, ಅಂಕಗಳನ್ನು ಕೊಡಬೇಕಾದರೆ ಆಗತಕ್ಕ ಖರ್ಚು ಎಷ್ಟು ಎಂಬುದನ್ನು ತಾವು ಆಲೋಚನೆಮಾಡಬೇಕಾಗಿದೆ. ಹುಡುಗರು ಯಾರಾರು ಪರೀಕ್ಷಕರು ಎಂಬುದನ್ನು ಕಂಡುಹಿಡಿದು ಅವರ ಮನೆಗೆ ಸುತ್ತಿ, ಹಣವನ್ನಾದರೂ ಕೊಟ್ಟು ತೀರ್ಗಡೆ ಆಗುತ್ತಿರುವುದು ಅನೇಕರ ಗಮನಕ್ಕೆ ಬರದೇ ಇಲ್ಲ. ಹೀಗೆ ಅನೇಕ ವಿಧದಲ್ಲಿ ಮನುಷ್ಯನ ಶೀಲವನ್ನು ಹಾಳುಮಾಡತಕ್ಕ ನಿನ್ನ ವೇಶಗಳಿಗೆ ಅವಕಾಶ ಕೊಟ್ಟಿರತಕ್ಕ ಈ ಪದ್ಧತಿಯನ್ನು ತೆಗೆದುಹಾಕಬೇಕಾದದ್ದು ಯಾವ ದೃಷ್ಟಿಯಿಂದ ನೋಡಿದರೂ ಕೂಡ ತುಂಬಾ ಅವಶ್ಯಕ ಎಂಬುದು ವ್ಯಕ್ತವಾಗುತ್ತದೆ. ಅಲ್ಲದೆ ಮತ್ತೊಂದು ಅಂಶವನ್ನು ಗಮನಿಸಬೇಕು. ಪರೀಕ್ಷೆಯನ್ನು ತೆಗೆದರೆ ಉಪಾಧ್ಯಾಯರು ಇನ್ನೇನು ಪರೀಕ್ಷೆ ಇಲ್ಲ, ಏನೂ ಇಲ್ಲ, ಹೆಚ್ಚುಜನ ಪಾಸ್ ಆದರು ಎಂದರೆ ಮೇಷ್ಟ್ರರು ಚೆನ್ನಾಗಿ ಪಾಠಹೇಳಿದ್ದಾರೆ ಎನ್ನುತ್ತಾರೆ ಇಲ್ಲದೇಇದ್ದರೆ ಚೆನ್ನಾಗಿ ಹೇಳಲಿಲ್ಲ ಎನ್ನುತ್ತಾರೆ ಎಂದು ಹೇಳಿ ಹೈಸ್ಕೂಲಿಗೆ ಹೋದಮೇಲೆ ಹುಡುಗರ ಗತಿ ಹೇಗಾದರೂ ಆಗಲಿ ಎಂದು ಹೇಳಿ ಉದಾಸೀನರಾಗಬಹುದು ಎಂಬುದಾಗಿ ಅನೇಕರು ಶಂಕೆಪಡುತ್ತಾರೆ. ನಾನು ಹೇಳುತ್ತೇನೆ, ಮದರಾಸಿನಲ್ಲಿ ಈ ಪದ್ಧತಿ ಏನೂಇಲ್ಲ. ಆದರೆ ಅಲ್ಲಿನ ಸ್ಟ್ಯಾಂಡರ್ಡ್ ಕಡಮೆಯಾಗಿಲ್ಲ; ಉಪಾಧ್ಯಾಯರು ಆ ರೀತಿ ಉದಾ

ತಮ್ಮ ನಿತ್ಯದಿನದರಿ ಕೆಲಸಗಳಲ್ಲಿ ತೊಡಗಿ, ತಮ್ಮ ಆಯಾಸ, ಮೈ ಕೈನೋವುಗಳನ್ನು ಲೆಕ್ಕಿಸದೆ ಎಲ್ಲರಂತೆ ತಾವೂ ಕೆಲಸಮಾಡಿಕೊಂಡು, ದಿನ ಒಂದಕ್ಕೆ ಒಬ್ಬೊಬ್ಬ ಗಂಡಾಳು ರೂ. 1—4—0 ನಿಂದ ಹಿಡಿದು ರೂ. 1—8—0 ವರೆಗೂ, ಹೆಂಗಸು ದಿನ ಒಂದಕ್ಕೆ 10 ಆಣೆಗಳ ಪ್ರಕಾರವೂ ನಿಂಪಾದನೆಮಾಡಿಕೊಂಡು ಬಂದ ಕೂಲಿ ಹಣದಿಂದ ಬಹಳ ಸೌಖ್ಯವಾಗಿ ಜೀವನಮಾಡಿಕ್ಕೊಂಡು ಬಹಳ ನೆಮ್ಮದಿಯಿಂದಿದ್ದಾರೆ. ಸರ್ಕಾರಿ ನೌಕರರೂ ಸಹ ಅಷ್ಟು ನೆಮ್ಮದಿಯಿಂದಿದ್ದಾರೆಂದು ಹೇಳುವುದಕ್ಕಾಗುವುದಿಲ್ಲ. ಹೀಗೆ ಈ ಕುಡಿತವೊಂದು ತಪ್ಪಿದ್ದರಿಂದ ಈ ದಿವಸ ಅವರು ತಿಂಗಳೊಂದಕ್ಕೆ 100–120 ರೂಪಾಯಿಗಳ ವರಮಾನ ಪಡೆಯುತ್ತಾ, ಸುಖದಿಂದ ಜೀವನಮಾಡಿಕೊಂಡಿದ್ದಾರೆ, ನೆಮ್ಮದಿಯಿಂದ ಬಾಳುತ್ತಿದ್ದಾರೆ.

Sri R. ANANTARAMAN (Chamarajpet).—I rise to a point of order. How is it relevant to this subject ? He is making a speech about prohibition.

Mr. SPEAKER—The wording of the resolution is : ..... the recent order authorising the Deputy Commissioners to issue permission to tap toddy in the seven taluks which have gone dry.....' The Hon'ble Member is not confining his remarks to that subject.

Sri V. MASIYAPPA.—I will come to that point. Just by way of introduction I am saying this.

ಏಳು ತಾಲ್ಲೂಕುಗಳಲ್ಲಿ ಮದ್ಯಪಾನನಿರೋಧವನ್ನು ಜಾರಿಗೆ ತಂದು ಅಲ್ಲಿ ಹೆಂಡವನ್ನು ಇಳಿಸಲು ಅವಕಾಶ ಕೊಟ್ಟಿರುವುದರಿಂದ ಪಾನನಿರೋಧಮಾಡಿರುವ 5 ಜಿಲ್ಲೆಗಳಲ್ಲಿ ಅದು ಯಶಸ್ವಿಯಾಗಿ ನಡೆದಿದೆಯೆ ಎಂಬ ವಿಚಾರವನ್ನು ಹೇಳುವಾಗ ಆ ರೀತಿಯಾಗಿ ಅವಕಾಶಕೊಟ್ಟಿದ್ದರಿಂದ ಮಹಾ ಅನರ್ಥವಾಗ ತ್ತದೆ ಎಂಬುದನ್ನು ಮಾನ್ಯ ಸದಸ್ಯರಿಗೆ ತಿಳಿಸುವುದಕ್ಕಾಗಿ ಪೀಠಿಕೆ ರೂಪದಲ್ಲಿ ಹೇಳುತ್ತಿದ್ದೆ. ಈಗ ಮಾಡಿರುವುದು ಮುಂದೆ ಅನ್ನ ಇಟ್ಟು ಊಟಮಾಡಬೇಡಿ ಎಂದು ಹೇಳಿದಂತಿದೆ. ಪಾನನಿರೋಧ ಮಾಡಿರುವ ಕಡೆ ಹೆಂಡವನ್ನಿಳಿಸಲು ಅವಕಾಶ ಕೊಟ್ಟರೆ ಕುಡಿಯುವವರನ್ನು ತಡೆಯುವುದು ಬಹಳ ಕಷ್ಟ. ಕುಡಿಯಬೇಕೆಂಬ ಚಟವಿರುವವರು ಕುಡಿಯುವುದಕ್ಕೆ ಅವಕಾಶವಿಲ್ಲದೆ ಅದನ್ನು ಬಿಟ್ಟಿದ್ದರೆ ಸೇಂದಿ ಇಳಿಸುವುದನ್ನು ಕಂಡ ಕೂಡಲೆ ಯಾವುದಾದರೂ ಒಂದು ವಿಧದಲ್ಲಿ ಅದನ್ನು ಪಡೆಯುವುದಕ್ಕೆ ಪ್ರಯತ್ನಪಡದೆ ಬಿಡುವುದಿಲ್ಲ. ಆಗಲೇ ಎಕ್ಸೈಜು ಇಲಾಖೆಗೆ ಸಂಬಂಧಪಟ್ಟ ನಟಿವರು ಎಷ್ಟು ಎಕ್ಸೈಜು ಕೇಸುಗಳು ನಡೆದಿವೆಯೆಂದು ಹೇಳಿದ್ದಾರೆ. ದೇಶದಲ್ಲಿ ಕಳ್ಳಬಟ್ಟಿ ಇಳಿಸುತ್ತಿದ್ದಾರೆಂದು ಗೊತ್ತಾಗಿವೆ. ಅಂದಮೇಲೆ ಕಳ್ಳತನದಿಂದ ಇಷ್ಟೆಲ್ಲಾ ನಡೆಯುತ್ತಿರುವಾಗ ಕಾಯಿದೆ ಪ್ರಕಾರ ನಿರ್ಬಂಧಿಸಿದ್ದರೂ ಇಳಿಸುವ ವನದಲ್ಲಿ ಪೋಲೀಸಿನವರೂ, ಎಕ್ಸೈಜು ಸಿಬ್ಬಂದಿಯೂ ಇರುವುದಿಲ್ಲ. ಅಲ್ಲಗೇ ಹೋಗಿ ಕುಡಿಯುವುದಕ್ಕೂ, ತರುವುದಕ್ಕೂ ಸಾಧ್ಯವಿಲ್ಲವೇ ಎಂಬುದನ್ನು ಯೋಚನೆಮಾತಿ. ಪೋಲೀಸು ಮತ್ತು ಸ್ಪೆಷರ್ ಸಿಬ್ಬಂದಿ ಇಟ್ಟು ಬೇಕಾದಷ್ಟು ದರ್ಪದಿಂದ ಹತೋಟಿಗೆ ತರುವುದಕ್ಕೂ, ಅನ್ಯಾಯ ಅಥವಾ ಕಳ್ಳತನ ಯಾವ ವಿಧದಲ್ಲೂ ನಡೆಯದಿರುವಂತೆ ನೋಡಿಕೊಳ್ಳುವುದಕ್ಕೂ, ಮರವಿಂದ ಇಳಿಸಿದ ಸೇಂದಿ ಸೀದಾ ಗೊತ್ತಾದ ಜಾಗಗಳಿಗೆ ಸೇರುವಂತೆ ನಿಗಾ ಇಡುವುದಕ್ಕೂ ವ್ಯವಸ್ಥೆ ಮಾಡಿದೆಯೆಂದು ಸರ್ಕಾರದವರು ಹೇಳಬಹುದು. ಆದರೆ ಬೇಲಿಯೇ ಎದ್ದು ಹೊಲ ಮೇದರೆ ಕಾಯುವವರಾರು ? ಅಕ್ರಮವು ನಡೆಯುವ ಕಡೆ ತಡೆಮಾಡಲು ಹೋಗುವವರೇ ಸೇವಿಸುವುದಾದರೆ ಅದನ್ನು ಯಾವ ರೀತಿ ಹತೋಟಿಮಾಡುವುದಕ್ಕೆ ಸಾಧ್ಯ ? ಇಷ್ಟು ಸಿಬ್ಬಂದಿ ಇದ್ದಾಗ್ಗೂ ಕೂಡ ಈಗ ನೂರಾರು ಕೇಸುಗಳು ಬರುತ್ತಿರುವುದು ತಮಗೆ ಗೊತ್ತೇ ಇದೆ. ಹೀಗಿರುವಾಗ ಹತೋಟಿಗೆ ತರುವುದಕ್ಕೆ ಸಾಧ್ಯವೇ ಎಂಬುದು ದೀರ್ಘವಾಗಿ ಯೋಚನೆಮಾಡಬೇಕಾದ ವಿಚಾರ. ಇನ್ನೊಂದು ಅಂಶ, ಒಂದು ವೇಳೆ ನಿಜವಾಗಿಯೂ ಪೋಲೀಸ್ ಸಬ್ ಇನ್‌ಸ್ಪೆಕ್ಟರೋ ಅಥವಾ ದಫೇದಾರರೋ ಕೇಸು ಹಾಕಬಹುದು. ಆದರೆ ಕೋರ್ಟಿಗೆ ಹೋದಾಗ ಪೋಲೀಸಿನವರು ಯಾವತೀಕ್ಷ್ಣವಾದ ಉದ್ದೇಶದಿಂದ ಆ ಕೇಸನ್ನು ತಂದಿದ್ದಾರೆಂಬುದನ್ನು ವಿಚಾರ ಮಾಡದೆ ಬಹಳ ಲಘುವಾಗಿ ಪರಿಗಣಿಸಿ 15 ರಿಂದ 100ರೂಪಾಯಿಗಳೊಳಗೆ ಜುರ್ಮಾನೆ ಹಾಕುವುದಾಗಿ ಪತ್ರಿಕೆಗಳ ಮೂಲಕ ತಿಳಿದು ಬಂದಿದೆ. ಎಕ್ಸೈಜು ಕೇಸುಗಳಲ್ಲಿ ಶಿಕ್ಷೆಯಾಗಿರುವ ಸಂದರ್ಭಗಳು ಶೇಕಡ ಒಂದು ಕೂಡ ಇಲ್ಲ ಎಂಬ ಶಂಕೆಯಿದೆ. ಕಾನೂನಿಗೇನೂ ಅಭಾವವಿಲ್ಲ ; ಆರು ತಿಂಗಳವರೆಗೆ ಶಿಕ್ಷೆ ಎರಡುಸಾವಿರವರೆಗೆ ಜುರ್ಮಾನೆ ವಿಧಿಸಬಹುದೆಂದು ಕಾಣುತ್ತದೆ. ಆದಾಗ್ಯೂ ಸಹ ಈ ಸಮಾಜಘಾತುಕರನ್ನು ಕೋರ್ಟಿನವರು ತೀಕ್ಷ್ಣವಾಗಿ ಪರಿಗಣಿಸದೆ ಬಹಳ ಲಘುವಾಗಿ ಕಂಡು ಅಲ್ಪವಾದ ಶಿಕ್ಷೆಯನ್ನು ವಿಧಿಸುತ್ತಿರುವುದು ಕಳ್ಳಬಟ್ಟಿ ಇಳಿಸುವುದು, ಕಾಣದಂತೆ ಕುಡಿಯುವುದು ಮುಂತಾದುವನ್ನು ಮಾಡುವವರಿಗೆ ಬೆಂಬಲ ಕೊಟ್ಟಹಾಗಾಗಿದೆ. ಮತ್ತು ಅಲ್ಪವಾದ ಜುರ್ಮಾನೆಯನ್ನು ಕೋರ್ಟಿನಿಂದ ಹೊರಗೆ ಬರುವುದರೊಳಗೇ ಕೊಡುವುದಕ್ಕೂ ಅನೇಕರು ಸಿದ್ಧವಾಗಿರುತ್ತಾರೆ. ಇದರಿಂದ ಒಂದಕ್ಕೆ ಎರಡರಷ್ಟು ಆದಾಯ ವಿರುವುದರಿಂದ ಕಳ್ಳ ವ್ಯಾಪಾರ ಮಾಡುವವರೂ ಹಿಂಜರಿಯುವುದಿಲ್ಲ. ಪೋಲೀಸು ಅಥವಾ ಎಕ್ಸೈಜು ಸಿಬ್ಬಂದಿಯಿಂದ ಏನು ಅನ್ಯಾಯ ನಡೆಯಬಹುದೆಂಬುದನ್ನು ವಿಚಾರಮಾಡಿ ಆ ರೀತಿನಡೆಯದಂತೆ ನೋಡಿಕೊಳ್ಳುವುದೂ ಮತ್ತು ಶಿಕ್ಷೆಯನ್ನು ಹೆಚ್ಚಾಗಿ ಕೊಡುವಂತೆ ಮಾಡುವುದೂ ಮಾದರಿ ಸರ್ಕಾರದ ಕರ್ತವ್ಯ. ಆ ರೀತಿ ನೋಡಿಕೊಳ್ಳುತ್ತಾರೆಂಬ ಭರವಸೆಯಿರಬೇಕು. ಈಗ ಮೂರು ವರ್ಷಗಳ ಅನುಭವದಿಂದ ಮದ್ಯಪಾನ ಜಾರಿಗೆ ಬಂದಾಗಿನಿಂದ ಕಂಡು ಬಂದ ನ್ಯೂನತೆಗಳನ್ನು ಹೇಳುತ್ತಿದ್ದೇನೆ. 1948 ಮತ್ತು 1949ನೆಯ ಇಸವಿಯಲ್ಲಿ ತಾಲ್ಲೂಕು ಮತ್ತು ಜಿಲ್ಲಾ ಪಾನನಿರೋಧ ಸಮಿತಿಗಳನ್ನು ಸರ್ಕಾರದವರು ರಚಿಸಿದ್ದಾರೆ. ಜವಾಬ್ದಾರಿಯುಳ್ಳ ಆ ಸಮಿತಿಯಲ್ಲಿ ನಾನು ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದೇನೆ. ಆ ಸಮಿತಿಯವರ ಸಲಹೆಯಂತೆ ಪಾನ ನಿರೋಧವನ್ನು ಸೂಕ್ತವಾಗಿ ಜಾರಿಗೆ ತರಬೇಕೆಂಬುದೇ ಸರ್ಕಾರದ ಸದುದ್ದೇಶ. ಆದರೆ ಆ ವಿಧವಾದ ಸಮಿತಿಗಳು ಸರ್ಕಾರಕ್ಕೆ ಮಾಡಿರುವ ಸಲಹೆಗಳಿಗೆ ಸರ್ಕಾರ ಕಿಂಚಿತ್ತಾದರೂ ಗಮನ ಕೊಡದಿರುವುದು ಬಹಳ ಶೋಚನೀಯವಾದುದು. ಆ ಸಮಿತಿಯವರು ಕೋರ್ಟಿನವರು ಅನುಸರಿಸುವ ನೀತಿ ಸರಿಯಲ್ಲ, ಅದರಿಂದ ಬಹಳ ಕೊಂದರೆ, ಇದನ್ನು ಆಲೋಚಿಸಿ ಸ್ವಲ್ಪ ಜಾಸ್ತಿಯಾಗಿ ಶಿಕ್ಷೆಯನ್ನು ವಿಧಿಸಬೇಕು ಎಂದು ಶಿಫಾರ್ಸು ಮಾಡಿದ್ದರೂ ಈ ಮೂರು ವರ್ಷಗಳಿಂದ ಸರ್ಕಾರದವರು ಸರಿಯಾದ ಕಾರ್ಯಕ್ರಮ ಕೈಗೊಂ

(SRI V. MASIYAPPA).

ಡಿಲ್ಲ. ಈಗ ನಿರೋಧ ಮಾಡಿರುವ ಕಡೆ ಸೇಂದಿ ಇಳಿಸಿ ಬೇಕಾದ ಕಡೆಗೆ ತರಿಸಿಕೊಳ್ಳುವುದಕ್ಕೆ ಏರ್ಪಾಡುಮಾಡಿರುವಂತೆ, ಹಾಗೆ ಇಳಿಸಿದ ಮದ್ಯ ಬೇಕಾದ ಸ್ಥಳಕ್ಕೆ ನೇರವಾಗಿ ಹೋಗಿ ಹಂಚಿಕೆಯಾಗುತ್ತಾ ಇದೆಯೆ ಎಂಬುದನ್ನು ನಂಬುವುದು ಬಹಳ ಕಷ್ಟ ಎಂದು ಹೇಳಬೇಕಾಗುತ್ತದೆ. ಈಗ ಹಿರಿಯೂರಿನಲ್ಲಿ ಇಳಿಸಿ ಬೆಂಗಳೂರಿಗೆ ಸಾಗಿಸಬೇಕು. ಹಿರಿಯೂರು ವನದಲ್ಲಿ ಬಹಳ ಕಳ್ಳತನ ನಡೆಯುತ್ತಿದೆ. ಅಲ್ಲಿಂದ ತುಮಕೂರು ಹಾದು ಬೆಂಗಳೂರಿಗೆ ಬರುವಾಗ ನಡುವೆ ನೂರಾರುಕಡೆ ಹಂಚಿಕೆಯಾಗುತ್ತದೆ. ರಸ್ತೆಮಗ್ಗುಲಲ್ಲಿ ಸಣ್ಣ ಸಣ್ಣ ಅಂಗಡಿಗಳನ್ನಿಟ್ಟು ಸೇಂದಿ ಹಂಚಿಕೆಯಾಗುತ್ತಿದೆ. ಹೀಗಾಗುವುದರಿಂದ ಬೆಂಗಳೂರು ಜಿಲ್ಲೆಯ ಜೊತೆಗೆ ತುಮಕೂರು ಮತ್ತು ಚಿತ್ರದುರ್ಗ ಜಿಲ್ಲೆಗಳೂ ವೆಟ್ ಏರಿಯಾಕ್ಕೆ ಸೇರಿದ ಹಾಗಾಗುತ್ತದೆ. ಆದ್ದರಿಂದ ಈಗಲಾದರೂ ಎಲ್ಲಿ ಸೇಂದಿ ಸಾಕಷ್ಟು ಸಿಕ್ಕದೆ ಹೊರಗಿನಿಂದ ತರಿಸಿಕೊಳ್ಳ ಬೇಕಾಗುತ್ತದೋ ಅಲ್ಲಿ ಪಾನನಿರೋಧ ಮಾಡಿರುವ ಪ್ರದೇಶದಿಂದ ಇಳಿಸಿ ತರಿಸಿಕೊಳ್ಳಬೇಕಾದ ಸಂದರ್ಭದಲ್ಲಿ ಬೇಕಾದ ಸ್ಥಳಕ್ಕೆ ಕೇವಲ ಹತ್ತಿರದಲ್ಲಿ ಸಿಕ್ಕುವ ಜಾಗದಿಂದ ಮಾತ್ರ ಸರಬರಾಯಿ ಮಾಡಿಕೊಳ್ಳಲು ಏರ್ಪಾಡುಮಾಡಿಕೊಳ್ಳಬೇಕು. ದೂರ ಪ್ರದೇಶದಿಂದ ತರಲು ಅವಕಾಶ ಕೊಡಬಾರದು ಎಂದು ಪ್ರಾರ್ಥನೆ ಮಾಡುತ್ತೇನೆ. ಗೋರಿಬಿದನೂರು ಬೆಂಗಳೂರಿಗೆ ಸಮೀಪವಾಗಿದೆ; ಅಲ್ಲಿ ಬೇಕಾದಷ್ಟು ಮರಗಳಿವೆ. ಅಂಥ ಕಡೆಯಿಂದ ತರಲು ಅವಕಾಶಕೊಡಿ; ಹಾಗೆ ಮಾಡದಿದ್ದರೆ ಕಂಟ್ರಾಕ್ಟರನ್ನು ಅಥವಾ ಬೇರೆಯವರನ್ನು ಅನುಕೂಲ ಪಡಿಸಿದ ಹಾಗಾಗುತ್ತದೆಯೇ ಏನಾ ಹಿಂದುಳಿದ ಜನಾಂಗಕ್ಕೆ ಸಹಾಯ ಮಾಡಿದಂತಾಗುವುದಿಲ್ಲ. ಪಾನನಿರೋಧ ಜಾರಿಯಲ್ಲಿರುವ ಕಡೆ ಪಾನಮಾಡುವ ನಿಮ್ನ ವರ್ಗದವರ ಮತ್ತು ಹಿಂದುಳಿದ ಪಂಗಡಗಳ ಹಿತಕ್ಕೆ ಧಕ್ಕೆ ತರಬಾರದು. ಅವರ ಹಿತ ಚಿಂತನೆಯಿಂದ ಪಾನ ನಿರೋಧವನ್ನು ಜಾರಿಗೆ ತರಲಾಗಿದೆ ಯೆಂಬುದನ್ನು ಗಮನದಲ್ಲಿಡಬೇಕು.

1-30 P. M.

ಪಾನ ನಿರೋಧ ಜಾರಿಗೆ ಬಂದಾಗಿನಿಂದ ನಮಗೆ ಕೂಲಿಯವರು ಸರಿಯಾಗಿ ಸಿಕ್ಕುತ್ತಾ ಇಲ್ಲ. ಏಕೆಂದರೆ ಅವರಿಗೆ ಬರತಕ್ಕ ಆದಾಯ ಅವರಿಗೆ ಸರಿಹೋಗುತ್ತದೆ. ತಾವು ಕೊಡತಕ್ಕ ಡಿಪ್ರೆಸ್ಡ್ ಕ್ಲಾಸ್ ಗ್ರ್ಯಾಂಟ್ ನಿಂದ ಅವರು ಮನೆ ಮಠ ಕಟ್ಟಿಕೊಳ್ಳುತ್ತಾರೆ. ಆದ್ದರಿಂದ ಕೂಲಿಯವರು ಸಿಕ್ಕುವುದು ಅಭಾವವಾಗಿದೆ. ಅದರೂ ಪರವಾಗಿಲ್ಲ, ಅವರು ಕುಡಿಯುವುದನ್ನು ಬಿಟ್ಟು ಹಣವುಳಿಸಿಕೊಳ್ಳಲಿ ಎಂಬುದೇ ನಮ್ಮ ಆಶೆ. ಅದಕ್ಕೆ ವ್ಯತಿರಿಕ್ತವಾಗಿ ಹಣ ಖರ್ಚುಮಾಡಿಕೊಳ್ಳುವುದಕ್ಕೆ ತಾವು ಬೆಂಬಲಕೊಟ್ಟಂತಾಗುತ್ತದೆ. ಆದರಿಂದ ನಾನು ವಿನಯದಿಂದ ಪ್ರಾರ್ಥಿಸತಕ್ಕದ್ದೇನೆಂದರೆ, ಖಂಡಿತವಾಗಿಯೂ ತಾವು ಇದಕ್ಕೆ ಬೆಂಬಲಕೊಡಬೇಡಿ. ಬಹಳ ಅನ್ಯಾಯವಾಗುತ್ತದೆ. ಈ ಆಜ್ಞೆಯನ್ನು ಜಾರಿಗೆಕೊಡುವುದನ್ನು ನಿಲ್ಲಿಸಿ. ಈಗಾಗಲೇ ಅಲ್ಲಲ್ಲಿ ವನಗಳಲ್ಲಿ ಮರಕಟ್ಟಲು ಸಾಮಾನು ಸಂಗ್ರಹಿಸಿ ಕೊಳ್ಳುತ್ತಾ ಇದ್ದಾರೆ. ಹೆಂಡವನ್ನು ಇಳಿಸುವುದಕ್ಕೆ ಪ್ರಾರಂಭ ಮಾಡುವುದಕ್ಕೆ ಮುಂಚೆಯೇ ತಾವು ಒಂದು ಆಜ್ಞೆಮಾಡಿ ಇದನ್ನು ನಿಲ್ಲಿಸಿದ್ದೇವೆ ಎಂದು ಸ್ಪೇಷಲ್ ಆರ್ಡರ್ ದಯಪಾಲಿಸಿದ್ದೇ ಆದರೆ ಹಿಂದುಳಿದ ಜನಾಂಗಕ್ಕೆ ಬಹಳ ಅನುಕೂಲ ಮಾಡಿಕೊಟ್ಟಹಾಗಾಗುತ್ತದೆ. ಆದ್ದರಿಂದ ದಯವಿಟ್ಟು ಈ ವಿಧವಾದ ಆಜ್ಞೆಯನ್ನು ಕೊಡದೇಕೆಂದು ಪ್ರಾರ್ಥಿಸುತ್ತೇನೆ.

MR. SPEAKER.—Resolution moved—

"That this Assembly is of the opinion that the recent order authorising the Deputy Commissioners to issue permission to tap toddy in the seven taluks which have gone dry be withdrawn in the interests of the poor depressed class people of those taluks as also the successful working of prohibition in the area."

I would also wish to draw the attention of the Hon'ble Members of this Assembly to Rule 113 of the Rules of Procedure and Conduct of Business of this House which reads as follows

"No speech on a resolution, except with the permission of the Speaker, shall exceed fifteen minutes in duration

Provided that the mover of a resolution when moving the same and the Minister concerned when speaking for the first time, may speak for thirty minutes or for such longer time as the Speaker may permit."

So no speech should exceed fifteen minutes.

ಶ್ರೀ ಜಿ ದುಗ್ಗಪ್ಪನವರು. (ಹೊಳಲ್ಕೆರೆ ಅನುಸೂಚಿತ ಜಾತಿಗಳು).—ಸ್ವಾಮಿ, ಈಗತಾನೆ ನನ್ನ ಸ್ನೇಹಿತರು ಮಂಡಿಸಿದ ಈ ಠರಾವನ್ನು ಸ್ವಾಗತಿಸುತ್ತಾ ಇದನ್ನು ನಾನು ಅನುಮೋದಿಸುತ್ತೇನೆ. ನನ್ನ ಸ್ನೇಹಿತರು ಅವರ ಭಾಷಣದಲ್ಲಿ ಸರ್ಕಾರದವರು ಈ ಆಜ್ಞೆಯನ್ನು ಜಾರಿಗೆ ಕೊಟ್ಟಲ್ಲಿ ಅದರಿಂದ ಜನರ ಮೇಲೆ ಆಗತಕ್ಕ ದುಷ್ ಪರಿಣಾಮ ಏನು ಎಂಬುದನ್ನು ವಿಸ್ತಾರವಾಗಿ ತಿಳಿಸಿದ್ದಾರೆ. ಚಿತ್ರದುರ್ಗ ಜಿಲ್ಲೆಯ ಹಿರಿಯೂರು ತಾಲ್ಲೂಕು ಒಂದರಲ್ಲೇ ಮರಗಳನ್ನು ಕಟ್ಟುವ ಬಗ್ಗೆ ಸರ್ಕಾರದವರು ಅಪ್ಪಣೆಕೊಟ್ಟಿದ್ದಾರೆ ಎಂದು ಒಂದು ವದಂತಿ ತಿಳಿದ ಕೂಡಲೇ ಅದರ ದುಷ್ ಪರಿಣಾಮವಾಗಿ ಹೊಳಲ್ಕೆರೆ-ತಾಲ್ಲೂಕಿನಲ್ಲಿ ಕಳ್ಳತನದಿಂದ ಮರಗಳನ್ನು ಕಟ್ಟುವುದಕ್ಕೆ ಪ್ರಾರಂಭವಾಗಿದೆ. ಹೀಗೆ ಕಳ್ಳತನದಿಂದ ಮರಗಳನ್ನು ಕಟ್ಟಿ ಒಂದು ಶೀಸೆಗೆ ಎಂಟುಆಣೆಯಂತೆ ಹೆಂಡವನ್ನು ಮಾರಿರತಕ್ಕ ಕೆಲವು ರುಜುವಾತುಗಳು ಬಂದಿವೆ. ಮತ್ತು ಅಂಥ ಅಪರಾಧಿಗಳನ್ನು ಕೋರ್ಟಿನ ಮುಂದೆ ಎಳೆದು ಸರಿಯಾದ ಶಿಕ್ಷೆ ಕೊಡಲಾಗಿದೆ. ಅದಕ್ಕೆಕಾರಣ ಇಷ್ಟೆ. ನಮ್ಮ ತಾಲ್ಲೂಕಿನಲ್ಲಿರತಕ್ಕ ಹಳ್ಳಿಗಳಲ್ಲಿ ಪುನಃ ಮರಗಳನ್ನು ಕಟ್ಟತಕ್ಕದ್ದು ಜಾರಿಗೆ ಬಂದಿದೆ. ಅದೇ ರೀತಿ ಅವರ ತಾಲ್ಲೂಕಿಗೂ ಬರಬಹುದು ಎಂದು ಅದಷ್ಟು ಬೇಗ ಮರಗಳನ್ನು ಕಟ್ಟಬೇಕೆಂಬ ಭಾವನೆ ಎಲ್ಲರಲ್ಲೂ ಹುಟ್ಟುತ್ತದೆ. ಆ ರೀತಿ ಹುಟ್ಟಿ ಕಳ್ಳತನದಿಂದ ಮರಕಟ್ಟುವುದು ಪ್ರಾರಂಭವಾಗುತ್ತದೆ. ಇದೆಲ್ಲಕ್ಕೂ ಮೂಲ ಕಾರಣ ದೂರಾಲೋಚನೆಯಿಲ್ಲದೆ ಇಂಥಾ ಆಜ್ಞೆಗಳನ್ನು ಜಾರಿಮಾಡುವುದರಿಂದ ಎಂಬುದನ್ನು ಸರ್ಕಾರದವರ

ಗಮನಕ್ಕೆ ತರುತ್ತೇನೆ. ಯಾವ ಸದುದ್ದೇಶದಿಂದ ನಾವು ಸಂಸ್ಥಾನದಲ್ಲಿ ಪಾನ ನಿರೋಧವನ್ನು ತಂದಿದ್ದೇವೆಯೋ ಅದನ್ನು ಎಷ್ಟೇ ಕಷ್ಟವಾದರೂ ಚಿಂತೆಯಿಲ್ಲ ನಡೆಸಿಕೊಂಡು ಬರತಕ್ಕದ್ದು ನಮ್ಮ ಧ್ಯೇಯವಾಗಿರಬೇಕು. ಒಂದು ವೇಳೆ ಜಾರಿಯಲ್ಲಿಲ್ಲದೆ ಇರತಕ್ಕ ಪ್ರದೇಶದಲ್ಲಿ ಮರಗಳನ್ನು ಕಟ್ಟತಕ್ಕದ್ದನ್ನು ಹೆಚ್ಚು ಮಾಡತಕ್ಕ ಅವಶ್ಯಕತೆಯಿದೆ ಎಂದು ಹೇಳೋಣ. ಅಂಥ ಸಂದರ್ಭದಲ್ಲಿ ಆ ಸ್ಥಳಕ್ಕೆ ಹತ್ತಿರದಲ್ಲಿರತಕ್ಕ ಪ್ರದೇಶಗಳಿಗೆ ಮಾತ್ರ ಅವಕಾಶ ಕೊಡಬೇಕೇ ಏನಾ ನೂರಾರು ಮೈಲಿ ದೂರದ ತಕ್ಕ ಸ್ಥಳಗಳಿಗೆ ಮರ ಕಟ್ಟಲಿಕ್ಕೆ ಅವಕಾಶ ಕೊಡಕೂಡದು. ಕೊಟ್ಟಲ್ಲಿ ಅದರಿಂದ ಒಂದ ಅಂಶ ವ್ಯಕ್ತವಾಗುತ್ತದೆ. ಅದೇನೆಂದರೆ ಆ ಮರಗಳನ್ನು ಕಟ್ಟತಕ್ಕಶೇಂದಿ ಕಂಟ್ರಾಕ್ಟರುಗಳನ್ನು ಸರ್ಕಾರದವರು ಪುನರಾಯಿಸುತ್ತಾರೆ ಎಂಬ ಭಾವನೆ ಬರುತ್ತದೆ. ನೂರಾರು ಮೈಲಿಯಿಂದ ಬೆಂಗಳೂರು ನಗರಕ್ಕೆ ಸಾಗಿಸುವಾಗ ದಾರಿಯಲ್ಲಿ ಅನೇಕ ಕಡೆ ಶೇಂದಿಯನ್ನು ಕಳ್ಳತನದಿಂದ ಮಾರುವುದಕ್ಕೆ ಅವಕಾಶವಾಗುತ್ತದೆ. ಈ ರೀತಿ ಅಪ್ರತ್ಯಕ್ಷವಾಗಿ ಯಾವ ಒಂದು ತತ್ವವನ್ನು ಏರ್ಪೋದಿಸಿದ್ದೆವೋ ಆ ತತ್ವವನ್ನು ಪೋಷ್ಣಾಹಿಸಿದ ಹಾಗಾಗುತ್ತದಲ್ಲವೇ ಎಂದು ಸರ್ಕಾರದವರನ್ನು ಕೇಳುತ್ತೇನೆ. ಇದರ ಕೆಟ್ಟ ಪರಿಣಾಮವನ್ನು ನಾನು ಹೆಚ್ಚು ಹೇಳಬಯಸದೆ ಸರ್ಕಾರದವರಲ್ಲಿ ಒಂದು ವಿಷಯ ಮನವಿ ಮಾಡಿಕೊಳ್ಳುತ್ತೇನೆ ಏನೆಂದರೆ : ಅಂಥಾ ಒಂದು ಅವಶ್ಯಕತೆ ಸರ್ಕಾರದವರಿಗೆ ಕಂಡು ಬಂದಲ್ಲ ಪಾನ ನಿರೋಧ ಜಾರಿಯಲ್ಲಿರತಕ್ಕಪ್ರದೇಶಗಳಿಗೆ ಮರಕಟ್ಟತಕ್ಕ ಅಪ್ಪಣೆ ಖಂಡಿತ ಕೊಡಕೂಡದು. ಒಂದು ವೇಳೆ ಕೊಟ್ಟಲ್ಲಿ ಪಾನನಿರೋಧ ಇಲ್ಲದೇ ಇರುವ ಕಡೆ ಅದಕ್ಕೆ ಹತ್ತಿರ ಇರತಕ್ಕ ಪ್ರದೇಶಗಳಿಗೆ ಮಾತ್ರ ಕೊಡಿ. ಏಕೆಂದರೆ ದೂರ ಪ್ರದೇಶಗಳಿಗೆ ಕೊಟ್ಟಲ್ಲಿ ಅಲ್ಲಿನ ಜನಗಳು ಕುಡುಕರಾಗುತ್ತಾರೆ. ಪಾನ ನಿರೋಧ ಇದ್ದರೂ ಕಳ್ಳತನದಿಂದ ಕುಡಿಯಬಹುದು. ಆದ್ದರಿಂದ ಈ ಒಂದು ತತ್ವವನ್ನು ನೆನಪಿನಲ್ಲಟ್ಟುಕೊಂಡು ಘನ ಸರ್ಕಾರದವರು ಇಂಥಾ ಅಜ್ಞೆ ಹೊರಡಿಸುವಾಗ ದೂರಾಲೋಚನೆಯಿಂದ ಹೊರಡಿಸಬೇಕೆಂದು ಹೇಳಿ ಈಗ ಮಂಡಿಸಿರುವ ಈ ಠರಾವನ್ನು ತುಂಬಾ ಸಂತೋಷದಿಂದ ಅನುಮೋದಿಸುತ್ತೇನೆ.

ಶ್ರೀ ಬಿ. ಹುಚ್ಚೇಗೌಡರು (ತುರುವೇಕೆರೆ).—ಸ್ವಾಮಿ, ಈ ನಿರ್ಣಯವನ್ನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇನೆ ಮತ್ತು ಈ ನಿರ್ಣಯವನ್ನು ಮಂಡಿಸಿದ ಶ್ರೀಮಾನ್ ಮಸಿಯಪ್ಪನವರನ್ನು ಅಭಿನಂದಿಸುತ್ತೇನೆ. ಅಷ್ಟೇಅಲ್ಲದೆ ಇದಕ್ಕೆ ಅನುಮೋದನೆ ಕೊಟ್ಟ ಶ್ರೀಮಾನ್ ದುಗ್ಗಪ್ಪನವರನ್ನು ಸಹ ಅಭಿನಂದಿಸಬೇಕಾಗಿದೆ. ಮುಖ್ಯವಾದ ಒಂದು ಇಂಥ ನಿರ್ಣಯ ಅದರಲ್ಲೂ ದೊಡ್ಡ ಜಕ್ತದವರ ಕಡೆಯವರಿಂದ ಬರುವುದು ಬಹಳ ಅಪರೂಪ. ಯಾವ ಧ್ಯೇಯದಿಂದ ಚುನಾವಣೆಗೆ ನಿಂತರೋ, ತಮ್ಮ ಚುನಾವಣೆ ಘೋಷಣೆ ಏನಿತ್ತೋ, ತಾವು ಹಿಂದೆ ಕಾಂಗ್ರೆಸ್‌ಪಕ್ಷದವರಾಗಿದ್ದು ಜೈಲಿಗೆಹೋಗಿ ಏಕೆ ತ್ಯಾಗ ಮಾಡಿದರೋ—ಈಜಲುಮರ ಕಡಿದು ಜೈಲಿಗೆ ಹೋಗಿದ್ದು ಉಂಟು—ತಮಗೆ ಯಾರಿಂದ ಉಪದೇಶವಾಯಿತೋ ಅಂಥಾ ಮಹಾತ್ಮರ ಹಿಂಬಾಲಕರಾಗಿದ್ದು ಯಾವ ಧ್ಯೇಯವನ್ನು ಹೇಳುತ್ತಾ ಇದ್ದಿರೋ ಅವೆಲ್ಲಕ್ಕೂ ಈಗ ವ್ಯತಿರಿಕ್ತವಾಗಿ ಮಾಡುತ್ತಾ ಇರುವುದರಿಂದ ಹೇಳಬೇಕಾಗಿದೆ. ಅಂಥಾ ಒಂದು ಧ್ಯೇಯಸಾಧನೆಗೆ ಈಗ ತಮ್ಮಿಂದಲೇ ತಡೆಯುಂಟಾಗುತ್ತಾ ಇರುವುದರಿಂದ ಈ ನಿರ್ಣಯವನ್ನು ತಂದಿದ್ದಾರೆ. ಇದಕ್ಕೆ ನಾನು ಸಂತೋಷಪಡುತ್ತೇನೆ. ಸ್ವಾಮಿ, ಮುಖ್ಯವಾಗಿ ಈಗ ನಾವು ಮೈಸೂರುದೇಶದಲ್ಲಿ ಕುಡಿತವನ್ನು ನಿಲ್ಲಿಸಬೇಕು, ಪಾನ ನಿರೋಧವನ್ನು ಜಾರಿಗೆ ತರಬೇಕು ಎಂಬತತ್ವವನ್ನು ಸಂಪೂರ್ಣವಾಗಿ ಒಪ್ಪಿಕೊಂಡಿದ್ದೇವೆ. ಅದರಂತೆ 5 ಡಿಸ್ಟ್ರಿಕ್ಟಿನಲ್ಲಿ ಪಾನನಿರೋಧ ಆಚರಣೆಗೆ ಬಂದಿದೆ. ಹೋದ ವರ್ಷವೂಕೂಡ ಈ ತತ್ವವನ್ನು ಮುಂದುವರಿಸಿ ಬೇಲೂರು ಸಕಲೇಶಪುರಗಳಲ್ಲಿ ಜಾರಿಗೆ ತಂದೆವು. ಈ ವರ್ಷ ಅದೇನೇ ಇದ್ದರೂ ನಮ್ಮ ಮುಖ್ಯ ಮಂತ್ರಿಗಳೂ ಯಾವ ವಿಚಾರವನ್ನೂ ಹೇಳಲಿಲ್ಲ, ಮುಂದೆ ಹೇಳುತ್ತಾರೆಂದು ನಿರೀಕ್ಷಣೆ ಮಾಡುತ್ತೇನೆ. ಏಕೆಂದರೆ ಆ ತತ್ವವನ್ನು ಮುಂದುವರಿಸಬೇಕು—ಇಲ್ಲವೇ ಬಿಟ್ಟು ಬಿಡಬೇಕು—ಈ ಎರಡರಲ್ಲೊಂದು ಖಚಿತವಾಗಿ ಗೊತ್ತಾಗಬೇಕು. ಬಿಟ್ಟುಬಿಡುವುದಿಲ್ಲವೆಂದು ಹೇಳುವುದಾದರೆ, ಅದರ ಸೂಚನೆಯನ್ನು ಅಲ್ಪಸ್ವಲ್ಪವಾದರೂ ಕೊಡುವುದು ಅವರ ಕರ್ತವ್ಯ. ನೋಡೋಣ.

ಈ ನಿರ್ಣಯವನ್ನು ಸಭೆಯ ಮುಂದಿಡುತ್ತಾ ಶ್ರೀಮಾನ್ ಮಸಿಯಪ್ಪನವರು ಕೆಲವು ವಿಚಾರಗಳನ್ನು ಹೇಳಿದ್ದಾರೆ. ಈಗ ಪಾನನಿರೋಧ ಜಾರಿಗೆ ಬಂದು ನಾಲ್ಕು ವರ್ಷವಾಯಿತು. ಈ ನಾಲ್ಕು ವರ್ಷಗಳಿಂದಲೂ ತಮ್ಮ ಪೂರ್ಣ ಅನುಭವವನ್ನು ಸದಸ್ಯರು ಸಭೆಯ ಮುಂದಿಡುತ್ತಾ ಬಂದಿದ್ದಾರೆ. ಹೀಗೆ ಒಂದು ಕಡೆ ಕುಡಿತವಿರುವುದು, ಇನ್ನೊಂದು ಕಡೆ ಇಲ್ಲದಿರುವುದು ಸರಿಯಲ್ಲ. ಪಾನನಿರೋಧವನ್ನು ಕಾನೂನಿನಿಂದಲೇ ನಿಲ್ಲಿಸಬೇಕೆಂಬುದನ್ನು ನಾನು ಹೇಳುತ್ತೇನೆ. ಇದೊಂದು ದುಷ್ಟಟ. ಎಷ್ಟು ಬುದ್ಧಿವಂತಿಕೆಯಿಂದ ಈ ಚಟವನ್ನು ಬಿಟ್ಟುಬಿಡಬೇಕೆಂದು ಪ್ರಯತ್ನಮಾಡಿದರೂ, ಅವರು ಓಡಾಡತಕ್ಕ ವಾತಾವರಣ, ಸಂದರ್ಭ ಸನ್ನಿವೇಶಗಳಿಂದ ಮನಸ್ಸು ಸೋತುಹೋಗಿ ಈ ಚಟದ ಬಲೆಗೆ ಬೀಳುತ್ತಾರೆ. ಅದರಲ್ಲೂ ಕುಡಿಯತಕ್ಕವರು ಶೇಕಡ 90 ಪಾಲು ಬರುವರೆ. ಆ ಬಡ ಜನರ ಉದ್ಧಾರಕ್ಕಾಗಿ ಈ ಸಭೆಯವರು ಹಿಂದೆ ಶಿಫಾರಸು ಮಾಡಿದರು, ಪಾನನಿರೋಧ ಜಾರಿಗೆ ತರಬೇಕು ಎಂದು. ಹೀಗಿರುವಲ್ಲ ಪಾನನಿರೋಧ ಜಾರಿ ಮಾಡಿರುವ ಪ್ರದೇಶದ ಪಕ್ಕದಲ್ಲೇ ಹೆಂಡ ಸಾರಾಯಿ ಸಿಕ್ಕಲಿಕ್ಕೆ ಒಂದು ಅವಕಾಶವಿದ್ದರೆ, ಕುಡಿತ ಯಾವ ರೀತಿ ತಪ್ಪಿಸುವುದಕ್ಕೆ ಸಾಧ್ಯ? ಅಷ್ಟು ಸುಲಭ ಸಾಧ್ಯವಾಗಿದ್ದರೆ, ಹಿಂದಿನಿಂದ ಇದನ್ನು ಬಡವರು ತಾವೇ ತಾವಾಗಿ ಬಿಟ್ಟುಬಿಡುವುದಕ್ಕೆ ಪ್ರಯತ್ನಪಡಬಹುದಾಗಿತ್ತು. ಆದರೆ ಮನುಷ್ಯನ ಈ ದುಷ್ಟಟ ಅಂಥಾದ್ದು; ಹಾಗೆ ಸಾಧ್ಯವಿಲ್ಲ. ಕಾನೂನಿನಿಂದಲೇ ಇದನ್ನು ನಿಲ್ಲಿಸಬೇಕು. ಅದರಂತೆ ಕೆಲವು ಪ್ರದೇಶಗಳಲ್ಲಿ ಕಾನೂನನ್ನು ಜಾರಿಗೆ ತಂದಿರಿ. ಆದರೆ, ಆ ಪ್ರದೇಶದಲ್ಲಿ ಹತ್ತಿರದಲ್ಲೇ ಎದುರಿಗೇ ಅಂಗಡಿಗಳಿದ್ದರೆ ಏನಾಗುತ್ತದೆಂಬುದನ್ನು ಹೇಳಬೇಕಾಗಿಲ್ಲ. ಪಾನನಿರೋಧ ತಾಲೂಕುಗಳಿಗೆದ್ದರೆ, ಕುಡಿಯುವವರು ಡಾಬನುಹೇಟೆಯಲ್ಲಿ ಹೆಂಡಸಿಕ್ಕುವಹಾಗಿದ್ದರೆ ಅಲ್ಲಗೇ ಹೋಗಿ ಕುಡಿದೇ ಕುಡಿಯುತ್ತಾರೆ. ತಾಲೂಕುಗಳಲ್ಲಿ ಊರಮುಂದೆಯೇ ಹೆಂಡ ಇದ್ದರೆ, ಹೇಗೆ ಬಿಡುತ್ತಾರೆ! Staff ನವರೂ ಸಹ ಈ ಚಟದಿಂದ ತಪ್ಪಿಸಿಕೊಂಡಿದ್ದಾರೆಂದು ಹೇಳುವುದಕ್ಕಾಗುವುದಿಲ್ಲ. ಅವರೆಲ್ಲರೂ ನಿಸ್ಪೃಹರೆಂದು ಹೇಳುವುದಕ್ಕಾಗುವುದಿಲ್ಲ. ಆದ್ದರಿಂದಲೇ ಕುಡಿತ ಸಾರೋದ್ಧಾರವಾಗಿ ನಿಂತೆಯುವುದಕ್ಕೆ ಅವಕಾಶವಾಗುತ್ತದೆ. ಯಾವಾಗ ಕುಡಿತ ನಿಲ್ಲಿಸಿದ ಕಡೆ ಹೆಂಡ ಇಳಿಸುವುದಕ್ಕೆ ಪ್ರಾರಂಭವಾಗುತ್ತದೆಯೋ, ಅಲ್ಲ ಕುಡಿತ ನಡೆಯುವುದೇ ಇಲ್ಲ ಎಂದು ಹೇಳಲು ಸಾಧ್ಯವಿಲ್ಲ. ಅದನ್ನು ಮುಖ್ಯವಾಗಿ ತಾವು ಗಮನಿಸಬೇಕು.

(ಶ್ರೀ ಬಿ. ಹುಚ್ಚೇಗೌಡರು).

ಇನ್ನೊಂದೇನೆಂದರೆ, ಈಗ ಪಾನನಿರೋಧ ನಮ್ಮ ಡಿಸ್ಟ್ರಿಕ್ಟಿನಲ್ಲಿದೆ. ಇದರಿಂದಾಗಿ, ಮಾನ್ಯ ಸದಸ್ಯರು ಹೇಳಿದ ಹಾಗೆ, ಅಲ್ಲಿ ಕೂಲಿಯವರು ಸಿಕ್ಕುವುದೇ ಕಷ್ಟವಾಗಿದೆ. ಏಕೆಂದರೆ, ಎಲ್ಲಾ ಅರಸೀಕೆರೆ ಕಡೆಗೆ ಹೋಗಿದ್ದಾರೆ. ಏಕೆ ? ಅಲ್ಲಿ ಕುಡಿತ ಇದೆ. ಎಲ್ಲಿ ಕುಡಿತ ಇರುತ್ತದೆಯೋ ಅಲ್ಲಿ ಅವರು ಹೋಗಿ ಸೇರುತ್ತಾರೆ. ಆದ್ದರಿಂದ ಈಗ ಪ್ರತಿಯೊಬ್ಬನೂ ಒಂದು ಅಂಶವನ್ನು ಗಣನೆಗೆ ತೆಗೆದುಕೊಳ್ಳಬೇಕು. ಕುಡಿತ ನಿಲ್ಲುವುದಕ್ಕೆ ಮುಂಚೆ ಆ ಜನರ ಸ್ಥಿತಿಗತಿ ಹೇಗಿತ್ತು, ಈಗ ಹೇಗಿದೆ ಎಂಬುದನ್ನು. ನಾನು ನೋಡಿದಮಟ್ಟಿಗೆ ಪಾನ ನಿರೋಧ ಸರಿಯಾಗಿ ಜಾರಿಯಲ್ಲಿರುವ ಕಡೆ ಶೇಕಡ 90 ಜನರು ಕುಡಿತದ ಚಟ ಬಿಟ್ಟು ಸಂಸಾರಗಳನ್ನು ಸುಖವಾಗಿ ನಡೆಸಿಕೊಂಡು ಹೋಗುತ್ತಿದ್ದಾರೆ. ಕೇವಲ 10 ಪಾಲು ಜನರು, ಹಣಸ್ವಲ್ಪ ಇರುವವರು ಡಾಬಸ್ ಪೇಟೆಗೆ, ಹಾಸನ ಡಿಸ್ಟ್ರಿಕ್ಟಿಗೆ ಹೋಗುತ್ತಿದ್ದಾರೆ ಅಷ್ಟೆ. ಆದ್ದರಿಂದ ಇದನ್ನೂ ತಪ್ಪಿಸಬಹುದಾಗಿತ್ತು. ಅದಾಗದಿರುವುದಕ್ಕೆ ಸರ್ಕಾರದ ಇಂದಿನ ಪದ್ಧತಿಯೇ ಕಾರಣ. ಏನೆಂದರೆ, ಈಗ ಅರಸೀಕೆರೆಯಲ್ಲಿ ಪಾನ ನಿರೋಧವಿಲ್ಲ. ಆದರೆ ಅದರ ಸುತ್ತಲೂ ಮೂರು ಡಿಸ್ಟ್ರಿಕ್ಟ್‌ಗಳು Dry ಆಗಿರುವ ಪ್ರದೇಶಗಳಾಗಿವೆ: ಚಿತ್ರದುರ್ಗ, ಕಡೂರು, ಇತ್ತ ಕಡೆ ತುಮಕೂರು ಈ ಮೂರು ಡಿಸ್ಟ್ರಿಕ್ಟಿನವರೂ ಇಲ್ಲಿಗೆ ಬಂದು ಕುಡಿಯುವುದಕ್ಕೆ ಇದು ಅನುಕೂಲವಾಯಿತು! ಕಂಟ್ರಾಕ್ಟರುಗಳನ್ನು ಬದುಕಿಸುವುದಕ್ಕೆ ಇದನ್ನು ಮಾಡಿರುವುದು ಅಷ್ಟೆ. ಲಕ್ಷಾಧೀಶರಾದ ಇಂಥಾ ಕಂಟ್ರಾಕ್ಟರುಗಳನ್ನು ಬದುಕಿಸುವುದಕ್ಕೆ ಹೀಗೆ ಮಾಡಿದರೆ ಹೇಗೆ? ಕಣಕಟ್ಟೆ ಊರನ್ನು ನೋಡುವುದಾದರೆ, ಅದು ನಾಲ್ಕು ಡಿಸ್ಟ್ರಿಕ್ಟುಗಳ ನರಹದ್ದಿನಲ್ಲಿದೆ. ಅದರ ಸುತ್ತಲು ಮೂರು ಡಿಸ್ಟ್ರಿಕ್ಟ್‌ಗಳು 'ಡ್ರೈ' ಪ್ರದೇಶಗಳು. ಹಾಗಿರುವಾಗ ಕಣಕಟ್ಟೆ ಒಂದಂಗಡಿಯಲ್ಲಿ ಎಷ್ಟು ವ್ಯಾಪಾರವಾಗ ಬಹುದೆಂಬುದನ್ನು ನೀವೇ ಊಹಿಸಿ. ಈ ರೀತಿ ಪಾನ ನಿರೋಧ ಪ್ರದೇಶಗಳ ಹತ್ತಿರ ಇಂಥ ಒಂದೊಂದು Pockets ಇದ್ದರೆ ಸಾಕು. ಏಕೆ ಹೀಗೆ ಒಬ್ಬರಿಂದ ಒಬ್ಬರನ್ನು ಉದ್ಧಾರ ಮಾಡುವುದು! ಅಂಥಾ ಪ್ರದೇಶಗಳಲ್ಲೂ ನಿಲ್ಲಿಸಬಾರದಿತ್ತೇ! ಮುಖ್ಯವಾಗಿ ಅದನ್ನು ನಿಲ್ಲಿಸುವುದಕ್ಕೆ ಸಾಧ್ಯವಿಲ್ಲವೆಂದೇ ನನ್ನ ಭಾವನೆ. ಏಕೆಂದರೆ ಆ ಕಂಟ್ರಾಕ್ಟರುಗಳು ಅಂಥಾ ಪ್ರಭಾವಶಾಲಿಯಾದ ವ್ಯಕ್ತಿಗಳು. ಮಂತ್ರಿವರ್ಗದವರಿಗೂ ಅವರ ಕೈಯಿಂದ ತಪ್ಪಿಸಿಕೊಳ್ಳುವುದಕ್ಕಾಗುವುದಿಲ್ಲ. ಏನೋ, ಈ ಬ್ಯಾರೆಟ್ ಆರ್ಡರಿನಲ್ಲಿ ಅದೃಷ್ಟವಶಾತ್ ಈ ನಿರ್ಣಯಕ್ಕೆ ಪ್ರಥಮ ಸ್ಥಾನ ಬಂದಿದೆ. ಅದು ಅದೃಷ್ಟವೆಂದೇ ಹೇಳಬೇಕು. ಆದ್ದರಿಂದ ಈ ನಿರ್ಣಯವನ್ನು ತಂದ ಮಾನ್ಯ ಸದಸ್ಯರಿಗೆ ನನ್ನ ವಂದನೆಗಳನ್ನು ಸಲ್ಲಿಸಿ, ನಾನು ಈ ನಿರ್ಣಯವನ್ನು ಒತ್ತಾಯಪಡಿಸುತ್ತೇನೆ.

*ಶ್ರೀ ವೈ. ಎಂ ಚಂದ್ರಶೇಖರಯ್ಯನವರು (ಕಡೂರು).—ಅಧ್ಯಕ್ಷರೇ, ಸರ್ಕಾರದವರು ನಮ್ಮ ತಾಲ್ಲೂಕಿನಲ್ಲಿ ಪಾನನಿರೋಧವನ್ನು ಜಾರಿಗೆ ಕೊಟ್ಟು ಮಂದಿಂದ ಹೆಂಡ ಇಳಿಸುವುದಕ್ಕೆ ಅವಕಾಶ ಮಾಡಿದ್ದಾರೆ ಅದಾಲ್ಲೂ "ಮ್ಮ ಕಡೂರಿನಲ್ಲಿ ನಮ್ಮ ಊರ ಮಗ್ಗಲಿನಲ್ಲೇ, ಮನೆಯ ಪಕ್ಕದಲ್ಲೇ ಹೆಂಡ ಇಳಿಸುತ್ತಿದ್ದಾರೆ. ಇದರಿಂದ ಪಾನನಿರೋಧ ನೀತಿಗೆ ಎಷ್ಟು ಕುಂದುಕ ಒರುತ್ತದೆಂಬುದನ್ನು ಹಿಂದೆಯೂ ಅನೇಕ ಸಾರಿ ಸರ್ಕಾರದವರ ಗಮನಕ್ಕೂ ತಂದಿದೆ. ಕಾಂಗ್ರೆಸ್ ಅಧಿವೇಶನದಲ್ಲೂ ಇದನ್ನೆಲ್ಲಾ ವಿವರವಾಗಿ ಹೇಳಿದ್ದೇವೆ. ಕಡೂರು ತಾಲ್ಲೂಕಿನ ಅನೇಕ ಜನ ಬಂದು ನಮ್ಮ ತಾಲ್ಲೂಕಿನಲ್ಲಿ ಮರಕಟ್ಟುವುದನ್ನು ನಿಲ್ಲಿಸಿಬಿಡಿ ಎಂದು ಮಂತ್ರಿವರ್ಗದವರಲ್ಲಿ ಅರಿಕೆ ಮಾಡಿಕೊಂಡಿದ್ದಾರೆ. ಕಂಟ್ರಾಕ್ಟರುಗಳನ್ನು ಬದುಕಿಸಬೇಕೆಂದು ಕೊಟ್ಟಿದ್ದಾರೆಂದು ಅನೇಕರು ಆಪಾದನೆ ಕೂಡ ಮಾಡುತ್ತಿದ್ದಾರೆ. ಹೀಗೆ ತಾವು ಮರಕಟ್ಟುವುದಕ್ಕೆ ಅವಕಾಶ ಕೊಟ್ಟಿರುವುದರಿಂದ ಕಂಟ್ರಾಕ್ಟರಿಗೆ ಎಷ್ಟು ದುಡ್ಡು ಬರುತ್ತದೆಂಬುದನ್ನು ಬಿಡಿಸಿ ಹೇಳಬೇಕಾಗಿಲ್ಲ. ಕಡೂರು ತಾಲ್ಲೂಕಿನಿಂದ ಮೊದಲು ಸರ್ಕಾರಕ್ಕೆ ಎಷ್ಟು ದುಡ್ಡು ಬರುತ್ತಿತ್ತೋ ಇಂದು ಅದಷ್ಟೂ ಕಂಟ್ರಾಕ್ಟರಿಗೆ ಬರುತ್ತಿದೆ. ಆದ್ದರಿಂದರೇ ಒಂದೊಂದು ಸ್ಥಳಕ್ಕೂ 1,000 ರೂಪಾಯಿಗೆ ಗುತ್ತಿಗೆಗೆ ತೆಗೆದು ಕೊಂಡು ಹೆಂಡ ಮಾರುವುದಕ್ಕೆ ಅವರು ಅವಕಾಶ ಪಡೆದಿದ್ದಾರೆ. ನಾನೇ ಖುದ್ದು ನೋಡಿದ್ದೇನೆ; ಯಾವ ಅಧಿಕಾರಿಗಳು ನನ್ನೊಡನೆ ಬರಲಿ ಕಡೂರು ಟೌನ್ ಪಕ್ಕದಲ್ಲೆ, ಊರಿನ ಮನೆ ಮಗ್ಗಲಿನಲ್ಲೇ ಹೆಂಡ ಇಳಿಸಲು ಮರಕಟ್ಟಿರುವುದನ್ನು ತೋರಿಸುತ್ತೇನೆ. ಕಡೂರಿಗೆ ಒಂದು ಫರ್ಲಾಂಗ್ ಕೂಡ ದೂರ ಏಲ್ಲ, 50 ಗಜ ದೂರದಲ್ಲೇ ಮರಗಳಿಗೆ ಕಟ್ಟಿದ್ದಾರೆ. ಹೆಂಡ ಕುಡಿಯುವುದಕ್ಕೆ ಹರಿಹರ, ದಾವಣಗೆರೆ, ಕಡೂರು ಬಿಟ್ಟರೆ ಬೆಂಗಳೂರಿನ ವರೆಗೂ ಎಲ್ಲೂ ಅನ್ನದವಿಲ್ಲದಂತೆ ಮಾಡುವುದನ್ನು ಬಿಟ್ಟು ಮಧ್ಯೆ ಸರಿಯಾಗಿ ಅರಸೀಕೆರೆಯಲ್ಲಿ ಅವಕಾಶ ಕೊಟ್ಟು ಬಿಟ್ಟರೆ ಏನು ಪ್ರಯೋಜನ! ಅದರಲ್ಲೂ ಈಗ ಹರಿಹರ, ದಾವಣಗೆರೆ ಬಿಟ್ಟರೆ ಕಡೂರಿನಲ್ಲಿ ಊರ ಮಗ್ಗುಲಲ್ಲೇ ಕುಡಿಯುವುದಕ್ಕೆ ಹೆಂಡ ಸಿಕ್ಕುತ್ತದೆಂದಾದರೆ ಏನು ಆಭಾನ! ಟೌನ್ ಪಕ್ಕದಲ್ಲಿದ್ದಮೇಲೆ ಸಾಮಾನ್ಯವಾಗಿ ಎಲ್ಲಾ ಕೆಲಸಗಾರರೂ ಅಧಿಕಣರ್ಯಾಟಕರೂ ಕಳ್ಳ ಬಟ್ಟಿ ಸೇವನೆಗೆ ಸಾಯಂಕಾಲವಾದಮೇಲೆ ತಪ್ಪಿಸಿಕೊಂಡು ಹೊರಟುಹೋಗುವುದಕ್ಕೆ ಅನುಕೂಲವಾಗಿ ಬಿಟ್ಟಿದೆ. ಮರ ಕಟ್ಟಲಿಕ್ಕೆ ಇಂಥ ಒಂದೊಂದು ಸ್ಥಳದಲ್ಲೂ ಇಪ್ಪತ್ತು ದುಡ್ಡು ಎಂದು ಗೊತ್ತುಮಾಡಿಕೊಂಡು ಟೌನ್ ಮಗ್ಗಲಿನಲ್ಲೇ ಇದ್ದರೆ ಇವರೆಲ್ಲರಿಗೂ ಅನುಕೂಲವಾಯಿತು. ಆದ್ದರಿಂದ ಯಾವಾವ ತಾಲ್ಲೂಕಿನಲ್ಲಿ ಪಾನನಿರೋಧ ಜಾರಿಗೆ ತಂದಿದೆಯೋ ಅಲ್ಲಿ ಅದಷ್ಟುಮಟ್ಟಿಗೆ ಮರಕಟ್ಟುವುದಕ್ಕೆ ಅವಕಾಶ ಕೊಡಬಾರದೆಂದು ನಾನು ಹೇಳುತ್ತೇನೆ.

ಶ್ರೀ ಟಿ. ಹನುಮಯ್ಯನವರು (ಹಿರಿಯೂರು-ಅನುಸೂಚಿತ ಜಾತಿಗಳು).—ಅಧ್ಯಕ್ಷ ಮಹಾಶಯರೆ, ಈಗ ತಾನೆ ನಮ್ಮ ಮಾನ್ಯ ಸ್ನೇಹಿತರಾದ ಶ್ರೀಮಾನ್ ಮಸಿಯಪ್ಪನವರು ಮಂಡಿಸಿರತಕ್ಕ ನಿರ್ಣಯವನ್ನು ಸಮರ್ಥಿಸುತ್ತಾ ಕೆಲವು ರಚನಾತ್ಮಕ ಸಲಹೆಗಳನ್ನು ಸರ್ಕಾರದವರಿಗೆ ಕೊಡಬೇಕೆಂದಿಚ್ಛಿಸುತ್ತೇನೆ.

ಸ್ವಾಮಿ, ಈ ಮದ್ಯಪಾನನಿರೋಧವನ್ನು ಈ ಏಳು ತಾಲ್ಲೂಕುಗಳಲ್ಲಿಯೂ ಜಾರಿಗೆ ತಂದಿದ್ದಾರೆ. ಅಲ್ಲಿ ಜನತೆಯಲ್ಲಿ ಯಾರಾದರೂ ತಪ್ಪು ಮಾಡಿದರೆ, ಎಂದರೆ, ಕಳ್ಳತನದಲ್ಲಿ ಹೆಂಡವನ್ನು ಇಳಿಸಿದರೆ ಅಥವ ಕಳ್ಳಭಟ್ಟಿ ಸಾರಾಯಿ ಇಳಿಸಿದರೆ, ಸರ್ಕಾರದವರು ಅಂಥವರನ್ನು ಶಿಕ್ಷೆ ಮಾಡುತ್ತಾರೆ. ಕಾರಣ, ಅದು ಪಾನನಿರೋಧಿಸಲ್ಪಟ್ಟಿರುವ ಪ್ರದೇಶ ಎಂದು. ಆದರೆ ಸರ್ಕಾರದವರೇ ಅಲ್ಲಿ ಹೀಗೆ ಮಾಡುವುದನ್ನು ನೋಡಿದರೆ ಏನು ಪರಿಣಾಮ ಎಂಬುದನ್ನು ಸರ್ಕಾರದವರು ಗಾಢವಾಗಿ ಯೋಚನೆ ಮಾಡಬೇಕೆಂದು ಅತ್ಯಂತ ವಿನಯದಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಏಕೆಂದರೆ, ಈ ಹೊತ್ತು ತಾವು ಸತತವಾಗಿ ಜನತೆಯನ್ನು ಉದ್ಧಾರಮಾಡಬೇಕೆಂಬ ಯಾವ ಸಂಕಲ್ಪದಿಂದ ಹೊರಟಿದ್ದೀರೋ ಅದು ತಲೆಕೆಳಗಾಗುವ ಪರಿಸ್ಥಿತಿ ಬರುತ್ತದೆ. ಜನಕ್ಕೆ ಗಾಬ್ಧದ

*Speeches indicated by astrisks have not been revised by the Members concerned.

ಸಂಪತ್ತು, ರಾಷ್ಟ್ರದ ಶಕ್ತಿ. ಜನತೆ ಸುಖಮಯವಾಗಿದ್ದರೆ ದೇಶ ಮುಂದೆ ಬರುತ್ತದೆ. ಜನತೆಯಲ್ಲಿ ಅನೇಕರು ಬಡವರು. ಐಶ್ವರ್ಯವಂತರೂ ಕೆಲವರಿದ್ದಾರೆ. ಅದರಲ್ಲಿಯೂ, ಶ್ರೀವರ್ಮ ಮಸಿಯಪ್ಪನವರು ಹೇಳಿದಂತೆ, ಅನೇಕವಾಗಿ, ಬಡವರೂ ಹಿಂದುಳಿದ ಹರಿಜನರೂ ಹೆಂಡ ಕುಡಿದರೆ ತಮ್ಮಲ್ಲಿ ಕೆಲಸಕ್ಕೆ ಬರುತ್ತಾರೆಂದು ಮನಸ್ಸಿನಲ್ಲಿಟ್ಟುಕೊಂಡಿರುತ್ತಾರೆ. ಇದಕ್ಕೆ ಹೆಚ್ಚು ಸಹಾಯ ಮಾಡಿದಂತಾಗುತ್ತದೆ. ಮದ್ಯಪಾನ ನಿರೋಧವಾಗಿರತಕ್ಕ ತಾಲ್ಲೂಕುಗಳಲ್ಲಿರುವ ಯಾವ ಜನರೂ ಕೂಡ ಆ ತಾಲ್ಲೂಕುಗಳಲ್ಲಿ ಹೆಂಡವನ್ನಿಳಿಸಿ ಮಾರಾಟಮಾಡಿ ಎಂದು ಸರ್ಕಾರದಲ್ಲಿ ಮನವಿ ಮಾಡಲಿಲ್ಲ. ಕೇವಲ ಕಂಟ್ರಾಕ್ಟರುಗಳನ್ನು ಉದ್ಧಾರ ಮಾಡುವುದಕ್ಕೆ ಈ ಕೆಲಸ ನಡೆದಿದೆ. ಒಂದು ವೇಳೆ ಸರ್ಕಾರಕ್ಕೆ ಹಣ ಇದರಿಂದ ಬಂದ್ದಿರೂ ಇದೇನೂ ಅಷ್ಟು ಹೆಚ್ಚಿನದಲ್ಲವೆಂದು ನನ್ನ ಭಾವನೆ. ಪಾನನಿರೋಧವನ್ನು ಜಾರಿಗೆ ತಂದಿರತಕ್ಕ ಈ ಏಳು ತಾಲ್ಲೂಕುಗಳಲ್ಲಿ ಸರ್ಕಾರದವರು ಈಗ ಏನು ಆಜ್ಞೆ ಮಾಡಿದ್ದಾರೋ ಅದನ್ನು ವಾಪಸ್ಸು ತೆಗೆದುಕೊಳ್ಳುವುದು ಬಹಳ ಒಳ್ಳೆಯದೆಂದು ಕಾಣುತ್ತದೆ. ಭಾರತ ರಾಜ್ಯಾಂಗದ ಡೈರೆಕ್ಟಿವ್ ಪ್ರಿನ್ಸಿಪರ್ಸ್‌ನ 47ನೆಯ ನಿಧಿಯಲ್ಲಿ ಹೀಗೆ ಹೇಳಿದೆ.

> "Article 47.—The State shall regard the raising of the level of nutrition and the standard of living of its people and the improvement of public health as among its primary duties and, in particular, the State shall endeavour to bring about prohibition of the consumption except for medicinal purposes of intoxicating drinks and of drugs which are injurious to health."

ಹೀಗಿರುವಾಗ, ಸರ್ಕಾರದವರು ಪಾನನಿರೋಧವನ್ನು ಜಾರಿಗೆ ತಂದಿರತಕ್ಕ ತಾಲ್ಲೂಕುಗಳಲ್ಲಿ ಪುನಃ ಕುಡಿಯುವುದನ್ನು ಜಾರಿಮಾಡಿದ ಹಾಗಾಗುತ್ತದೆ. ಹೆಂಡ ಕುಡಿಯುವುದು, ಇಸ್ಪೀಟಾಡುವುದು ಮುಂತಾದವು ವ್ಯಾಮೋಹಕವಾದ ಪದ್ಧತಿಗಳು. ಇವುಗಳನ್ನು ನೋಡಿದರೆ ಯಾರುತಾನೆ ಸುಮ್ಮನಿರುತ್ತಾರೆ! ಹೆಂಡವನ್ನು ಇಳಿಸಿ, ಅದನ್ನು ಕುಡಿಯಬೇಡಿ, ಮುಟ್ಟಬೇಡಿ ಎಂದು ಹೇಳಿದರೆ, ಅದು ಸರ್ವಥಾ ಸಾಧ್ಯವಿಲ್ಲ. ಹಿಂದಿನ ಸರ್ಕಾರದವರು ಹೇಳುತ್ತಿದ್ದುದು ಜ್ಞಾಪಕಕ್ಕೆ ಬರುತ್ತದೆ. ಹೆಂಡವನ್ನು ನಿಲ್ಲಿಸಿ ಎಂದರೆ, ಜನರು ಹೆಂಡ ಕುಡಿಯುವುದನ್ನು ಬಿಟ್ಟರೆ, ಕೊಳ್ಳುವುದಕ್ಕೆ ಜನರು ಬಾರದೇಯಿದ್ದರೆ ನಾವೇ ನಿಲ್ಲಿಸುತ್ತೇವೆ ಎಂದು ಹೇಳುತ್ತಿದ್ದರು. ಹಾಗಾಯಿತು ಈಗ ಮಾಡಿರುವುದು. ಹೆಂಡದ ಅಂಗಡಿಯಿದ್ದರೆ ಜನರು ಕುಡಿಯುವುದಕ್ಕೆ ಬರುತ್ತಾರೆ. ಆದ್ದರಿಂದ ಇದು ಬೇಡಿ, ನೀವು ಒಂದು ಹೆಜ್ಜೆ ಮುಂದಿಟ್ಟು ಧೈರ್ಯವಾಗಿ ಮುಂದೆ ನುಗ್ಗಿ, ನಾವು ಬೆಂಬಲ ಕೊಡುತ್ತೇವೆ. ಮುಂದಿಟ್ಟ ಹೆಜ್ಜೆಯನ್ನು ಹಿಂದಿಡುವುದು ಸರ್ವಥಾ ನ್ಯಾಯವಲ್ಲ. ಹಿಂದುಳಿದಿರುವ ಜನರಿಗೆ ಇದರಿಂದ ತೊಂದರೆಯಾಗುತ್ತದೆ. ಪಾನನಿರೋಧ ಜಾರಿಯಲ್ಲಿರುವ ತಾಲ್ಲೂಕುಗಳಿಗೆ ಹೋಗಿ ಅಲ್ಲಿನ ಬಡ ಜನರನ್ನು ಕೇಳಿದರೆ ಗೊತ್ತಾಗುತ್ತದೆ. ಪಾನನಿರೋಧದಿಂದ ಅವರಿಗೆ ಹೊಟ್ಟೆ ಬಟ್ಟೆಗೆ ಅನುಕೂಲವಾಗಿದೆ, ಚೆನ್ನಾಗಿ ದುಡಿಯುತ್ತಾರೆ; ಬಂದ ಹಣದಲ್ಲಿ ತಾವು ಜಮೀನು ಅಸ್ತಿ ಪಾಸ್ತಿ ಮಾಡಿಕೊಂಡು ಮನೆ ಮಠಗಳನ್ನು ಕಟ್ಟಿಕೊಂಡು ಸುಖವಾಗಿದ್ದಾರೆ. ಪಾನನಿರೋಧ ಬರುವುದಕ್ಕೆ ಮುಂಚೆ ಅಲ್ಲಿ ಮಧ್ಯಾಹ್ನ ಎರಡುಗಂಟೆಗೇ ಹೆಂಡದಂಗಡಿಗೆ ಹೋಗಿರುತ್ತಿದ್ದರು. ಈ ಹೊತ್ತು ನೋಡಿದರೆ, ಅಂಥವರು ಪ್ರತಿಯೊಬ್ಬರೂ ತಮ್ಮ ಹೆಂಡತಿ ಮಕ್ಕಳುಗಳಿಗೆ ಒಡವೆ ವಸ್ತ್ರ ಮಾಡಿಸಿಕೊಂಡು, ಜಮೀನು ಮಾಡಿಕೊಂಡು ಸುಖವಾಗಿದ್ದಾರೆ. ಜನರ ಪ್ರತಿನಿಧಿಗಳ ಅಭಿಪ್ರಾಯವನ್ನು ಸರ್ಕಾರದವರು ಕೇಳಬೇಕು. ನಾವು ಲಕ್ಷಾಂತರ ಪ್ರಜೆಗಳ ಪರವಾಗಿ ಬಂದಿರತಕ್ಕ ಪ್ರತಿನಿಧಿಗಳು. ನಾವು ಹೇಳುವುದು ನ್ಯಾಯವೇ ಅಥವ ಅಲ್ಲವೆ ಎಂಬುದನ್ನು ತಿಳಿಯದೆ ಮಾಡುವುದು ಸರಿಯಲ್ಲ. ಪಾನನಿರೋಧವಿರುವ ಪ್ರದೇಶದಲ್ಲಿ ಹೆಂಡವನ್ನಿಳಿಸಿಕೊಂಡುಬಂದರೆ, ದಾರಿಯಲ್ಲಿ ಬಹಳ ಬಾಯಾರಿಕೆಯೆಂದು ಕೇಳಿದರೆ ಅವರಿಗೆ ಕೊಟ್ಟು ಇನ್ನಷ್ಟು ನೀರು ಹಾಕುತ್ತಾರೆ. ಇದನ್ನು ಯಾರೂ ತಡೆಯುವುದಕ್ಕಾಗುವುದಿಲ್ಲ. ಆದಕಾರಣ, ಪಾನನಿರೋಧ ಜಾರಿಯಲ್ಲಿರುವ ಏಳು ತಾಲ್ಲೂಕುಗಳಲ್ಲಿ ಹೆಂಡವನ್ನಿಳಿಸುವುದು ಒಳ್ಳೆಯದಲ್ಲ. ಇದು ಕಾನೂನಿಗೆ ವಿರೋಧ. ಡೈರೆಕ್ಟಿವ್ ಪ್ರಿನ್ಸಿಪರ್ಸ್‌ನಲ್ಲಿರುವ 47ನೆಯ ವಿಧಿಗೇ ವಿರೋಧ. ಒಂದು ಸಾರಿ ಪಾನನಿರೋಧವನ್ನು ಜಾರಿಮಾಡಿದಮೇಲೆ ಏನೇ ಕಷ್ಟ ಬಂದರೂ ಅಲ್ಲಿ ಪುನಃ ಪಾನಮಾಡಲು ಅವಕಾಶ ಮಾಡಲು ದಾರಿಯಿಲ್ಲ. ಮುಂದೆ ನುಗ್ಗಬೇಕೇ ಹೊರತು ಹಿಂದೆ ಹೋಗುವುದು ಸರಿಯಲ್ಲ. ಆದುದರಿಂದ ದಯವಿಟ್ಟು ಈ ಏಳು ತಾಲ್ಲೂಕುಗಳಲ್ಲಿ ಈಗ ತಾವು ಈಚಲು ಬೀರಗಳನ್ನು ಕಟ್ಟುವುದಕ್ಕೆ ಕೊಟ್ಟಿರುವ ಅವಕಾಶವನ್ನು ವಾಪಸ್ಸು ತೆಗೆದುಕೊಂಡು ಅಲ್ಲಿರತಕ್ಕ ಜನರಿಗೆ, ಅವರು ಒಳ್ಳೆಯ ಪ್ರಜೆಗಳಾಗುವಂತೆ ಸಹಾಯವಾದಬೇಕೆಂದು ಪ್ರಾರ್ಥಿಸುತ್ತೇನೆ.

ಶ್ರೀ ಯು. ಎಂ. ಮಾದಪ್ಪನವರು (ಚಾಮರಾಜನಗರ).—ಅಧ್ಯಕ್ಷರೇ, ಶ್ರೀವರ್ಮ ಮಸಿಯಪ್ಪನವರು ತಂದಿರತಕ್ಕ ನಿರ್ಣಯ ಬಹಳ ಮಹತ್ವರವಾದುದು. ಇಂತಹ ಮಹತ್ವರವಾದ ನಿರ್ಣಯವನ್ನನುಮೋದಿಸುತ್ತಾ ಒಬ್ಬರು ಮಹಾನುಭಾವರು ಹೇಳಿತರಕ್ಕ ಒಂದು ಮಹತ್ವದ ಮಾತನ್ನು ಹೇಳಬಯಸುತ್ತೇನೆ. "ಮಧುವಿನ ಆಸೆಗೆ ಅಲಗ ನೆಕ್ಕುವ ಸೊಣಗನಂತೆ ಮನಸ್ಸು ತನ್ನ ಸ್ವಭಾವವನ್ನು ಬಿಡದು" ಎಂದು ಒಬ್ಬರು ಮಹಾವಿಭೂತಿಗಳು ಹೇಳಿದ್ದಾರೆ. ಯಾವ ಪ್ರದೇಶದಲ್ಲಿ ಪಾನನಿರೋಧವನ್ನು ಜಾರಿಮಾಡಿದ್ದೇವೋ ಅಂತಹ ಪ್ರದೇಶದಲ್ಲಿ ಪುನಃ ಹೆಂಡವನ್ನು ಕಟ್ಟುವುದಾದರೆ, ಮನಸ್ಸಿನ ಆಸೆ ಪುನಃ ಕುಡಿಯುವುದರ ಕಡೆ ಹೋಗದೆ ಬಿಡುವುದು ಸಾಧ್ಯವೆ! ಇದು ಮನಸ್ಸಿಗೆ ಸಂಬಂಧಪಟ್ಟ ವಿಷಯ. ಮನಸ್ಸು ಸಾಮಾನ್ಯವಾಗಿ ವ್ಯತ್ಯಾಸವಾಗುತ್ತಿರುತ್ತದೆ. ಸಿಹಿಯನ್ನು ತಮ್ಮ ಮುಂದಿಟ್ಟು, ಅದನ್ನು ತಿನ್ನಲು ಅವಕಾಶ ಕೊಡದೇಯಿದ್ದರೆ, ತಮ್ಮ ನಾಲಿಗೆಯಲ್ಲಿ ನೀರು ಜೊಲ್ಲು ಸುರಿಯುತ್ತದೆ; ಅನೇಕರಿಗೆ ಈ ಅನುಭವವಾಗಿರಬಹುದು. ನಮಗೆ ಸಿಹಿಯು ಯಾವರೀತಿ ಇದೆಯೋ ಹಾಗೆ ಕುಡಿಯುವವರು ಮದ್ಯವನ್ನು ಸಿಹಿಯಂತೆ ತಿಳಿದು ಎಷ್ಟೋಸಾರಿ ಅದಕ್ಕಾಗಿ ಪ್ರಯತ್ನಿಸುತ್ತಾರೆ, ತಮಗೆ ಅದರಿಂದಾಗುವ ಕಷ್ಟ ನಷ್ಟಗಳನ್ನೂ ಮನಸ್ಸಿಗೆ ತೆಗೆದುಕೊಳ್ಳದೆ, ಕುಡಿಯುವುದಕ್ಕೆ ಮನಸೋಲುತ್ತಾರೆ. ಇದನ್ನು ನಾವು ಚೆನ್ನಾಗಿ ಯೋಚಿಸುವುದು ನಮ್ಮ ಕರ್ತವ್ಯ. ಕುಡಿತದಿಂದ ಮಾನವನ ನೈತಿಕ ಮಟ್ಟ ಕೆಳಗಿಳಿಯುತ್ತದೆಯೆಂಬುದನ್ನು ನಾವು ಗಮನಕ್ಕೆ ತೆಗೆದುಕೊಳ್ಳಬೇಕು. ಕಳ್ಳತನದಿಂದ ಮದ್ಯವನ್ನು ಸೇವಿಸುವುದಕ್ಕೆ ಪ್ರಯತ್ನಪಟ್ಟರೆ, ನೈತಿಕ ಮಟ್ಟ ಇನ್ನೂ ಹಾಳಾಗುವ ಸಂದರ್ಭ ಬರುತ್ತದೆ. ಇಂತಹ ಸಂದರ್ಭದಲ್ಲಿ ನಾವು ದೇಶದಲ್ಲಿ ಒಂದು ಕಾನೂನನ್ನು ಜಾರಿಗೆ ತರಬೇಕಾದರೆ, ಮಾನ

(ಶ್ರೀ ಯು. ಎಂ. ಮಾದಪ್ಪನವರು).

ಮನ ನೈತಿಕ ಮಟ್ಟ ಸರಿಯಾಗಿಲ್ಲದಿದ್ದರೆ ಯಾವ ಕಾನೂ ನನ್ನು ಜಾರಿಗೆ ತಂದರೂ ಪ್ರಯೋಜನವಿಲ್ಲ. ಕಾನೂನು ರಚಿಸುವ ಈ ಸಭೆಯವರು ಇದನ್ನು ಗಣನೆಗೆ ತೆಗೆದು ಕೊಳ್ಳಬೇಕು. ನಮಗೆ ಆರ್ಥಿಕ ದೃಷ್ಟಿಯೊಂದೇ ಅಲ್ಲ, ನೈತಿಕ ದೃಷ್ಟಿಯೂ ಬೇಕು. ಸರ್ಕಾರಕ್ಕೆ ಹಣ ಸಾಲದು ಎಂಬ ದೃಷ್ಟಿಯಿಂದ ಏನಾದರೂ ಜಾರಿಯಲ್ಲಿ ತಂದರೆ, ಒಂದು ವಿಷಯವನ್ನು ನಾವು ಯೋಚನೆಮಾಡ ಬೇಕು. ಭಗವಾ ಬಸವಣ್ಣನವರು ಹೇಳಿರುವ ಹಾಗೆ "ವಾಪಿಯ ಧನ ಪ್ರಾಯಶ್ಚಿತ್ತಕ್ಕಲ್ಲದೆ ಸತ್ಪಾತ್ರಕ್ಕೆ ಸಲ್ಲುವುದೆ? ನಾಯಿಯ ಹಾಲು ನಾಯಿಯ ಕುನ್ನಿಗ ಲ್ಲದೆ ಪಂಚಾಮೃತಕ್ಕೆ ಸಲ್ಲದು" ಎಂಬಂತೆ ಆಗುತ್ತದೆ. ಈ ಮಾತುಗಳನ್ನು ಗಮನಕ್ಕೆ ತಂದುಕೊಳ್ಳಬೇಕು. ಇದ ರಿಂದ ಏನು ಅರ್ಥವಾಗುತ್ತದೆಂದರೆ: ನಾವು ಈ ಮಾರ್ಗ ದಿಂದ ಹಣ ಸಂಪಾದಿಸಿ ದೇಶ ಸೇವೆಯನ್ನು, ಜನರಸೇವೆ ಯನ್ನು ಮಾಡಬೇಕೆಂದು ಹೊರಟಿದ್ದೇ ಆದರೆ, ಈ ಕಾರ್ಯವನ್ನು ಮಾಡಿದಹಾಗಾಗುವುದಿಲ್ಲವೆಂದು ನಿರ್ದಿ ಷ್ಟವಾಗಿ ಹೇಳುತ್ತೇನೆ. ಜನರು ಬದುಕಲಿ, ಉದ್ಧಾರ ವಾಗಲಿ ಎಂದು ರಾಷ್ಟ್ರಪಿತರಾದ ಮಹಾತ್ಮಾ ಗಾಂಧಿ ಯವರು ಯಾವ ಮೂಲ ತತ್ವಕ್ಕಾಗಿ ತಾವು ಬಾಳಿ ಅಳಿ ದುಹೋದರೋ ಆ ತತ್ವಕ್ಕೇ ಧಕ್ಕೆ ತರುವುದಾದರೆ, ನಮ್ಮ ರಾಷ್ಟ್ರದ ಕೀರ್ತಿಗೇ ಧಕ್ಕೆ ತಂದಂತಾಗುತ್ತ ದೆಂದು ಹೇಳುತ್ತೇನೆ. ನಮ್ಮ ದೇಶದ ಕೀರ್ತಿಗೆ, ಸಂಸ್ಕೃತಿಗೆ ಧಕ್ಕೆ ಬಾರದಂತೆ ನೋಡಿಕೊಳ್ಳುವುದು ನಮ್ಮ ಕರ್ತವ್ಯವಾಗಿದೆಯೆಂದು ಒತ್ತಿ ಹೇಳುತ್ತೇನೆ. ಇಂತಹ ಸಂದರ್ಭದಲ್ಲಿ ನಮ್ಮ ಪ್ರಜಾಸರ್ಕಾರದವರು ಪ್ರಜೆಗಳ ಇಷ್ಟಾನುಸಾರವಾಗಿ, ಅವರ ಅಭಿಮತದಂತೆ ನಡೆಯುತ್ತಾರೆಂದು ನಾನು ನಂಬಿದ್ದೇನೆ.

2 P.M.

ಹೀಗೆ ಮದ್ಯಪಾನಕ್ಕೆ ಅಪ್ರತ್ಯಕ್ಷವಾಗಿ ಅವಕಾಶ ಕೊಡುವುದು ಅಡಳಿತದ ಅಪರಾಧವಾಗುತ್ತದೆಂದು ಹೇಳಿದರೂ ತಪ್ಪಾಗಲಾರದೆಂದು ಕೆಲವು ಮಾನ್ಯ ಸದ ಸ್ಯರು ಹೇಳಿದ್ದಾರೆ. ಈ ಒಂದು ಸದುದ್ದೇಶದಿಂದಲೇ ರಾಜ್ಯಾಂಗದ 46-47ನೆಯ ಆರ್ಟಿಕಲ್‌ನಲ್ಲಿ ಇದನ್ನು ಸೂಚಿಸಿದ್ದಾರೆಂದು ನನಗೆ ಅರ್ಥವಾಗುತ್ತದೆ. ಇಂತಹ ಒಂದು ಮಹದ್ವಿಚಾರಕ್ಕೆ ತಾವೆಲ್ಲರೂ ಗಮನಕೊಟ್ಟು ಇದನ್ನು ಅನುಮೋದಿಸಬೇಕೆಂದು ಪ್ರಾರ್ಥಿಸಿಕೊಳ್ಳು ತ್ತೇನೆ.

ಇಲ್ಲಿಗೆ 3-4 ದಿವಸಗಳ ಹಿಂದೆ ನಮ್ಮ ದೇಶದ ನಾಯ ಕರಾದ ಪ್ರಧಾನಿ ನೆಹ್ರೂರವರು ನೀತಿಪಂತ ಸಮಾಜ ಸೃಷ್ಟಿಯ ದೃಷ್ಟಿಯಿಂದ ರಚಿಸಿರುವ ಭಾರತ ಸೇವಕ ಸಮಾಜದ ಪ್ರಾರಂಭೋತ್ಸವ ಸಮಯದಲ್ಲಿ ಮಾತನಾ ಡುತ್ತ ಜನರ ರೀತಿ ನೀತಿ ದಿನದಿನಕ್ಕೂ ಬದಲಾಯಿಸು ತ್ತಿದೆ, ಜನತೆಯ ನೀತಿ ಕುಂದುತ್ತಿದೆ, ದೇಶದಲ್ಲಿ ನೀತಿ ಪತನವಾಗುತ್ತಿದೆ, ಇದನ್ನು ಪ್ರಜಾಸರ್ಕಾರ ತಡೆಗಟ್ಟ ಬೇಕಾಗಿದೆ ಎಂದು ಸಾರಿ ತಿಳಿಸಿದ್ದಾರೆ. ಇಂಥ ನೀತಿ ಪತನವಾಗುವುದನ್ನು ತಡೆಗಟ್ಟುತಕ್ಕ ಮಾರ್ಗಗಳೆಲ್ಲ ಇದೂ ಒಂದಾಗಿರುವುದರಿಂದ ತಾವೆಲ್ಲರೂ ಈ ನಿರ್ಣ ಯಕ್ಕೆ ತಮ್ಮ ಬೆಂಬಲ ನೀಡಬೇಕೆಂದು ಪ್ರಾರ್ಥಿಸು ತ್ತೇನೆ.

Sri K. HANUMANTHAIYA (Leader of the House).—May I suggest this? I am interested in as many resolutions as possible being taken up.

Sri B. HUTCHE GOWDA.—I rise to a point of order, Sir. The Hon'ble Chief Minister is not sitting in his seat. He cannot therefore speak from another seat. I want a ruling.

Sri M. MADIAH (Nanjangud-Scheduled Castes).—I rise to a point of order, Sir. No seats are allotted by the Hon'ble Speaker so far as the members are concerned. The members to whom seats are not allotted are free to sit anywhere in the Assembly Hall.

Sri B. HUTCHE GOWDA.—Can a member speak from any other seat?

Sri K. HANUMANTHAIYA.—This is not so important a matter as to deserve any consideration of the House. Besides, for the satisfaction of my Hon'ble friend, I may say the Ministry is one of joint responsibility and it does not matter wherefrom the reply comes.

ಸ್ವಾಮಿ, ಈಗ ಚರ್ಚೆಯಾಗತಕ್ಕ ವಿಷಯ ಏನೆಂ ಬುದು ಎಲ್ಲರಿಗೂ ಗೊತ್ತಿದೆ. ಈ ಬಗ್ಗೆ ಈಗಾಗಲೆ ಮಾನ್ಯ ಸದಸ್ಯರೆಲ್ಲರೂ ವ್ಯಕ್ತಪಡಿಸಿರತಕ್ಕ ಅಭಿಪ್ರಾ ಯಕ್ಕೂ ಮತ್ತು ಸರ್ಕಾರದವರ ಅಭಿಪ್ರಾಯಕ್ಕೂ ಯಾವ ವ್ಯತ್ಯಾಸವೂ ಇಲ್ಲ. ಆದರೆ ಈ ವಿಷಯದಲ್ಲಿ ಇರ ತಕ್ಕ ತೊಂದರೆ ಏನು, ಇದನ್ನು ಏತಕ್ಕಾಗಿ ಕಾರ್ಯ ರೂಪಕ್ಕೆ ತರಲಾಗಲಿಲ್ಲ ಎಂಬ ಅಂಶಗಳ ಬಗ್ಗೆ, ಸರ್ಕಾರ ದವರು ಕೊಡತಕ್ಕ ಉತ್ತರವನ್ನು ಕೇಳಿದರೆ, ಮುಂದಿನ ಚರ್ಚೆಗೆ ಸೌಲಭ್ಯವಾಗುತ್ತದೆ ಎಂಬುದೇ ಆ ನನ್ನ ಸೂಚನೆ.

Mr. SPEAKER.—The concerned Minister will reply. Is that what the Chief Minister suggests?

Sri K. HANUMANTHAIYA.—Yes.

*ಶ್ರೀ ಟಿ. ಚೆನ್ನಯ್ಯನವರು (ಜನಾರೋಗ್ಯ ರಕ್ಷಣೆ ಮತ್ತು ಸ್ಥಳೀಯ ಪ್ರಜಾಧಿಕಾರ ಶಾಖಾ ಸಚಿವರು).—ಮಾನ್ಯ ಅಧ್ಯಕ್ಷರೇ, ಸ್ವಾಮಿ, ಈಗ ಅನೇಕ ಮಂದಿ ನನ್ನ ಸ್ನೇಹಿತರು ಈ ಪಾನನಿರೋಧವನ್ನು ಜಾರಿಗೆ ತಂದಿರ ತಕ್ಕ ಪ್ರದೇಶದಲ್ಲಿರುವ ಏಳು ತಾಲ್ಲೂಕುಗಳಲ್ಲಿ ಶೇಂದಿ ಯನ್ನು ಉತ್ತಾರು ಮಾಡಿಕೊಂಡು ಬರತಕ್ಕ ವಿಷಯದಲ್ಲಿ ತಮ್ಮ ತಮ್ಮ ಸಲಹೆಗಳನ್ನು ಆಗಾಗಲೇ ವಿಶದವಾಗಿ ತಿಳಿಸಿದ್ದಾರೆ. ಈ ವಿಷಯದ ಸಂಬಂಧವಾಗಿ ನಾನು ಕೆಲವು ಅಂಶಗಳನ್ನು ಸಭೆಯ ಮುಂದಿಡಲು ಇಚ್ಛಿಸು ತ್ತೇನೆ.

ಈಗ ನಮ್ಮ ಸರ್ಕಾರಕ್ಕೆ ಬೆಂಗಳೂರು ಜಿಲ್ಲೆ ಯೊಂದರಿಂದಲೇ ಸುಮಾರು 50 ಲಕ್ಷ ರೂಪಾಯಿ ಗಳಷ್ಟು ಆದಾಯವು ಎಕ್ಸೈಜ್ ರೂಪದಲ್ಲಿ ಬರುತ್ತಿದೆ. ಈ ಜಿಲ್ಲೆಯಲ್ಲಿ ಈಗ ಶೇಂದಿ ಅಂಗಡಿಗಳು, ನಗರ ಪ್ರದೇಶದಲ್ಲೂ, ತಾಲ್ಲೂಕು ಪ್ರದೇಶಗಳಲ್ಲೂ ಮತ್ತು ಸಿವಿಲ್ ಪ್ರದೇಶದಲ್ಲೂ ಇರುತ್ತವೆ. ಅದಕ್ಕಾಗಿ ಈ ಜಿಲ್ಲೆಗೆ ಹೊರಗಡೆಯ ಜಿಲ್ಲೆಗಳಿಂದ ಶೇಂದಿಯನ್ನು ತರ ತಕ್ಕ ಅವಕಾಶವನ್ನು ಕೊಡಬೇಕಾಗಿ ಬಂದಿದೆ. ಈ ಜಿಲ್ಲೆಯಲ್ಲಿರತಕ್ಕ ಮರಗಳಿಂದ ಶೇಂದಿಯನ್ನು ಉತ್ತಾರು ಮಾಡಿದನಂತರ, ಎಷ್ಟು ಬಳಕೆಗೆ ಸಾಲದೆ ಬರುತ್ತ

ದೆಯೋ ಅಷ್ಟನ್ನು ಹೊರಗಡೆಯಿಂದ, ಎಂದರೆ ಎಲ್ಲಿ ಈ ಪಾನನಿರೋಧ ಜಾರಿಯಲ್ಲಿರುತ್ತೋ ಅಂಥ ತಾಲ್ಲೂಕು ಪ್ರದೇಶದಿಂದ ತರುವಂತೆ ಏರ್ಪಾಡು ಮಾಡಿದ್ದೇವೆ.

ಈಗ ಸೂಚಿಸಿರತಕ್ಕ ಏಳು ತಾಲ್ಲೂಕುಗಳಲ್ಲಿಯೂ ಪಾನನಿರೋಧ ಜಾರಿಯಲ್ಲಿದೆ. ಹಾಗೆ ಅಲ್ಲ ಶೇಂದಿಯನ್ನು ಇಳಿಸುವುದಕ್ಕೆ ಅವಕಾಶಕೊಟ್ಟರೆ ಅದರಿಂದ ಏನಾದರೂ ಇದರಿಂದ ಜನರಿಗೆ ಪುನಃ ಆಸೆ ಹುಟ್ಟಬಹುದೆಂಬ ಒಂದು ಅನುಮಾನವನ್ನು ತಾವುಗಳಾರೂ ಭಾವಿಸಬೇಕಾಗಿಲ್ಲ. ಕಾರಣವೇನೆಂದರೆ ಆ ಪ್ರಾಂತದಲ್ಲ ಈಗಾಗಲೇ ಪಾನನಿರೋಧ ಬರಲರುವುದರಿಂದ ಅಲ್ಲಿ ಇಳಿಸಿದ ಶೇಂದಿಯನ್ನು ಅಲ್ಲಿಂದ ಹೊರಗಡೆಗೆ ಸುರಕ್ಷಿತವಾಗಿ, ಅದು ಅಲ್ಲಿ ಯಾವ ರೀತಿಯಲ್ಲೂ ಉಪಯೋಗಕ್ಕೆ ಅವಕಾಶಕೊಡದಂತೆ, ಸಾಗಿಸಲು ಪೋಲೀಸ್ ಮತ್ತೂ ಆಬ್ಕಾರಿ ಶಿಬ್ಬಂದಿಯನ್ನು ಕಾವಲಿಡಲಾಗಿದೆ. ಅಂಥ ಅಕ್ರಮ ನಡೆವಳಿಕೆಗಳೇನಾದರೂ ನಡೆದ ಪಕ್ಷದಲ್ಲಿ ಕೂಡಲೇ ಅಂಥವರ ಬಗ್ಗೆ ತಕ್ಕ ಕಾರ್ಯಕ್ರಮವನ್ನು ಕೈಗೊಳ್ಳುತ್ತಾರೆ. ಸರ್ಕಾರ ಇಷ್ಟೆಲ್ಲಾ ಏರ್ಪಾಡುಗಳನ್ನು ಮಾಡಿರುತ್ತದೆ. ಹೀಗೆ ಇಳಿಸಲಾದ ಶೇಂದಿಯನ್ನು ಕೂಡಲೇ ರಾರಿಗಳ ಮೂಲಕ ಹೊರಕ್ಕೆ ಸಾಗಿಸಲು ರಾರಿಗಳಿಗೆ ಬೇಕಾದ ಪರ್ಮಿಟ್‌ಗಳನ್ನು ಕೊಡಲಾಗಿದೆ; ಮತ್ತು ಹಾಗೆ ಪರ್ಮಿಟ್ ಕೊಡಲು ಸರ್ಕಾರ ಆಜ್ಞೆಯನ್ನು ಮಾಡಿರುತ್ತದೆ. ಈ ಕಾರಣಗಳಿಂದ ಆ ಏಳು ತಾಲ್ಲೂಕುಗಳ ಪ್ರದೇಶದಲ್ಲಿರತಕ್ಕ ಜನರಿಗೆ ಯಾವ ತೊಂದರೆಯೂ ಉಂಟಾಗುವುದಿಲ್ಲ. ಆದುದರಿಂದ ಈ ನಿರ್ಣಯವನ್ನು ತಂದಿರತಕ್ಕ ನನ್ನ ಮಾನ್ಯ ಮಿತ್ರರು ತಮ್ಮ ನಿರ್ಣಯವನ್ನು ವಾಪಸ್ಸು ತೆಗೆದುಕೊಳ್ಳಬೇಕೆಂದು ನಾನು ಪ್ರಾರ್ಥಿಸುತ್ತೇನೆ.

ಶ್ರೀ ಎ. ಮುನಿಯಪ್ಪನವರು.—ಮಾನ್ಯ ಸಚಿವರು ಈ ನಿರ್ಣಯದ ವಿಷಯವಾಗಿ ಸಮರ್ಪಕವಾದ ಒಂದು ಭರವಸೆಯನ್ನು ಕೊಟ್ಟಿರುವುದರಿಂದ ಆ ಆಧಾರದ ಮೇರೆ ನಾನು ನನ್ನ ನಿರ್ಣಯವನ್ನು ವಾಪಸ್ಸು ತೆಗೆದುಕೊಳ್ಳಲು ಸಭೆಯ ಅನುಮತಿಯನ್ನು ಬೇಡುತ್ತೇನೆ.

The resolution was, by leave, withdrawn.

Sri B. HUTCHE GOWDA.—It may be put to vote.

Mr. SPEAKER.—The House has granted permission to withdraw the resolution.

Sri B. HUTCHE GOWDA.—I demand a poll.

Mr. SPEAKER.—Not necessary. Leave is granted and the mover has withdrawn his resolution.

Request to dispose of as many resolutions as possible.

ಶ್ರೀ ಮುಲ್ಕ ಗೋವಿಂದರೆಡ್ಡಿಯವರು (ಚಿತ್ರದುರ್ಗ).—ಮಾನ್ಯ ಅಧ್ಯಕ್ಷರೆ, ನಿರ್ಣಯಗಳ ವಿಚಾರವಾಗಿ ಒಂದು ಮಾತು ಹೇಳಬೇಕೆಂದಿದ್ದೇನೆ. ಈಗ 31 ನಿರ್ಣಯಗಳು ಬಂದಿವೆ. ಆದ್ದರಿಂದ ಅದಷ್ಟು ಜಾಗ್ರತೆಯಾಗಿ ಅದಷ್ಟು ನಿರ್ಣಯಗಳನ್ನು ಸಭೆಯ ಮುಂದೆ ಚರ್ಚಿಸುವುದು ನ್ಯಾಯವಾಗಿ ಕಾಣುತ್ತದೆ. ಅದಕ್ಕೆ ಕಾಂಗ್ರೆಸ್ ಪಕ್ಷದ ಪರವಾಗಿ ಇಬ್ಬರು ಅಥವಾ ಮೂರು ಮಂದಿ, ನಮ್ಮ ಕಡೆಯಿಂದ ಇಬ್ಬರು ಅಥವಾ ಮೂರು ಸದಸ್ಯರು ಮಾತನಾಡುವುದಕ್ಕೆ ಅವಕಾಶ ಕೊಟ್ಟರೆ ವಿರೋಧಾಭಿಪ್ರಾಯವನ್ನು ಸಭೆಯ ಮುಂದೆ ತಿಳಿಸುವುದಕ್ಕೆ ಅವಕಾಶವಾಗುತ್ತದೆ ಮತ್ತು ಹೆಚ್ಚು ನಿರ್ಣಯಗಳೂ ತೆಗೆದುಕೊಳ್ಳಲ್ಪಡುತ್ತವೆ. ಆದ್ದರಿಂದ ಆ ರೀತಿ ಒಂದು ನೀತಿಯನ್ನನುಸರಿಸಬೇಕೆಂಬುದು ನನ್ನ ಅಭಿಪ್ರಾಯ.

Mr. SPEAKER.—If the Hon'ble Members come to some understanding, that may be considered.

Sri Mulka GOVINDA REDDY.—That is left to the Chair.

Mr. SPEAKER.—We will see to it. Tomorrow also we have Resolutions.

No. 2. Abolition of Middle School Examinations.

ಶ್ರೀ ಎಸ್. ಕರಿಯಪ್ಪನವರು (ವಿರೂಪಾಕ್ಷಪುರ).—ಸ್ವಾಮಿ, ನನ್ನ ನಿರ್ಣಯ ಈ ರೀತಿ ಇದೆ.—

"ಮಿಡ್ಲ್ ಸ್ಕೂಲು ಪರೀಕ್ಷೆಯನ್ನು ರದ್ದುಮಾಡ ಬೇಕೆಂದು ಈ ಸಭೆಯವರು ಅಭಿಪ್ರಾಯ ಪಡುತ್ತಾರೆ."

ಒಂದು ದೇಶದ ಆಗು ಹೋಗುಗಳು ಹೇಗಾಗಬಹುದೆಂಬುದನ್ನು ಕಂಡುಹಿಡಿಯಬೇಕಾದರೆ ಆ ದೇಶದ ವಿದ್ಯಾಭ್ಯಾಸ ಕ್ರಮ ಹೇಗಿದೆ ಎನ್ನುವುದನ್ನು ನೋಡಬೇಕು. ಇಂದಿನ ಮಕ್ಕಳೇ ಮುಂದಿನ ಪ್ರಜೆಗಳು ಎಂಬುದು ಎಲ್ಲರಿಗೂ ಗೊತ್ತಿರತಕ್ಕ ವಿಚಾರ. ನಾವು ಕೊಟ್ಟಿರುವ ತರಬೇತು ಸರಿಯಾಗಿಲ್ಲದೇ ಇರುವ ಭಾಗದಲ್ಲ ದೇಶದ ಮುಂದಿನ ಪ್ರಜೆಗಳು ಸರಿಯಾಗಿ ತರಬೇತು ಹೊಂದದೆ ದೇಶಕ್ಕೆ ಒಂದಲ್ಲ ಒಂದು ವಿಧದಲ್ಲಿ ಅನಾನುಕೂಲ, ತೊಂದರೆ ಉಂಟಾಗುವುದು ಸ್ವಾಭಾವಿಕ. ಆದಕಾರಣ ಸರಿಯಾದ ಪೌರನ್ನು ತಯಾರು ಮಾಡುವುದಕ್ಕೆ ನಿಜವಾಗಿಯೂ ಒಂದು ಸೂಕ್ತವಾದ ವಿದ್ಯಾಭ್ಯಾಸ ಕ್ರಮ ಇರುವುದು ತುಂಬಾ ಅವಶ್ಯಕ. ಈಗ ನಮ್ಮ ದೇಶದಲ್ಲಿರತಕ್ಕಂಥ ವಿದ್ಯಾಭ್ಯಾಸ ಕ್ರಮವನ್ನು ಜಾರಿಗೆ ತಂದು ಅನೇಕ ವರ್ಷಗಳಾಗಿವೆ. ಈಗಿರುವ ಪದ್ಧತಿಯನ್ನೇ ಬದಲಾವಣೆ ಮಾಡದೆ, ಈಗಿನ ಪರಿಸ್ಥಿತಿಗೆ ತಕ್ಕಂತೆ ಮಾರ್ಪಡಿಸದೆ ಅದನ್ನೇ ಅನುಸರಿಸುತ್ತೇವೆಂದು ಹೇಳಿದರೆ ಆರು ತಿಂಗಳಾಗಿರುವ ಮಗುವಿಗೆ ಹೊಲಿಸಿದ ಅಂಗಿಯನ್ನು ಆರು ವರ್ಷಗಳ ಮಗುವಿಗೆ ತೊಡಿಸುವುದಕ್ಕೆ ಪ್ರಯತ್ನಪಟ್ಟ ಹಾಗಾಗುತ್ತದೆ. ಆದಕಾರಣ ಈಗ ಬದಲಾಯಿಸಿರುವ ಪರಿಸ್ಥಿತಿಗೆ ತಕ್ಕ ಹಾಗೆ ವಿದ್ಯಾಭ್ಯಾಸ ಕ್ರಮವನ್ನು ಸಹ ನಾವು ಬದಲಾವಣೆ ಮಾಡಬೇಕಾದದ್ದು ತುಂಬಾ ಅವಶ್ಯಕವಾದುದು ಎನ್ನುವುದನ್ನು ವಿದ್ಯಾಭ್ಯಾಸದ ವಿಚಾರದಲ್ಲಿ ನೈಪುಣ್ಯವನ್ನು ಹೊಂದಿರುವವರೇ ಹೇಳಿದ್ದಾರೆ. ಈಗ ನಾನಾದರೂ ಈ ನಿರ್ಣಯದಲ್ಲಿ ತಂದಿರತಕ್ಕಂಥ

(ಶ್ರೀ ಎಸ್. ಕರಿಯಪ್ಪನವರು).

ವಿಚಾರ ವಿದ್ಯಾಭ್ಯಾಸ ಕ್ರಮದಲ್ಲಿ ಆಗಬೇಕಾದ ನಾನಾ ರಣಗಳ ಪೈಕಿ ಒಂದು ಮಾತ್ರ ಆಗಿದೆ. ಅದು ಮಾಧ್ಯಮಿಕ ಶಾಲೆಯ ಪರೀಕ್ಷೆಯನ್ನು ರದ್ದು ಮಾಡಬೇಕೆಂಬುದು. ಮಾಧ್ಯಮಿಕ ಶಾಲೆಯ ಪರೀಕ್ಷೆಯನ್ನು ಬಹಳ ಕಾಲದ ಹಿಂದೆ ವಿದ್ಯಾಭ್ಯಾಸ ಕ್ರಮದಲ್ಲಿ ಅಳವಡಿಸಿದರು. ಆಗ ಈ ಪರೀಕ್ಷೆಗೆ ಕುಳಿತುಕೊಳ್ಳುವ ಮಕ್ಕಳ ಸಂಖ್ಯೆ ಕೇವಲ ಕಡಿಮೆಯಾಗಿತ್ತು. ಅಲ್ಲದೆ ಆಗ ಹೆಚ್ಚಾಗಿ ಓದುವವರು ಕಡಮೆಯಾಗಿದ್ದರಿಂದ ಆ ಪರೀಕ್ಷೆ ಇಡಬಹುದಾಗಿತ್ತು. ಅಲ್ಲದೆ ಆಗ ದೇಶದಲ್ಲಿ ಕಾಲೇಜುಗಳೂ, ಹೈಸ್ಕೂಲುಗಳೂ ಕಡಮೆಯಾಗಿದ್ದುವು. ಅಂಥ ಸಂದರ್ಭದಲ್ಲಿ ಒಂದು ಪರೀಕ್ಷೆ ದೇಶದಲ್ಲಿ ಮಕ್ಕಳಿಗೆ ಅವಶ್ಯಕವಾಗಿತ್ತು. ಓದಲು ಮಕ್ಕಳು ಮುಂದೆ ಬರಬಹುದು ಎಂಬ ದೃಷ್ಟಿಯಿಂದ ಆಗ ಅದನ್ನು ಜಾರಿಗೆ ತಂದರು ಆಗ ದೇಶದಲ್ಲಿ ಕಾಲೇಜುಗಳು ಅಷ್ಟಿರಲಿಲ್ಲ; ಈಗ 33 ಕಾಲೇಜುಗಳಿವೆ, 220 ಹೈಸ್ಕೂಲುಗಳಿವೆ. ಹೀಗೆ ಹೆಚ್ಚಾಗಿ ಮೇಲ್ಜರ್ಜೆ ವಿದ್ಯಾಭ್ಯಾಸ ಪಡೆಯುವುದಕ್ಕೆ ಬೇಕಾದಷ್ಟು ಸೌಕರ್ಯಗಳು ಈಗ ಒದಗಿವೆ. ಅಲ್ಲದೆ ಶಾಲೆಗೆ ಬರುವ ಮಕ್ಕಳ ವಯಸ್ಸನ್ನು ತೀರಾ ಕಡಮೆಯಾಗಿದೆ. ಮೊದಲು ನಮಗೆ ಗೊತ್ತಿರುವ ಹಾಗೆ ಹಲವಾರು ವರ್ಷಗಳ ಹಿಂದೆ ಮಿಡ್ಲ್ ಸ್ಕೂರ್ ಪರೀಕ್ಷೆಗೆ ಕುಳಿತುಕೊಳ್ಳಬೇಕಾದರೆ ಸುಮಾರು 16-17 ವರ್ಷ ವಯಸ್ಸಾದವರು ಬರುತ್ತಿದ್ದರು, ಈ ದಿವಸ ಕುಳಿತುಕೊಳ್ಳುವ ಮಕ್ಕಳ ವಯಸ್ಸನ್ನು ಕೇವಲ 9-10 ವರ್ಷಗಳು, ಈಗ ಇಂಥ ಸ್ಥಿತಿಯಿದೆ. ಮಕ್ಕಳಿಗೆ ಚಿಕ್ಕ ವಯಸ್ಸಿನಲ್ಲಿ ಹೆಚ್ಚಾಗಿ ಶ್ರಮವಾಗುವಂಥ ಕೆಲಸವನ್ನು ಮತ್ತು, ಅವರ ಮನಸ್ಸಿಗೆ ಹೆಚ್ಚು ಕೆಲಸವನ್ನು ಕೊಡುವ ಯಾವ ಕಾರ್ಯಗಳನ್ನೂ ಕೂಡ ಕೊಡಬಾರದೆಂದು ನಿಪುಣರು ಹೇಳುತ್ತಾರೆ ಮತ್ತು ನಮ್ಮ ಅನುಭವದಲ್ಲೂ ಅದು ನ್ಯಾಯವಾಗಿ ಕಂಡುಬಂದಿದೆ. ಈಗ ಈ ಪರೀಕ್ಷೆ ಇರುವುದರಿಂದ ಏನಾಗುತ್ತಿದೆಯೆಂದರೆ ಮಕ್ಕಳ ಮನಸ್ಸಿಗೆ ಕೇವಲ ಪರೀಕ್ಷೆ ಇದೆಯೆಂದು ಗಾಬರಿ ಉಂಟಾಗುವುದಕ್ಕೂ, ಅದರ ಬಗ್ಗೆ ರಾತ್ರಿ ಹಗಲು ಯೋಚನೆ ಮಾಡಿ ತೀರ್ಗಡೆಯಾಗಬೇಕೆಂದು ಅತಿಯಾಗಿ ಶ್ರಮಪಡುವುದಕ್ಕೂ ಈ ಮೂಲಕ ಮಕ್ಕಳ ಮನಸ್ಸಿಗೆ ಒಂದು ಭಯ ಮತ್ತು ಶ್ರಮ ಉಂಟಾಗುವುದಕ್ಕೂ ಕಾರಣವಾಗಿದೆ.

ಈಗ ನಾವು ನೋಡುವ ಹಾಗೆ ಸ್ಕೂಲು ಮತ್ತು ಕಾಲೇಜುಗಳಲ್ಲಿ ಸ್ಟ್ಯಾಂಡರ್ಡ್ ಬಹಳ ಬದ್ದುಹೋಗಿದೆ. ಅದಕ್ಕೆ ಅನೇಕ ಕಾರಣಗಳನ್ನು ಹೇಳಿದ್ದಾರೆ. ಈಗ ಕೇವಲ ಚಿಕ್ಕ ವಯಸ್ಸಿನಲ್ಲಿ ಎಳೆಯ ಮನಸ್ಸಿಗೆ ಹೆಚ್ಚು ಶ್ರಮವುಂಟಾಗುವುದರಿಂದ ಮುಂದೆ ಬಹಳ ದುಷ್ಪರಿಣಾಮವಾಗುತ್ತದೆಂದು ಹೇಳದೆ ವಿಧಿಯಿಲ್ಲ. ಮಕ್ಕಳ ಮಾನಸಿಕ ಶಕ್ತಿ ಕುಂದುವುದು, ಆ ಮೂಲಕ ದೈಹಿಕ ಶಕ್ತಿಯೂ ಕುಂದುವುದಕ್ಕೆ ಅವಕಾಶವಾಗುವುದು, ಇದಕ್ಕೆ ಕೇವಲ ಚಿಕ್ಕ ವಯಸ್ಸಿನಲ್ಲಿ ಪರೀಕ್ಷೆಗೆ ಕಳುಹಿಸುವುದೇ ಕಾರಣವಾಗಿದೆ. ಇಷ್ಟೇ ಅಲ್ಲದೆ ಇನ್ನೂ ಹಲವಾರು ಕಾರಣಗಳಿಂದ ಈ ಪರೀಕ್ಷೆ ಹೋಗಬೇಕಾದುದು ಅವಶ್ಯಕ ಎಂಬುದು ಅನೇಕರ ಮನಸ್ಸಿಗೆ ಕಂಡುಬಂದಿದೆ. ಈಗ ನಾವು ನೋಡುವುದಾದರೆ ನಾಲ್ಕು ವರ್ಷದಲ್ಲಿ 15 ಸಾವಿರ ಮಕ್ಕಳು ಮಾಧ್ಯಮಿಕ ಶಾಲೆ ಪರೀಕ್ಷೆಗೆ ಕುಳಿತುಕೊಳ್ಳುತ್ತಿದ್ದರು. ಈ ದಿವಸ 41 ಸಾವಿರ ಮಕ್ಕಳು ಕುಳಿತುಕೊಳ್ಳುತ್ತಿದ್ದಾರೆ ಇಷ್ಟು ಸಂಖ್ಯೆಯಲ್ಲಿ ಕುಳಿತುಕೊಳ್ಳುವ ಮಕ್ಕಳಿಗೆ ಪರೀಕ್ಷೆಯೆಂಬುದೇ ಒಂದು ದೊಡ್ಡ ಸಮಸ್ಯೆಯಾಗಿದೆ.

ಪ್ರಶ್ನೆ ಪತ್ರಿಕೆಗಳನ್ನು ಅಚ್ಚು ಹಾಕಿಸಲಾಗುತ್ತಿದೆ. ಅಚ್ಚು ಹಾಕುವಾಗ ಆ ಪ್ರಶ್ನೆಗಳು ಮಕ್ಕಳಿಗೆ ಗೊತ್ತಾಗದ ರೀತಿಯಲ್ಲೂ, ಹೊರಗೆ ಬಾರದಂತೆಯೂ ನೋಡಿಕೊಳ್ಳತಕ್ಕದ್ದೂ ಬಹಳ ಶ್ರಮ ಸಾಧ್ಯವಾದ ಕೆಲಸವಾಗಿದೆ. ಹಾಗೆ ಬಹಳ ಕಟ್ಟನಲ್ಲಿ ಬಹಳ ರಹಸ್ಯವಾಗಿ ಪರೀಕ್ಷೆ ಪತ್ರಿಕೆಗಳನ್ನು ಅಚ್ಚುಹಾಕಿಸಿ ಪರೀಕ್ಷೆ ದಿವಸ ಮಕ್ಕಳಿಗೆ ಕೊಡುವುದು ಸರಿಯಾದ ಮಾರ್ಗ. ಆದರೆ ಅಧಿಕ ಸಂಖ್ಯೆಯಲ್ಲಿ ಅಚ್ಚು ಹಾಕಿಸುವುದರಿಂದ ರಹಸ್ಯವಾಗಿಡುವುದು ಕಷ್ಟವಾಗಿ ಅನೇಕ ಪಟ್ಟಣಗಳಲ್ಲಿರುವ ಮಕ್ಕಳಿಗೆ ಮೊದಲೇ ಎರ್ಲಾ ಪ್ರಶ್ನೆಗಳೂ ಗೊತ್ತಾಗಿ, ಹಳ್ಳಿಗಳ ಶಾಲೆಗೆ ಹೋಗುವ ಮಕ್ಕಳಿಗೆ ಒಂದು ಪ್ರಶ್ನೆಯೂ ಗೊತ್ತಾಗದೆ ಬಹು ತೊಂದರೆಯುಂಟಾಗುವುದಕ್ಕೆ ಕಾರಣವಾಗಿದೆ. ಪರೀಕ್ಷೆಯ ಫಲತಾಂಶ ಪಟ್ಟಣದಲ್ಲಿ ಬರುವುದಕ್ಕೂ ಹಳ್ಳಿಯಲ್ಲಿ ಬರುವುದಕ್ಕೂ ಹೋಲಿಸಿ ನೋಡಿದರೆ ನಿಜವಾದ ಸಂಗತಿ ಗೊತ್ತಾಗುತ್ತದೆ. ಹೀಗೆ ಪ್ರಶ್ನೆ ಪತ್ರಿಕೆಗಳು ಹೊರಗೆ ಬರುತ್ತವೆಂದು ಗೊತ್ತಾಗಿ ಅವನ್ನು ಸಾಹಸಪಟ್ಟು ತಿಳಿದುಕೊಳ್ಳಬೇಕೆಂಬ ಒಂದು ದುಷ್ಟ ಪದ್ಧತಿ ಮಕ್ಕಳ ಮನಸ್ಸಿನಲ್ಲಿ ಮೂಡುವುದಕ್ಕೆ ಕಾರಣವಾಗಿದೆ. ಮಕ್ಕಳು ಸತ್ಪ್ರಜೆಗಳಾಗಬೇಕು, ಬಹಳ ನೀತಿವಂತರಾಗಬೇಕು ಎಂದು ಮನಸ್ಸಿರುವಾಗ ಚಿಕ್ಕ ವಯಸ್ಸಿನ ಮಕ್ಕಳಿಗೆ ಪ್ರಶ್ನೆ ಪತ್ರಿಕೆಗಳನ್ನು ಪತ್ತೆ ಹಚ್ಚಿ ತೇರ್ಗಡೆಯಾಗೋಣ ಎಂಬ ಚಿತ್ತವೃತ್ತಿ ಬೆಳೆಯುವಂತೆ ಮಾಡುವುದು ಎಂದಿಗೂ ಸಾಧುವಲ್ಲ. ಇಷ್ಟೇ ಅಲ್ಲದೆ ಪರೀಕ್ಷೆ ಇನ್ನೊಂದು ವಾರ ಇರಬೇಕಾದರೆ ಪ್ರಶ್ನೆಗಳನ್ನು ಬರೆದು ತೆಗೆದುಕೊಂಡು ಬಂದು ಮಾರ್ಕೆಟ್ಟಿನಲ್ಲಿ ತರ್ಕಾರಿ ಮಾರುವಂತೆ ಮಾರುವ ಪರಿಸ್ಥಿತಿ ಈಗ ಒದಗಿದೆ.

Sri H. K. SHIVARUDRAPPA.—On a point of order, Sir. Is it relevant, Sir?

Mr. SPEAKER.—The Hon'ble Member may please hear him.

ಶ್ರೀ ಎಸ್. ಕರಿಯಪ್ಪನವರು.—ಅಷ್ಟೇ ಅಲ್ಲದೆ 41,000 ಹುಡುಗರ ಪ್ರಶ್ನೆಪತ್ರಿಕೆಗಳನ್ನು ವ್ಯಾಲ್ಯು ಮಾಡಬೇಕಾದರೆ, ಅವುಗಳನ್ನು ಏಮರ್ಶಮಾಡಿ ನೋಡಬೇಕಾದರೆ, ಅಂಕಗಳನ್ನು ಕೊಡಬೇಕಾದರೆ ಆಗತಕ್ಕ ಖರ್ಚು ಎಷ್ಟು ಎಂಬುದನ್ನು ತಾವು ಆಲೋಚನೆಮಾಡಬೇಕಾಗಿದೆ. ಹುಡುಗರು ಯಾರಾರು ಪರೀಕ್ಷಕರು ಎಂಬುದನ್ನು ಕಂಡುಹಿಡಿದು ಅವರ ಮನೆಗೆ ಸುತ್ತಿ ಹಣವನ್ನಾದರೂ ಕೊಟ್ಟು ತೇರ್ಗಡೆ ಆಗುತ್ತಿರುವುದು ಅನೇಕರ ಗಮನಕ್ಕೆ ಬರದೇ ಇಲ್ಲ. ಹೀಗೆ ಅನೇಕ ವಿಧದಲ್ಲಿ ಮನುಷ್ಯನ ಶೀಲವನ್ನು ಹಾಳುಮಾಡತಕ್ಕ ಸನ್ನಿವೇಶಗಳಿಗೆ ಅವಕಾಶ ಕೊಟ್ಟಿರತಕ್ಕ ಈ ಪದ್ಧತಿಯನ್ನು ತೆಗೆದುಹಾಕಬೇಕಾದದ್ದು ಯಾವ ದೃಷ್ಟಿಯಿಂದ ನೋಡಿದರೂ ಕೂಡ ತುಂಬಾ ಆವಶ್ಯಕ ಎಂಬುದು ವ್ಯಕ್ತವಾಗುತ್ತದೆ. ಅಲ್ಲದೆ ಮತ್ತೊಂದು ಅಂಶವನ್ನು ಗಮನಿಸಬೇಕು. ಪರೀಕ್ಷೆಯನ್ನು ತೆಗೆದರೆ ಉಪಾಧ್ಯಾಯರು ಇನ್ನೇನು ಪರೀಕ್ಷೆ ಇಲ್ಲ, ಏನೂ ಇಲ್ಲ, ಹೆಚ್ಚುಜನ ಪಾಸ್ ಆದರು ಎಂದರೆ ಮೇಷ್ಟರು ಚೆನ್ನಾಗಿ ಪಾಠಹೇಳಿದ್ದಾರೆ ಎನ್ನುತ್ತಾರೆ ಇಲ್ಲದೇಇದ್ದರೆ ಚೆನ್ನಾಗಿ ಹೇಳಲಿಲ್ಲ ಎನ್ನುತ್ತಾರೆ ಎಂದು ಹೇಳಿ ಹೈಸ್ಕೂಲಿಗೆ ಹೋದಮೇಲೆ ಹುಡುಗರ ಗತಿ ಹೇಗಾದರೂ ಆಗಲಿ ಎಂದು ಹೇಳಿ ಉದಾಸೀನರಾಗಬಹುದು ಎಂಬುದಾಗಿ ಅನೇಕರು ಶಂಕೆಪಡುತ್ತಾರೆ. ನಾನು ಹೇಳುತ್ತೇನೆ, ಮದರಾಸಿನಲ್ಲಿ ಈ ಪದ್ಧತಿ ಏನೂಇಲ್ಲ. ಆದರೆ ಅಲ್ಲಿನ ಸ್ಟ್ಯಾಂಡರ್ಡ್ ಕಡಮೆಯಾಗಿಲ್ಲ; ಉಪಾಧ್ಯಾಯರು ಆ ರೀತಿ ಉದಾ

ಏಕೆಂದರೆ ನಮ್ಮ ವಿದ್ಯಾಭ್ಯಾಸ ಕ್ರಮದಲ್ಲೇ ನಿಮ್ನ ತರಗತಿಯವರ ವಿದ್ಯಾಭ್ಯಾಸಕ್ಕೆ ಸಂಬಂಧಿಸಿದ ಹಾಗೆ ಕೆಲವು ದೋಷದೋಷಗಳಿವೆ. ಆ ದೋಷ ದೋಷಗಳೇ ನಿಮ್ನ ತರಗತಿಯವರ ಮಕ್ಕಳು ತಮ್ಮ ವ್ಯಾಸಂಗವನ್ನು ಹೈಸ್ಕೂಲು ಮತ್ತು ಕಾಲೇಜುಗಳಲ್ಲಿ ಮುಂದುವರಿಸುವುದಕ್ಕೆ ಅಡ್ಡಿಯಾಗಿರತಕ್ಕವು. ಹಿಂದೆ ಸರ್ಕಾರದವರು ಉದ್ದೇಶಪೂರ್ವಕವಾಗಿಲ್ಲದಿದ್ದರೂ ಕಾರಣಾಂತರದಿಂದ ಈ ಕೆಲವು ಅಡ್ಡಿ ಆತಂಕಗಳನ್ನು ಪರಿಹರಿಸದೆ ಬಿಟ್ಟು ಬಿಟ್ಟಿದ್ದಾರೆ. ಪ್ರತಿನಿಧಿಗಳಾದ ನಾವು ಆಗಾಗ್ಗೆ ಹೇಳಿದ್ದ ವಿಚಾರಗಳನ್ನು ಸರ್ಕಾರದಲ್ಲಿ ಸರಿಯಾಗಿ ಗಮನಿಸದೆ ಹೋದದ್ದರಿಂದಲೇ ಇಂದು ಈ ತೊಂದರೆಗಳುಂಟಾಗಿವೆಯೆಂದು ನಾನು ಹೇಳಬೇಕಾಗಿದೆ.

ನಾನೀಗ ಈ ನಭೆಯ ಮುಂದಿರುವ ನಿರ್ಣಯಕ್ಕೆ ಸಂಬಂಧಪಟ್ಟ ಹಾಗೆ ಹೇಳುವುದಾದರೆ, ಸರ್ಕಾರದವರು ಹಾಸ್ಟಲು ಕಟ್ಟಡಗಳ ಅಭಾವದ ವಿಚಾರದಲ್ಲಿ ಯಾವಾವ ಡಿಸ್ಟ್ರಿಕ್ಟ್ ಹೆಡ್‌ಕ್ವಾರ್ಟರುಗಳಲ್ಲಿ ತೊಂದರೆಯಾಗಿದೆಯೆಂಬುದನ್ನು ಕಾಲ ಕಾಲಕ್ಕೆ ಪರಿಶೀಲಿಸಿ ತಾವೇ ಕಟ್ಟಡಗಳನ್ನು ತಯಾರುಮಾಡಿ, ಆ ಸೌಲಭ್ಯಗಳನ್ನು ಒದಗಿಸಬೇಕಾಗಿತ್ತು. ಸರ್ಕಾರದವರು ಅದನ್ನು ನಮ್ಮ ನಿಮ್ನ ತರಗತಿಯವರಿಗೆ ಮಾಡಿಕೊಡಲಲ್ಲ. ನಾವು ಆಗಾಗ್ಗೆ ಈ ಬಗ್ಗೆ ಸರ್ಕಾರದವರ ಮೇಲೆ ಒತ್ತಾಯ ಪಡಿಸುತ್ತಲೇ ಬಂದಿದ್ದೇವೆ. ಈ ಬಗ್ಗೆ ಸರ್ಕಾರದವರೇನೋ ಒಂದು ಸರ್ಕಾರಿ ಹುಕುಮನ್ನು ಸಾದರು ಮಾಡಿದರು. ಅದು 1947ನೆಯ ಏಪ್ರಿಲ್ 29 ರಲ್ಲಿ ಸಾದರಾವದ್ದು. ಇದಕ್ಕೆ ಹಿಂದೆ ಒಂದು ಆರ್ಡರ್ ಜಾರಿಯಲ್ಲಿತ್ತು. ಅದರ ಪ್ರಕಾರ ಯಾವುದಾದರೂ ಖಾಸಗಿ ಸಂಸ್ಥೆಗಳು, ಅಥವಾ ಯಾವುದಾದರೂ ಕೋಮಿಗೆ, ಪಂಗಡಕ್ಕೆ ಸೇರಿದವರು ಮುಂದೆ ಬಂದು ತಾವು ಇಂಥ ಕಟ್ಟಡವನ್ನು ಹಾಸ್ಟಲಿಗಾಗಿ ಕಟ್ಟಿಸಿಕೊಡುತ್ತೇವೆಂದು ಹೇಳಿ ಸರ್ಕಾರಕ್ಕೆ ಮನವಿ ಮಾಡಿಕೊಂಡರೆ, ಸರ್ಕಾರದವರೂ ಆ ಬಗ್ಗೆ 25,000 ರೂಪಾಯಿಗಳಿಗೆ ಮಿಗಾದಂತೆ ಅವರಿಗೆ ದ್ರವ್ಯ ಸಹಾಯ ನೀಡುವುದಾಗಿ ಹೇಳಿದ್ದಾರೆ. ಇತ್ತೀಚೆಗೆ 1947ರಲ್ಲಿ ಇದು ಮಾರ್ಪಾಟಾಗಿ ಈ 25,000 ರೂಪಾಯಿಗಳ ಅವಧಿಯನ್ನು 50,000 ಕ್ಕೆ ಹೆಚ್ಚಿಸಿಕೊಟ್ಟಿದ್ದಾರೆ. ಇದರಿಂದಲೂ ಒಟ್ಟಿನಲ್ಲಿ ಏನಾಯಿತು? ಯಾವ ಕೋಮಿನವರು ಅಥವಾ ಸಂಸ್ಥೆಗಳವರು ಅಥವಾ ಸಾರ್ವಜನಿಕ ಪಂಗಡಗಳವರು ತಾವು ಕೊಂಚ ದ್ರವ್ಯ ಸಹಾಯ ಮಾಡಿ ಹಾಸ್ಟಲನ್ನು ಕಟ್ಟಿಸಿಕೊಡುತ್ತೇವೆಂದು ಮುಂದೆ ಬಂದು ಸರ್ಕಾರಕ್ಕೆ ಮನವಿ ಮಾಡಿಕೊಂಡರೋ ಅವರಿಗೆ ಸರ್ಕಾರದ ಕಡೆಯಿಂದಲೂ ದ್ರವ್ಯ ಸಹಾಯವನ್ನು ಪಡೆಯುವುದಕ್ಕೆ ಸಾಧ್ಯವಾಯಿತು. ಅವಿಲ್ಲದೆ ಯಾವ ಕೋಮಿನವರಿಗೆ, ಪಂಗಡದವರಿಗೆ ಯಾವ ಹಣ ಸೌಕರ್ಯವೂ ಇಲ್ಲದೆ ತಮ್ಮ ಪಂಗಡದ ವಿದ್ಯಾರ್ಥಿಗಳಿಗೆ ಹಾಸ್ಟಲು ಕಟ್ಟಿಸಿಕೊಡುವುದಕ್ಕೆ ಹಣದ ಚೈತನ್ಯವಿಲ್ಲದೆ ಹೋಯಿತೋ ಅವರಿಗೆ ಸರ್ಕಾರದ ಕಡೆಯಿಂದ ಈ ಹಣದ ಸಹಾಯವೂ ಇಲ್ಲದೆ ಹೋಯಿತು, ಅಷ್ಟೆ. ಅಂದ ಮಾತ್ರಕ್ಕೆ ಇತರ ಪಂಗಡಗಳವರಿಗೆ ಹೀಗೆ ಹಾಸ್ಟಲು ಕಟ್ಟಡಗಳಿಗಾಗಿ ಸರ್ಕಾರದವರು ಹಣ ಕೊಡ ಕೊಡ ದೆಂದೇನೂ ನನ್ನ ಅಭಿಪ್ರಾಯವಲ್ಲ. ಗ್ರಾಮಾಂತರಗಳಿಂದ ಬಂದ ಎಲ್ಲಾ ಪಂಗಡದ ವಿದ್ಯಾರ್ಥಿಗಳಿಗೂ ಇಂಥಾ ಸೌಲಭ್ಯ ದೊರಕಿಸಿಕೊಡಬೇಕಾದದ್ದು ಯುಕ್ತವೇ. ಇಂಥ ಸೌಕರ್ಯಗಳನ್ನು ಕಲ್ಪಿಸಿಕೊಡಬೇಕಾದದ್ದು ಸಾರ್ವಜನಿಕರ ಮತ್ತು ಸರ್ಕಾರದವರ ಕರ್ತವ್ಯ, ನಿಜ. ಆದರೆ, ಈ ಮೇಲಿನ ಆರ್ಡರಿನಿಂದ ಯಾವ ಕೋಮಿನವರಲ್ಲಿ ಧನಿಕರಿದ್ದು 40-50 ಸಾವಿರ ರೂಪಾಯಿಗಳನ್ನು ಯಾವ ಕೋಮಿನವರಿಗೆ ಒದಗಿಸಿಕೊಳ್ಳಲು ಸಾಧ್ಯವಾಯಿತೋ, ಅಂಥವರಿಗೆ ಸರ್ಕಾರದಿಂದಲೂ 40-50 ಸಾವಿರ ರೂಪಾಯಿಗಳ ಸಹಾಯವೂ ದೊರಕಿತು; ಯಾವ ಹಿಂದುಳಿದ ಕೋಮಿನವರಿಗೆ ಆ ಶಕ್ತಿಯಿರಲಿಲ್ಲವೋ ಅವರಿಗೆ ಏನೂ ಸಿಕ್ಕಲಿಲ್ಲ. ಆದ್ದರಿಂದ ಸರ್ಕಾರದವರು ಈ ಸರ್ಕಾರಿ ಆರ್ಡರ್ ಮಾಡುವಾಗಲೇ ಯಾವ ಕೋಮಿನವರಿಗೆ ಹೀಗೆ ಹಣ ಕೊಡುವುದಕ್ಕೆ ಶಕ್ತಿಯಿಲ್ಲವೋ ಅಂಥವರಿಗೆ ಸರ್ಕಾರದಿಂದಲೇ ಕಟ್ಟಿಸಿಕೊಡಲಾಗುತ್ತದೆಂದು ಒಂದು ವಿನಾಯಿತಿ ಕಲ್ಪಿಸದಿದ್ದರೆ ಚೆನ್ನಾಗಿತ್ತು. ಅದು ಮಾಡದಿದ್ದರಿಂದ, ಯಾವ ಕೋಮಿಗೆ ತಮ್ಮ ಕಾಲ ಮೇಲೆ ತಾವು ನಿಲ್ಲುವ ಶಕ್ತಿಯಿಲ್ಲವೋ ಅವರಿಗೆ ಕೊಂದರೆ ಮಾಡಿದಂತಾಯಿತು. ಇದರಿಂದ ಗ್ರಾಮಾಂತರಗಳಿಂದ ಬಂದ ಅನೇಕ ನಿಮ್ನ ತರಗತಿಯವರ ಮಕ್ಕಳು ಪಟ್ಟಣಗಳಲ್ಲಿ ಓದುವುದಕ್ಕೆ ಹಾಸ್ಟಲ್ ಸೌಕರ್ಯಗಳು ಸಿಕ್ಕದೆ ತಮ್ಮ ಓದು ನಿಲ್ಲಿಸಿ ಅವಿದ್ಯಾವಂತರಾಗಿರುವುದಕ್ಕೆ ಕಾರಣವಾಯಿತು. ಹೈಸ್ಕೂಲುಗಳಿಗೆ ಸಂಬಂಧಪಟ್ಟಂತಿರುವಂತೆಯೇ ವಿಶ್ವವಿದ್ಯಾನಿಲಯಕ್ಕೆ ಸಂಬಂಧಪಟ್ಟ ಹಾಗೆ ಇದೇ ರೀತಿಯ ಒಂದು ಆರ್ಡರ್ ಇದೆ. ಅವರಲ್ಲೂ ಸಹ ಅರ್ಧಕ್ಕೆ ಮಿಗಾದಂತೆ ಬಲ್ಡಿಂಗ್ ಗ್ರ್ಯಾಂಟ್ ಕೊಡಬಹುದೆಂದು ಹೇಳಿದೆ. ಹಾಗೂ ಹರಿಜನರಿಗೆ ಉಪಕಾರವಾಗಲಲ್ಲ. ಕೊನೆಗೆ ಈ ವರ್ಷ ಹರಿಜನರಲ್ಲಿ ಮತ್ತು ಇತರ ನಿಮ್ನ ತರಗತಿಯವರಲ್ಲಿ ಯಾರಾದರೂ ಹಾಸ್ಟಲ್ ಕಟ್ಟಡ ಕಟ್ಟಿಸಿಕೊಡಲು ಸ್ವಲ್ಪ ಹಣ ಕೊಟ್ಟು ಮುಂದೆ ಬರುವುದಾದರೆ 3/4 ಭಾಗದಷ್ಟು ಹಣವನ್ನು ಸರ್ಕಾರದವರೇ ಭರಿಸಿಕೊಳ್ಳುತ್ತಾರೆಂದು ಹುಕುಂ ಮಾಡಿದ್ದರೂ ಅಷ್ಟು ಹಣವನ್ನು ಕೊಡುವುದಕ್ಕೆ ಕೂಡ ನಮ್ಮಲ್ಲಿ ಯಾರೂ ಇಲ್ಲದೆ, ಆ ಸಹಾಯವನ್ನೂ ಪಡೆಯರಾಗಿಲ್ಲ. 10,000 ರೂಪಾಯಿಗಳನ್ನು ಕೊಡುವವರು ಒಬ್ಬರನ್ನು ಕೂಡ ನಮ್ಮ ಪಂಗಡದವರಲ್ಲಿ ಹೊಂದರಾಗಿಲ್ಲ. ಹೀಗಾಗಿ ನಮ್ಮ ಪಂಗಡದ ವಿದ್ಯಾರ್ಥಿಗಳಿಗೆ ಹಾಸ್ಟಲ್‌ಗಳಿಲ್ಲದೆ ಹೋಗಿದೆ. ನಮ್ಯಕ್ಕೆ ಮೈಸೂರು, ಬೆಂಗಳೂರುಗಳಲ್ಲಿ ಮತ್ತು ಇತರ ಕೆಲವು ಕಡೆ ಮಾತ್ರ ಇಂಥ ಹಾಸ್ಟಲುಗಳಿವೆ. ಅವು ಅಲ್ಲಿಯ ಬಾಡಿಗೆ ಕಟ್ಟಡಗಳಲ್ಲಿವೆ. ಶಿವಮೊಗ್ಗಾದಲ್ಲೇನೋ ಇತರ ಎಲ್ಲಾ ಮಂಡಲಿನಾಡು ಪ್ರದೇಶ ವಿದ್ಯಾರ್ಥಿಗಳವರಿಗೆ ಮಾಡಿಸಿಕೊಟ್ಟ ಹಾಗೆ ನಮ್ಮ ಪಂಗಡದ ವಿದ್ಯಾರ್ಥಿಗಳಿಗೂ ಒಂದು ಕಟ್ಟಡ ಮಾಡಿಸಿಕೊಟ್ಟಿದ್ದೀರಿ; ಅಷ್ಟೆ. ಅದು ಬಿಟ್ಟರೆ ಬಾಕಿ ಎಲ್ಲಾ ಕಡೆಯೂ ಸರ್ಕಾರದವರು ಬಾಡಿಗೆ ಕಟ್ಟಡಗಳನ್ನು ಮಾಡಿಕೊಟ್ಟಿದ್ದಾರೆ. ಬೆಂಗಳೂರಿನಲ್ಲಿರುವ ನರಸಿಂಹರಾಜ ಹಾಸ್ಟಲಿನವರು 1920ನೆಯ ಇಸವಿಯಿಂದಲೂ ಹೀಗೆಯೇ ತಿಂಗಳಿಗೆ 100 ರೂಪಾಯಿಗೆ ಮೆಲ್ಬಟ್ಟು ಬಾಡಿಗೆ ಕೊಡುತ್ತಾ ಬಂದಿದ್ದಾರೆ. ಅದೂ ಯಾವುದೋ ತರೆ ಮಾರಿನಲ್ಲಿ ಕಟ್ಟಿದ ಕಟ್ಟಡ!

4 P.M.

ಎರಡು ತರೆಮಾರಿನಿಂದ ಕೊಟ್ಟಿರತಕ್ಕ ಬಾಡಿಗೆಗಳನ್ನು ಸೇರಿಸಿ ಹಾಸ್ಟೆಲ್‌ಗಳನ್ನು ಮಾಡಿದ್ದಿದ್ದರೆ ಸರ್ಕಾರಕ್ಕೆ ಎಷ್ಟೋ ಹಣ ಉಳಿತಾಯವಾಗುತ್ತಿತ್ತು, ಈ ಪಂಗಡದ ವಿದ್ಯಾರ್ಥಿಗಳಿಗೆ ಹಾಸ್ಟೆಲೂ ಸಿಕ್ಕುತ್ತಿತ್ತು ಎಂದು ನನ್ನ ಅಭಿಪ್ರಾಯ. ಮೈಸೂರು ಬೆಂಗಳೂರುಗಳ ಕಾಲೇಜುಗಳಲ್ಲಿರುವ ವಿದ್ಯಾರ್ಥಿಗಳು ಮನೆಯಿಲ್ಲದೆ ಕೊಂದರೆ ಪಡುತ್ತಿರುವುದು ಎಲ್ಲರಿಗೂ ಗೊತ್ತಿದೆ. ಮೈಸೂರಿನಲ್ಲಿ ನಜರಾಬಾದಿನಲ್ಲಿ ಒಂದು ಹಾಸ್ಟೆಲ್ ಇದೆ. ಅದನ್ನು ಬದರಾಯಿಸಬೇಕೆಂದು ಸರ್ಕಾರದಲ್ಲಿ

(ಶ್ರೀ ಯಂ. ಮಾದಯ್ಯನವರು)

ನಾಲ್ಕೈದು ವರ್ಷಗಳಿಂದ ಒತ್ತಾಯ ಮಾಡಿದೆವು. ಬದಲಾಯಿಸಿಕೊಡಬೇಕೆಂದು ಮನಸ್ಸಿದ್ದರೂ ಹಾಸ್ಟಲಗೆ ಸರಿಯಾದ ಕಟ್ಟಡವಿಲ್ಲದೆ ತೊಂದರೆ ಪಡುತ್ತಿದ್ದಾರೆ ಹೀಗಿರುವುದರಿಂದ ಸರ್ಕಾರವೇ ಮುಂದೆ ಬಂದು ಈ ಪಟ್ಟಣಗಳಲ್ಲಿ ಹಾಸ್ಟರ್ ಕಟ್ಟಡಗಳನ್ನು ಕಟ್ಟಿಸಿದರೆ ಈಗ ಮಕ್ಕಳಿಗಿರುವ ತೊಂದರೆ ನಿವಾರಣೆಯಾಗಿ ಮುಂದೆ ಅವರ ವಿದ್ಯಾಭ್ಯಾಸಕ್ಕೆ ಅನುಕೂಲವಾಗುತ್ತದೆ. ಆದುದರಿಂದ ಸರ್ಕಾರದಲ್ಲಿ ನಾನು ಕೇಳಿಕೊಳ್ಳುವುದೇನೆಂದರೆ, ಈ ನಿರ್ಣಯದಲ್ಲಿ ಕೇಳಿಕೊಳ್ಳುವ ಪ್ರಕಾರ ಈ ವರ್ಷ ಮೈಸೂರು ಬೆಂಗಳೂರು ಎರಡು ಪಟ್ಟಣಗಳಲ್ಲಿ ಸರ್ಕಾರದವರು ಸಂಬಂಧಪಟ್ಟ ಇಲಾಖೆಯವರಿಂದ ಅಂದಾಜು ತಯಾರಿಸಿ ಕಟ್ಟಡವನ್ನು ಕಟ್ಟಿಸಿಕೊಟ್ಟು ಹಾಸ್ಟರ್ ಸೌಲಭ್ಯವನ್ನು ಹೆಚ್ಚಿಸಿಕೊಡಬೇಕೆಂದು ಪ್ರಾರ್ಥಿಸುತ್ತೇನೆ. ಈ ಸಾರಿಯ ಬಡ್ಜೆಟ್ಟನ್ನು ನೋಡಿದರೆ, ಪ್ರತಿ ವರ್ಷವೂ (ಸಿ) ಪರಿಶಿಷ್ಟದಲ್ಲಿ ಕಟ್ಟಡಕ್ಕಾಗಿ ಎರಡು ಲಕ್ಷ ರೂಪಾಯಿ ಒದಗಿಸುತ್ತಿದ್ದುದು ಈ ಸಾರಿ ಇಲ್ಲ. ಸಾರ್ವಜನಿಕ ಹಿತದೃಷ್ಟಿಯಿಂದ ಒಂದು ಬೇಡಿಕೆಯನ್ನು ತಮ್ಮ ಮುಂದಿಟ್ಟರೂ ಕೂಡ ಶಾಸನ ಸಭಾ ಸದಸ್ಯನಾಗಿ ಸರ್ಕಾರದ ತೊಂದರೆಯನ್ನೂ ಅರಿತುಕೊಳ್ಳುವುದು ಅಗತ್ಯ. ಹೀಗಿದ್ದರೂ nation building activitiesಗೆ ಹಣ ಕೂಡದಿರುವುದು ಸರಿಯಲ್ಲ. ಹೆಚ್ಚಾಗಿ ಕೊಡದಿದ್ದರೂ ಸ್ವಲ್ಪವಾದರೂ ಕೊಡಬಹುದಾಗಿತ್ತು. ಆಡಿಷನರ್ ಗ್ರಾಂಟ್ ಕೊಡಲು ಸರ್ಕಾರಕ್ಕೆ ಅಧಿಕಾರವಿದೆ. ಈಗಾಗಲೇ ಕೆಲವು ಅರ್ಧ ಕೆಲಸ ನಡೆದಿರುವುದಕ್ಕೆ ಕೊಟ್ಟಿದೆ. ಇದೇ ರೀತಿ ಈ ಹಾಸ್ಟೆಲುಗಳಿಗೆ ಅಂದಾಜು ತಯಾರಿಸಿ ಈ ವರ್ಷವೇ ಮೊದಲು ಎಷ್ಟು ಗ್ರಾಂಟು ಕೊಡುತ್ತೀರೋ ಅಷ್ಟನ್ನು ಕೊಟ್ಟು ಈ ಕೆಲಸವಾಗುವಂತೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಈ ಬಡ್ಜೆಟ್ಟಿನಲ್ಲಿರತಕ್ಕ ಹೆಸರುಗಳನ್ನೆಲ್ಲಾ ಹೇಳುವುದಕ್ಕೆ ಹೊತ್ತಾಗುತ್ತದೆ. ಬಜೆಟ್ಟಿನಲ್ಲಿ ನನ್ನ ಬೇಡಿಕೆಯನ್ನು ಮಾನ್ಯ ಸಭೆಯ ಮುಂದಿಡುವಾಗ ಒಂದೆರಡು ಅಂಶಗಳನ್ನು ಮಾತ್ರ ಸೂಚಿಸಲಿಚ್ಛಿಸುತ್ತೇನೆ.

ಈಗಾಗಲೇ ಸಾಧ್ಯವಾದಷ್ಟು ವಿದ್ಯಾರ್ಥಿಗಳಿಗೂ ಕೋಮುವಾರು ಹಾಸ್ಟೆಲುಗಳನ್ನು ಕಡಿಮೆ ಮಾಡಬೇಕೆಂಬ ವಾದ ಕೆಲವು ಕಡೆಗಳಿಂದ ಬರುತ್ತಿದೆ. ಇದಕ್ಕೆ ನನ್ನ ಉತ್ತರವಾದರೂ ಇಷ್ಟೆ. ಸರ್ಕಾರದವರು ಮಾನ್ಯ ಸದಸ್ಯರ ಅಭಿಪ್ರಾಯವನ್ನರಿತು, ಶಾಸನ ಸಭಾ ಸದಸ್ಯರ ಬೆಂಬಲವನ್ನು ಪಡೆದು, ಯಾವ ಕೋಮುವಾರು ಹಾಸ್ಟೆಲುಗಳನ್ನೂ ಮಾಡದೆ ಗ್ರಾಮಾಂತರಗಳಿಂದ ಬರತಕ್ಕ ನಿಮ್ಮ ತರಗತಿಯವರ ಮಕ್ಕಳಿಗೆ ವಿದ್ಯಾಭ್ಯಾಸ ಕೊಡುವ ಪಕ್ಷದಲ್ಲಿ, ಕೋಮುವಾರು ಹಾಸ್ಟೆಲುಗಳನ್ನು ಬಿಟ್ಟು ಬಿಡಬಹುದು. ಅದಕ್ಕೆ ನನ್ನ ಬೆಂಬಲವಿದೆ. ಆದರೆ ಈಗ ಬೇರೆ ಯತ್ನವಿಲ್ಲದೆ ಈ ರೀತಿ ಕೇಳಬೇಕಾಗಿದೆ. ಈಗ ಕೆಲವು ಕೊರತೆಗಳಿವೆ.

Mr. SPEAKER.—The Member has two minutes more.

ಶ್ರೀ ಎಂ. ಮಾದಯ್ಯನವರು.—ಸ್ವಾಮಿ, ಈಗಾಗಲೇ ಸಾರ್ವಜನಿಕ ಕಟ್ಟಡಗಳಿಗೆ ಹಣವನ್ನೊದಗಿಸಿದ್ದಾರೆ. ಹರಿಜನರ ಮಕ್ಕಳ ವ್ಯಾಸಂಗಕ್ಕೆ ಸರ್ಕಾರದಿಂದ ಮುಖತ್ತಾಗಿ ಸೌಲಭ್ಯಗಳನ್ನೂದಗಿಸಿಕೊಡಬೇಕಾಗಿರುವುದರಿಂದ, ಎಲ್ಲ ಸೌಲಭ್ಯಗಳನ್ನೂ ನಿಮ್ಮ ತರಗತಿಯವರಿಗೆ ಇನ್ನೂ ಕೂಡದೇ ಇರುವುದರಿಂದ ಇವರು ವ್ಯಾಸಂಗ ಮಾಡಲು ಕೆಲವು ತೊಂದರೆಗಳಿರುತ್ತವೆ. ಈ ದೃಷ್ಟಿಯಿಂದ ಇವರಿಗೇ ಬೇರೆ ಹಾಸ್ಟೆಲುಗಳನ್ನು ಕೊಡಬೇಕಾದುದು ಅತ್ಯಾವಶ್ಯಕ. ಪ್ರತ್ಯೇಕತಾ ಮನೋಭಾವವನ್ನು ಬೆಳೆಸಬೇಕೆಂಬ ಉದ್ದೇಶದಿಂದ ನಾನು ಕೇಳುತ್ತಿಲ್ಲ. ಆದರೆ ಆಡಳಿತದಲ್ಲಿ ಕೆಲವು ನ್ಯೂನತೆಗಳಿರುವುದರಿಂದ ಹೀಗೆ ಒದಗಿಸಬೇಕು. ಹರಿಜನರು ಸಮಾಜದಲ್ಲಿ ಆರ್ಥಿಕ ಸ್ಥಿತಿಯಲ್ಲಿ ಬಹಳ ಹಿಂದುಳಿದಿರುವುದರಿಂದ ಸೆಂಟ್ರಲ್ ಕಾಲೇಜು ಮತ್ತು ವಿವಿಧ ರಾಜ್ಯ ಕಾಲೇಜುಗಳ ವಿದ್ಯಾರ್ಥಿಗಳಿಗಾದರೂ ಈ ಅನುಕೂಲ ಮಾಡಬೇಕು. ಇವರಿಗೆ ತಿಂಗಳೊಂದಕ್ಕೆ ಸರಾಸರಿ 50 ರೂಪಾಯಿಗಳಿಗೆ ಕಡಿಮೆಯಾಗದಷ್ಟು ಬೋರ್ಡಿಂಗ್ ಚಾರ್ಜು ಬೇಕಾಗುತ್ತದೆ. ಇಷ್ಟನ್ನು ಸರ್ಕಾರದವರು ಎಲ್ಲರಿಗೂ ಒದಗಿಸುವುದಕ್ಕೆ ಕಷ್ಟವಾಗುತ್ತದೆ. ಆದುದರಿಂದ ಇದು ಬೇಡ. ಈ ದೃಷ್ಟಿಯಿಂದ ಕೂಡ ಇವರು ಸಾರ್ವಜನಿಕ ಹಾಸ್ಟೆಲುಗಳಲ್ಲಿರಲು ಸಾಧ್ಯವಿಲ್ಲ. ಸಾರ್ವಜನಿಕ ಹಾಸ್ಟೆಲುಗಳಲ್ಲಿ ಒಂದೊಂದರಲ್ಲಿ ಇವರಿಗೆ ಮೂರುನಾಲ್ಕು ಜನರಿಗೆ ಅವಕಾಶ ಸಿಕ್ಕುತ್ತದೆ. ಎಲ್ಲರಿಗೂ ಅವಕಾಶ ಕೊಟ್ಟು ಮುಂದೆ ತರುವುದಕ್ಕಾಗುವುದಿಲ್ಲ. ಕೋಮುವಾರು ಹಾಸ್ಟೆಲುಗಳನ್ನು ತೆಗೆದು ಹಾಕಿದರೂ ಎಲ್ಲರನ್ನೂ ಸೇರಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಈ ಎಲ್ಲ ದೃಷ್ಟಿಗಳಿಂದಲೂ ಪ್ರತ್ಯೇಕವಾಗಿ ನಿಮ್ಮ ತರಗತಿಗಳವರಿಗೆ ವಿದ್ಯಾಭ್ಯಾಸ ಸೌಲಭ್ಯವೊದಗಿಸಲು ಪ್ರಾರಂಭದಲ್ಲಿ ಎರಡು ಪಟ್ಟಣಗಳಲ್ಲಿ ಕಟ್ಟಡಗಳನ್ನು ಕಟ್ಟಿಸಿ, ನಾನು ಹೇಳಿದಹಾಗೆ ಸಾಧ್ಯವಾದರೆ ಆಡಿಷನಲ್ ಗ್ರಾಂಟುಗಳಿಗೆ ನಿಧಿಯಿಂದ ಒಪ್ಪಿಗೆಪಡೆದು ಅಥವ ಇದು ಸಾಧ್ಯವಿಲ್ಲದಿದ್ದರೆ ತಾವೇ ಕೊಟ್ಟು ಮುಂದಿನ ವರ್ಷವಾದರೂ ಪೂರ್ತಿ ಮಾಡಬೇಕು. ಈ ವರ್ಷವೇ ಪ್ರಾರಂಭವಾಡಬೇಕು ಎಂದು ಕೇಳಿಕೊಂಡು, ಈ ನಿರ್ಣಯವನ್ನು ಮಾನ್ಯ ಸದಸ್ಯರ ಒಪ್ಪಿಗೆಗಾಗಿ ಇಡುತ್ತೇನೆ.

Mr. SPEAKER.—Resolution moved :

"That this Assembly is of the opinion that one lakh of rupees be sanctioned by the Government for constructing two hostel buildings one at Mysore and another at Bangalore for the scheduled caste students studying in High Schools and Colleges in the two cities of Mysore and Bangalore."

ಶ್ರೀ ಎಂ. ಚಿಕ್ಕಲಿಂಗಯ್ಯನವರು (ಮುಳಬಾಗಿಲು-ಅನುಸೂಚಿತ ಜಾತಿಗಳು).—ಸ್ವಾಮಿ, ಈ ನಿರ್ಣಯದಲ್ಲಿ ಸ್ವಲ್ಪ ತಿದ್ದುಪಡಿ ಮಾಡಬೇಕೆಂದು ನಾನು ಸೂಚಿಸಿದ್ದೇನೆ. ನನ್ನ ತಿದ್ದುಪಡಿ ಈರೀತಿ ಇದೆ :

(i) ನಿರ್ಣಯದಲ್ಲಿ "ಒಂದುಲಕ್ಷ ರೂಪಾಯಿಗಳನ್ನು" ಎಂಬ ಪದಗಳಿಗೆ ಬದಲಾಗಿ "ನಾಲ್ಕು ಲಕ್ಷದ ಐವತ್ತು ಸಾವಿರ ರೂಪಾಯಿಗಳನ್ನು" ಎಂಬ ಪದಗಳನ್ನು ಸೇರಿಸಿಕೊಳ್ಳಬೇಕು.

(ii) ಮತ್ತು (iii) ನಿರ್ಣಯದಲ್ಲಿ "ಮೈಸೂರಿನಲ್ಲಿ ಒಂದು ಹಾಸ್ಟೆರ್ ಕಟ್ಟಡವನ್ನೂ, ಬೆಂಗಳೂರಿನಲ್ಲಿ ಒಂದು ಹಾಸ್ಟೆರ್ ಕಟ್ಟಡವನ್ನೂ" ಎಂಬ ಪದಗಳಿಗೆ ಬದಲಾಗಿ "ಪ್ರತಿ ಡಿವಿಷ್ಯನ್ನಿಗೂ ಕಸಬೆಯಲ್ಲೂ ಒಂದೊಂದು ಹಾಸ್ಟಲಿನಂತೆ ಒಂಬತ್ತು ಹಾಸ್ಟೆರ್ ಕಟ್ಟಡಗಳನ್ನು" ಎಂಬ ಪದಗಳನ್ನು ಸೇರಿಸಿಕೊಳ್ಳಬೇಕು.

(iv) ನಿರ್ಣಯದಲ್ಲಿ "ಮೈಸೂರು ಮತ್ತು ಬೆಂಗಳೂರು, ಈ ಎರಡು ನಗರಗಳಲ್ಲಿರತಕ್ಕ" ಎಂಬ ಪದಗಳನ್ನು ಬಿಟ್ಟುಬಿಡಬೇಕು."

ಸ್ವಾಮಿ, ಈಗ ಮಾನ್ಯ ಸದಸ್ಯರಾದ ಶ್ರೀಮಾನ್ ಮಾದಯ್ಯನವರು ಈ ನಿರ್ಣಯವನ್ನು ತಮ್ಮ ಮುಂದಿಡುತ್ತಾ, ನಿಮ್ಮ ಜನಾಂಗದ ವಿದ್ಯಾರ್ಥಿಗಳಿಗಿರತಕ್ಕ ಸಹಜವಾದ ಕುಂದುಕೊರತೆಗಳನ್ನು ಬಹಳ ದೀರ್ಘವಾಗಿ ತಮ್ಮ ಮುಂದೆ ಮಂಡಿಸಿದ್ದಾರೆ. ಅದಕಾರಣ ಈ ವಿಚಾರದಲ್ಲಿ ನಾನು ಹೆಚ್ಚು ಹೇಳಬಯಸುವುದಿಲ್ಲ. ಯಾವ ದೃಷ್ಟಿಯಿಂದ ಹಿಂದುಳಿದಿರುವ ಜನಾಂಗವನ್ನು ಮುಂದೆ ತರಬೇಕೆಂಬ ಸದುದ್ದೇಶದಿಂದ, ವಿಶೇಷವಾಗಿ ವಿದ್ಯಾಭ್ಯಾಸದಲ್ಲಿ ಪ್ರೋತ್ಸಾಹ ಕೊಡುತ್ತಿರುವ ತಮಗೆ ಎಲ್ಲವೂ ಮಂದಗತ್ತಾಗಿದೆ. ಆದರೆ ಅವರು ಸೂಚಿಸಿದಂತೆ ವಿದ್ಯಾಭ್ಯಾಸಕ್ರಮದಲ್ಲಿ ಮುಖ್ಯವಾದ ಕೆಲವು ಬದಲಾವಣೆಗಳಾಗಬೇಕು. ಇದರಿಂದ ನಿಮ್ಮ ತರ ಗತಿಯ ವಿದ್ಯಾರ್ಥಿಗಳಿಗೆ ಎಲ್ಲ ವಿಧಗಳಲ್ಲಿಯೂ ಅನುಕೂಲವಾಗಬೇಕು. ಇವರು ಬರಿಯ ಸರ್ಕಾರಿ ನೌಕರಿಗೇ ಹೋಗುವುದಕ್ಕೆ ಬದಲು ವಿದ್ಯಾಭ್ಯಾಸ ಪಡೆದು ತಮ್ಮ ಜೀವನದ ಮಟ್ಟವನ್ನು ಹೆಚ್ಚಿಸಿಕೊಳ್ಳಲು ಸಹಕಾರಿಯಾದ ವಿದ್ಯಾಭ್ಯಾಸವನ್ನು ಇವರಿಗೆ ಕೊಡಬೇಕೆಂದು ನಾವು ಒತ್ತಾಯಮಾಡುತ್ತಿದ್ದೇವೆ. ಬಹಳ ಬುದ್ಧಿವಂತರಾಗಿ ಕಾಲೇಜು ವಿದ್ಯಾಭ್ಯಾಸಮಾಡುವ ವಿದ್ಯಾರ್ಥಿಗಳಿಗೆ ಹೆಚ್ಚು ಸೌಲಭ್ಯಗಳು ಕೆಲವು ಡಿಸ್ಟ್ರಿಕ್ಟ್ ಕಸಬೆಗಳಲ್ಲವೆಯೇ ಏನಾ ತಾಲ್ಲೂಕು ಕಸಬೆಗಳಲ್ಲಿ ಇಲ್ಲ. ಒಂಬತ್ತು ಜಿಲ್ಲೆಗಳಲ್ಲಿಯೂ ಕಾಲೇಜು ಹೈಸ್ಕೂಲುಗಳ ವಿದ್ಯಾರ್ಥಿಗಳಿಗೆ ಅನುಕೂಲ ಕಲ್ಪಿಸಬೇಕು. ಸೋಷಿಯಲ್ ಡಿಸೆಬಿಲಿಟೀಸ್ ತೆಗೆದಿದ್ದರೂ ಜಿಲ್ಲಾ ಕಸಬೆಗಳಲ್ಲಿ ಇವರಿಗೆ ಸರಿಯಾದ ಕಟ್ಟಡಗಳು ಸಿಕ್ಕದೆ ತೊಂದರೆಪಡುತ್ತಿದ್ದಾರೆಂಬುದನ್ನು ಪದೇಪದೇ ಸರ್ಕಾರದವರ ಗಮನಕ್ಕೆ ತಂದಿದ್ದೇವೆ.

ಆದುದರಿಂದ ಸರ್ಕಾರದವರು ಈಗೊಂದುವೇಳೆ, ನಾವು ಕಟ್ಟಡಗಳನ್ನು ಕಟ್ಟಿಸಿಕೊಡದಿದ್ದಾಗ್ಯೂ, ಒದಗಿಸಿರುವ ಕಟ್ಟಡಗಳಿಗೆ ಸರ್ಕಾರದಿಂದಲೇ ಬಾಡಿಗೆ ಕೊಡುತ್ತಿದೆಯಲ್ಲಾ ನಿಮಗಿನ್ನೇನಾಗಬೇಕು ಎಂದು ಕೇಳಬಹುದು. ಅದಕ್ಕೆ ನಾನು ಹೇಳುವುದಿಷ್ಟೆ— ತಾವೇನೋ ಬಾಡಿಗೆ ಕಟ್ಟಡಗಳ ಬಗ್ಗೆ ಬಾಡಿಗೆ ಮೊಬಲಗನ್ನು ಕೊಡುವುದಕ್ಕೆ ಸಿದ್ಧವಾಗಿದ್ದೀರಿ. ಆದರೆ ಹಾಗೆ ಬಾಡಿಗೆಗಾಗಿ ತೆರತಕ್ಕ ಹಣ ಲುಕ್ಸಾನಾಗಿ ಹೋಗುತ್ತದೆ. ಹಾಗೆ ಲುಕ್ಸಾನನ್ನು ಮಾಡುವುದಕ್ಕೆ ಬದಲಾಗಿ ಖಾಯಂ ಕಟ್ಟಡಗಳನ್ನೇ ತಾವು ಕಟ್ಟಿಸಿಕೊಟ್ಟರೆ ಒಡತಕ್ಕ ವಿದ್ಯಾರ್ಥಿಗಳಿಗೆ ಇದು ನಮ್ಮ ಕಟ್ಟಡ ಎಂಬ ಒಂದು ನಂಬಿಕೆಯಿಂದ ಅದನ್ನು ಅಭಿವೃದ್ಧಿಪಡಿಸಬೇಕೆಂಬ ಮನೋಭಾವ ಹುಟ್ಟಿಸಲು ಅನುಕೂಲವಾಗುತ್ತದೆ. ಆದುದರಿಂದ ಈ ಕಟ್ಟಡಗಳನ್ನು ಕಟ್ಟಿಸಿಕೊಡಬೇಕೆಂದು ಕೇಳುತ್ತಿದ್ದೇವೆ. ಹೀಗೆ ತಾವು ಈ ಕಟ್ಟಡಗಳನ್ನು ಪ್ರತಿಯೊಂದು ಜಿಲ್ಲಾ ಕಸಬೆಗಳಲ್ಲಿಯೂ ಕಟ್ಟಿಸಿಕೊಟ್ಟರೆ ಹರಿಜನರ ವಿದ್ಯಾರ್ಥಿಗಳು ಪಾರಿಭಾಷಿಕ ಇತ್ಯಾದಿ ವಿದ್ಯೆಯಲ್ಲಿ ಮುಂದುವರಿಯಲು ಸಹಾಯಕವಾಗುತ್ತದೆ. ಈ ರೀತಿಯಲ್ಲಿ ಸರಿಯಾದ ಅನುಕೂಲಗಳನ್ನು ನಮಗೆ ತಾವು ಕಲ್ಪಿಸಿಕೊಡಬೇಕಾದುದ್ದು ಮುಖ್ಯವಾದುದು. ಆದರೆ ಈಗ ತಾವು ಇವರಿಗೆ ಕೊಡುತ್ತಿರುವ ಪ್ರೋತ್ಸಾಹದಿಂದ ಇವರು ಎಷ್ಟರಮಟ್ಟಿಗೆ ವಿದ್ಯಾಭ್ಯಾಸದಲ್ಲಿ ಮುಂದುವರಿದ್ದಾರೆಂಬುದನ್ನು ತಾವು ಯಾವುದಾದರೂ ಗ್ರಾಮಕ್ಕೆ ಹೋಗಿ ಪರಿಶೀಲನೆಮಾಡಿ ನೋಡಿದ್ದೇ ಆದರೆ ಆಗ ನಾನು ಈಗ ತಿಳಿಸಿರುವುದೆಲ್ಲಾ ಉತ್ಪ್ರೇಕ್ಷೆಯಲ್ಲ ಸಹಜವಾದುದ್ದು ಎಂಬುದು ತಮಗೇ ವೇದ್ಯವಾಗುತ್ತದೆ.

ಆದುದರಿಂದ ಸರ್ಕಾರದವರು ನಾನು ಈ ತಿದ್ದುಪಡಿಯಲ್ಲಿ ಸೂಚಿಸಿರುವಂತೆ ನಾಲ್ಕುಲಕ್ಷದ ಐವತ್ತುಸಾವಿರ ರೂಪಾಯಿಗಳಲ್ಲಿ ಒಂಭತ್ತು ಜಿಲ್ಲೆಗಳಲ್ಲಿಯೂ ಕಟ್ಟಡಗಳನ್ನು ಕಟ್ಟಿಸಿಕೊಟ್ಟು ತನ್ಮೂಲಕ ಈ ಜನಾಂಗದ ಹುಡುಗರಿಗೆ ಹೈಸ್ಕೂಲು ಮತ್ತು ಕಾಲೇಜುಗಳ ವ್ಯಾಸಂಗಕ್ಕೆ ಅನುಕೂಲ ಕಲ್ಪಿಸಿಕೊಡಬೇಕೆಂದು ನಾನು ತಮ್ಮೆಲ್ಲರಲ್ಲೂ ಮನವಿ ಮಾಡಿಕೊಳ್ಳುತ್ತೇನೆ.

Mr. SPEAKER.—Amendment moved:

"(i) For the words 'one lakh' substitute the words 'four and a half lakhs'.

"(ii) For the words 'two hostel buildings' substitute the words 'nine hostel buildings'.

"(iii) For the words 'one at Mysore and another at Bangalore' substitute the words 'one at each District Headquarters'.

"(iv) Delete the words 'in the two Cities of Mysore and Bangalore'."

ಶ್ರೀ ಶಿವನಂಜೇಗೌಡರು (ಮೈಸೂರು ತಾಲ್ಲೂಕು).—ಮಾನ್ಯ ಅಧ್ಯಕ್ಷರೇ, ಈಗ ಶ್ರೀಮಾನ್ ಎಂ. ಮಾದಯ್ಯನವರು ತಂದಿರತಕ್ಕಂಥ ನಿರ್ಣಯಕ್ಕೆ ಇನ್ನು ಕೆಲವು ಪದಗಳನ್ನು ಸೇರಿಸಬೇಕಾಗಿದೆ. ಏತಕ್ಕೆಂದರೆ ನೂತನ ರಾಜ್ಯಾಂಗದ ವಿಧಿಗನುಸಾರವಾಗಿ ಈಗ ಇದು ನಮ್ಮದು, ಅದು ನಿಮ್ಮದು, ಎಂಬತಕ್ಕಂಥ ಪ್ರತ್ಯೇಕ ಮನೋಭಾವನೆಗಳು ಹೋಗಬೇಕಾದ ಕಾಲದಲ್ಲಿ, ಹೀಗೇ ನಮಗೇ ಒಂದು ಪ್ರತ್ಯೇಕವಾಗಿರಬೇಕೆಂದು ಹೇಳುವುದು ಅಷ್ಟು ಸರಿಯಾಗಿಲ್ಲ ಎಂದು ನನ್ನ ಮನಸ್ಸಿಗೆ ಕಾಣುತ್ತದೆ.

ಬೆಂಗಳೂರು, ಮೈಸೂರುಗಳಲ್ಲಿ ಒಂದುಲಕ್ಷ ರೂಪಾಯಿಗಳನ್ನು ಕೊಟ್ಟು ಕಟ್ಟಡವನ್ನು ಕಟ್ಟಿಸಿದರೆ, ಅದು ಯಾರೊಬ್ಬರಿಗೂ ಪ್ರತ್ಯೇಕವಾಗಿರದೆ, ಅದರಲ್ಲಿ ಎಲ್ಲರಿಗೂ ಎಂದರೆ ಬಡವರಾಗಿರತಕ್ಕವರೆಲ್ಲರಿಗೂ ಸರಿಸಮಾನವಾದ ಅವಕಾಶವಿರುವಂತೆ ಮಾಡುವುದು ಒಳ್ಳೆಯದು. ನಾವೇ ಪ್ರತ್ಯೇಕ, ಅವರೇ ಪ್ರತ್ಯೇಕವೆಂಬ ಮನೋಭಾವ ಹೋಗತಕ್ಕ ಕಾಲ ಬಂದಿದೆ. ಆದುದರಿಂದ ಈ ಮನೋಭಾವ ಎಷ್ಟುಬೇಗ ತೊಲಗಿದರೆ ಅಷ್ಟೂ ಬೇಗ ದೇಶ ನಂಪದಭಿವೃದ್ಧಿಹೊಂದುತ್ತದೆ, ಅದಕ್ಕೆ ಅನುಕೂಲವಾಗುತ್ತದೆ ಇದು. ಆದ್ದರಿಂದ ಪ್ರತ್ಯೇಕತೆಯನ್ನು ತಪ್ಪಿಸಿ, "ಸರ್ವೇ ಜನಾಃ ಸುಖಿನೋ ಭವಂತು" ಎನ್ನುವ ಪ್ರಕಾರ ಇದನ್ನು ಮಾಡಬೇಕೆಂದು ತಿಳಿಸಬೇಕೆಂಬುದೇ ನನ್ನ ವಿನ್ನಹ.

*ಶ್ರೀಮತಿ ಬಳ್ಳಾರಿ ಸಿದ್ದಮ್ಮನವರು (ದಾವಣಗೆರೆ).—ಮಾನ್ಯ ಸಭಾಪತಿಗಳೇ, ನನ್ನ ಸಹೋದ್ಯೋಗಿಗಳು ತಂದಿರತಕ್ಕ ಈ ನಿರ್ಣಯವನ್ನು ಅನುಮೋದಿಸಬೇಕೆಂಬ ಮನಸ್ಸು ನನಗಿದ್ದರೂ ನಾನೀಗ ಇದನ್ನು ವಿರೋಧಿಸಬೇಕಾಗಿದೆ. ಅದಕ್ಕೆ ಕಾರಣವಿಷ್ಟೆ—ಹಿಂದೆ ನಾವು ಸ್ವಾತಂತ್ರ್ಯದ ಜಯಗಳನುವುದಕ್ಕಾಗಿ ಹೋರಾಟ ಮಾಡುತ್ತಿದ್ದಾಗ ದೇಶದ ಜನರೆಲ್ಲರ ಮುಂದೆ, ನಾವು ಮುಂದಕ್ಕೆ ಎಂಥಾ ರಾಜ್ಯವನ್ನು

(ಶ್ರೀಮತಿ ಬಳ್ಳಾರಿ ಸಿದ್ದಮ್ಮನವರು.)

ಕಟ್ಟಬೇಕೆಂದಿದ್ದೇವೆಂಬ ಬಗ್ಗೆ, ಅವರಿಗೆಲ್ಲಾ ಏನೊಂದು ಗುರಿಯನ್ನು ತೋರಿಸಿವೆ್ದವೋ, ಆ ಗುರಿ ಮುಟ್ಟಲು ಸಾಧಕವಾಗುವಂತೆ, ಈ ದಿವಸ ನಾವು ಕೆಲಸಮಾಡಿ, ಅಂದು ನಾವು ಆಡಿದ್ದನ್ನು, ಇಂದು ಮಾಡಿತೋರಿಸ ಬೇಕಾಗಿರುತ್ತದೆಯೆಂಬ ಅಂಶವನ್ನು ಪ್ರತಿಯೊಬ್ಬರೂ ಸ್ವಲ್ಪ ಗಮನವಲ್ಲಿಡಬೇಕು. ಅಂದಿನಿಂದಲೂ ನಾವು ಜಾತ್ಯಾತೀತ ರಾಷ್ಟ್ರವನ್ನು ಕಟ್ಟಬೇಕೆಂಬ ಸಂಕಲ್ಪ ಮಾಡಿಕೊಂಡಿದ್ದೇವೆ. ಆದರೆ ನಾನು ಅವರಿಗೆ ಅನುಕೂಲ ಮಾಡಿಕೊಡಬೇಡಿ ಎಂದು ಹೇಳುವುದಿಲ್ಲ. ನನ್ನ ಅಭಿಪ್ರಾಯದಲ್ಲಿ ಈ ದಿವಸ ಎರಡು ಹಾಸ್ಟಲುಗಳಿದ್ದರೆ ಸಾಕೆಂದು ತೋರುತ್ತದೆ: ಒಂದು ಹೆಂಗಸರಿಗೆ; ಮತ್ತೊಂದು ಗಂಡಸರಿಗೆ. (ಸಭೆಯಲ್ಲೊಬ್ಬರು—ಅದೂ ಬೇಕಾಗಿಲ್ಲ) ಹೌದು. ಆದರೆ ಇನ್ನೂ ಕೆಲವು ಕಾಲ ಅದು ಬೇಕು. ನಾವಿನ್ನೂ ಫಾಶ್ಚಿಮಾತ್ಯರ ಮಟ್ಟಕ್ಕೆ ಬಂದಿಲ್ಲ. ನೂರಾರು ವರ್ಷಗಳ ನಂತರ ಹೀಗೂ ಆಗಬಹುದು. ತಾವು ಹೀಗೆ ಈ ಎರಡು ಉದ್ದೇಶಗಳನ್ನು ಮಾತ್ರ ಇಟ್ಟುಕೊಂಡು ಮುಂದು ವರಿಯಬೇಕಾಗುತ್ತದೆ. ನಮ್ಮ ಬನವಾಸಿಯವರು ಅವರ ಒಂದು ಪದ್ಯದಲ್ಲಿ ಹೀಗೆ ಹೇಳಿದ್ದಾರೆ—"ಅಡಿಗೆಗೆ ಬಂದಿದ್ದು, ಎಡೆಗೆ ಬಂತು; ಎಡೆಗೆ ಬಂದಿದ್ದು, ಊಟಕ್ಕೆ ಬಂತು" ಎಂದು ಇತ್ಯಾದಿ, ಇತ್ಯಾದಿ ಹೇಳಿದ್ದಾರೆ. ಇದೂ ಅದಂತೆಯೇ. ನಾವೆಲ್ಲರೂ ಪ್ರೇಮದಿಂದ ಸಹಕರಿಸಿ ಒಂದೇಕಡೆ ಕುಳಿತು ಒಂದು ಅನ್ನ—ಚೆಟ್ನಿ ಊಟ ಮಾಡತಕ್ಕದ್ದರಲ್ಲಿ ಎಷ್ಟು ಪ್ರೇಮವಿದೆಯೋ, ಅಷ್ಟು ಪ್ರೇಮ ನೀವೇ ಬೇರೆ ನೀವೇ ಬೇರೆಕಡೆ ಊಟ ಮಾಡಿ, ನೀವೇ ಬೇರೆ ಎಂದು ಹೇಳುವುದರಲ್ಲಿಲ್ಲ. ಹೀಗೆಲ್ಲಾ ಮಾಡಿದರೆ ಆ ವಿಶ್ವಾಸ ಬರಲಾರದು; ಮತ್ತು ನಮ್ಮ ದೇಶವೂ ಉಳಿಯಲಾರದು. ಆದಕಾರಣ ಈ ನಿರ್ಣಯವನ್ನು ಅಂಗೀಕರಿಸಬಾರದು ಎಂದು ಹೇಳುತ್ತೇನೆ. ನನ್ನ ಅಭಿಪ್ರಾಯದಲ್ಲಿ ನಾನಾರೀತಿ ತಿಳಿಸಿರುವಂತೆ ಎರಡೇ ಎರಡು ಬೇಧಗಳನ್ನಿಟ್ಟುಕೊಂಡರೆ ನಾವು ಮುಂದುವರಿಯುತ್ತೇವೆಂದು ಹೇಳಿ ನಾನು ಕುಳಿತು ಕೊಳ್ಳುತ್ತೇನೆ.

*ಶ್ರೀ ಎಂ. ಶಂಕರಲಿಂಗೇಗೌಡರು (ನಾಗಮಂಗಲ).—ಸ್ವಾಮಿ, ಈ ನಿರ್ಣಯವನ್ನು ತಂದಿರುವವರು ಕಾಂಗ್ರೆಸ್ ಪಂಗಡದವರು, ಆದರೆ ಅವರಲ್ಲೇ ಭಿನ್ನಾಭಿಪ್ರಾಯ ಬಂದು ಹೋಗಿದೆ. ಕಾಂಗ್ರೆಸ್ ಪಕ್ಷದಲ್ಲಿರುವ ಡಿಪ್ರೆಸ್ಡ್ ಕ್ಲಾಸಿನವರೆ ತಮ್ಮ ಜಾತಿಗೆ ಉಪಕಾರವಾಗಲಿ ಎಂಬ ಭಾವನೆಯಿಂದ ಇದನ್ನು ತಂದಿರಬಹುದು. ಆದರೆ ಇದು ಅವರು ಇರತಕ್ಕ ಪಂಗಡದ ತತ್ವಕ್ಕೆ ವಿರೋಧವಾಗಿದೆ. ಹೀಗೆ ಜಾತಿಮತಗಳ ಎಣಿಕೆ ಮಾಡುವಾರದೆಂಬ ತತ್ವದವರು ಇಪರಿಗೇಕೆ ಅವಕಾಶ ಕೊಟ್ಟರು? ಹಾಗೆ ಅವಕಾಶ ಕೊಟ್ಟಮೇರೆ ಈ ರೀತಿ ಭಿನ್ನಾಭಿಪ್ರಾಯ ನೂಚಿಸುವುದಕ್ಕೆ ಬದರಾಗಿ, ಪೊದರೇ ಇಂಥ ವಿಷಯಗಳನ್ನು ತಂದವರನ್ನು, ಅವರು, ಕಾಂಗ್ರೆಸ್ಸಿ ನಿಂದರೇ ಓಡಿಸಿಬಿಡಬೇಕಾಗಿತ್ತು. ಆದರೆ ಶ್ರೀಮತಿ ಬಿ. ಎಲ್. ಸುಬ್ಬಮ್ಮನವರೊಂದು ನಿರ್ಣಯವನ್ನು ಕಳುಹಿಸಿದ್ದಾರೆ. ಆದರೆ ಅದು ಈ ಸಭೆಯು ಮುಂದೆ ಡಿಬೇರ್ಗೆ ಬರುತ್ತದೆಯೆಂದು ಹೇಳುವುದಕ್ಕಾಗುವುದಿಲ್ಲ. ಆದರೆ ಇನ್ನೂ 5 ವರ್ಷಕಾಲ ಷೆಡ್ಯೂರ್ಡ್ ಕ್ಯಾಸ್ಟಿನವರಿಗೆ ಈ ರಿಯಾಯಿತಿಗಳನ್ನು ಕೊಡಬೇಕೆಂದು ಹೇಳಲಾಗಿದೆ. ಅಲ್ಲಿಂದ ಮುಂದಕ್ಕೆ ಅದೇನೂ ನಿಲ್ಲುವ ಹಾಗಿಲ್ಲ. ಅನಂತರ ಇದು ಹೊರಬೇಹೋಗುತ್ತದೆ. ವಯಸ್ಕರ ಮತದಾನಪದ್ಧತಿ ಜಾರಿಗೆ ಬಂದಿದೆ. ಆದರೆ ಅವರು 'ಷೆಡ್ಯೂರ್ಡ್ ಕ್ಯಾಸ್ಟ್' ಎಂಬ ಪದವನ್ನು ಉಪಯೋಗಿಸಿದ್ದಾರೆ. ಈ ನಿರ್ಣಯದಲ್ಲಿ ಅದಕ್ಕೆ ಬದಲಾಗಿ "ಯಾರು ಯಾರು ಗರೀಬರಿದ್ದಾರೋ, ಅಂಥ ವರಿಗೆಲ್ಲಾ ಯಾವ ಜಾತಿಮತಗಳ ಬೇಧವೂ ಇಲ್ಲದಂತೆ" ಎಂಬ ಪದಗಳನ್ನು ಈ ನಿರ್ಣಯಕ್ಕೆ ಸೇರಿಸಿಕೊಂಡರೆ ಸರಿಹೋಗುತ್ತದೆಂದು ನನ್ನವಾದ.

(ಒಬ್ಬರು ನಾವು ಸುಂಕಕೊಡತಕ್ಕವರು)

ಕೆಲವರು ಕುಡಿಯತಕ್ಕವರಿದ್ದಾರೆ. ಅಂಡವರಿಂದ ಸರ್ಕಾರಕ್ಕೆ ದುಡ್ಡು ಬರುತ್ತೆ. ನೀವೆಲ್ಲ ಆ ಎಕ್ಸೈಜ್ ಸುಂಕವನ್ನು ಕೊಡುತ್ತೀರಿ. ಈಗ ನಾನಂತೂ ಖಂಡಿತ ಈ ಜಾತಿಬೇಧ ಇರತಕ್ಕ ಹಾಸ್ಟಲುಗಳು ಈ ಕಾಲಕ್ಕೆ ಸರಿಯಾದವುಗಳೆಂಬುದನ್ನು ಒಪ್ಪಲಾರೆ. ಇದು ಬಹಳ ವಿರೋಧಕ್ಕೆ ಬಂದಿದೆ. ಸರ್ಕಾರದವರು ಇವರಿಗೆ ಬೇಕಾದರೆ ವಿದ್ಯಾರ್ಥಿವೇತನರೂಪದಲ್ಲಿ ಕೊಡುತ್ತಿರುವ ಸಹಾಯವನ್ನು ಇನ್ನೂ ಸ್ವಲ್ಪ ಹೆಚ್ಚಿಸಿದರೂ ಹೆಚ್ಚಿಸಿ, ಇದು ಮಾತ್ರ ಸರಿಯಾದ್ದಲ್ಲ. ಆದುದರಿಂದ ಈ ನಿರ್ಣಯವನ್ನು ನಾನು ಯಾವ ಅನುಮಾನವೂ ಇಲ್ಲದೆ ವಿರೋಧಿಸುತ್ತೇನೆಂದು ಹೇಳುತ್ತೇವೆ.

*ಶ್ರೀ ಡಿ. ದೇವರಾಜ ಅರಸ್‌ರವರು (ಹುಣಸೂರು).—ಸ್ವಾಮಿ, ಈ ನಿರ್ಣಯವನ್ನು ನಾನು ಸಮರ್ಥಿಸುತ್ತೇನೆ. ಈಗ ಕೆಲವು ಮಾನ್ಯ ಸ್ನೇಹಿತರು ಇದನ್ನು ವಿರೋಧಿಸುತ್ತಾ ಹೇಳಿದ್ದೇನೆಂದರೆ ಜಾತ್ಯಾತೀತವಾದ ರಾಷ್ಟ್ರವನ್ನು ಕಟ್ಟುವಾಗ ಈ ರೀತಿ ಜಾತಿಗೆ ಸಂಬಂಧ ಪಟ್ಟ ಹಾಗೆ ಹಾಸ್ಟಲ್ ಮಾಡಲಾರದು ಎಂದು. ತತ್ವತಃ ಅದು ಪಾಸ್ತವವಾದುದು. ಅವರಲ್ಲಿ ನನಗೆ ಸಂಪೂರ್ಣ ನಂಬಿಕೆಯಿದೆ. ಆದರೆ ಭಾರತದ ರಾಜ್ಯಾಂಗದಲ್ಲಿ ಈ ನಮ್ಮವರ್ಗದವರಿಗೆ ಕೆಲವು ರಿಯಾಯಿತಿಗಳನ್ನು ಕೊಟ್ಟಿದ್ದಾರೆ. ಅದಕಾರಣ ನಾವು ಇದು ರಾಜ್ಯಾಂಗಕ್ಕೆ ವಿರೋಧವೆಂದು ಯಾವ ರೀತಿಯಲ್ಲೂ ತಿಳಿಯಲು ಸಾಧ್ಯವಿಲ್ಲ. ಮತ್ತೊಂದು ವಿಚಾರವೇನೆಂದರೆ ದೊಡ್ಡದಾಗಿ ಟೀಕೆಮಾಡಿ ನಮ್ಮವರ್ಗದವರ ವಿಷಯದಲ್ಲಿ ದೊಡ್ಡ ಭಾಷಣ ಮಾಡಬೇಕಾಗಿಲ್ಲ. ಆ ರೀತಿ ಯಾರೂ ಮಾಡಿಲ್ಲವೆಂಬುದು ಸರ್ವರಿಗೂ ಗೊತ್ತಿರುವ ವಿಷಯ. ರಾಜ್ಯಾಂಗದಲ್ಲೇ ಜಾತ್ಯಾತೀತವಾಗಿರಬೇಕೆಂದು ಘೋಷಣೆ ಮಾಡಿದ್ದರೆ ಆಗ ಎಲ್ಲರೂ ದೊಡ್ಡದಾಗಿ ಯೋಚನೆ ಮಾಡಬೇಕಾಗಿತ್ತು. ನಮ್ಮ ವರ್ಗದವರು ಯಾವ ಭಾಗದಲ್ಲಿ ಹಿಂದುಳಿದಿದ್ದಾರೆ, ವಿದ್ಯೆ, ಆರ್ಥಿಕ ಸ್ಥಿತಿ, ಸಾಮಾಜಿಕ ರೀತಿನೀತಿ ಮುಂತಾದುವುಗಳಲ್ಲಿ ಯಾವುದರಲ್ಲಿ ಹಿಂದೆಬಿದ್ದಿದ್ದಾರೆ ಎಂದು ನೋಡಿದರೆ ಎಲ್ಲಾ ಜಾತಿಗಳಿಗಿಂತ ಆರ್ಥಿಕ ಮಟ್ಟದಲ್ಲಿ ಹಿಂದುಳಿದಿರುವ ಅಂಶ ವ್ಯಕ್ತವಾಗುತ್ತದೆ. ಆರ್ಥಿಕ ದೃಷ್ಟಿಯಿಂದ ನೋಡುವುದಾದರೆ ಅವರಿಗಿಂತ ಬೇರೆ ಹಿಂದುಳಿದ ಜನಾಂಗವೇ ಇಲ್ಲ. ಇದರ ಜೊತೆಗೆ ಈಗ ಅಸ್ಪೃಶ್ಯತೆಯೆಂಬುದು ನಮ್ಮ ದೇಶದಲ್ಲಿ ಸಂಪೂರ್ಣವಾಗಿ ಹೋಗಿಲ್ಲ. ದೊಡ್ಡ ದೊಡ್ಡ ಸಭೆಗಳಲ್ಲಿ ವಿದ್ಯಾವಂತರಾದ ಹರಿಜನರೊಂದಿಗೆ ನಾವು ಸಂಪರ್ಕ ಮಾಡುತ್ತಿದ್ದೇವೆ, ನಮಭಾವನೆಯಿಂದ ಕಾಣುತ್ತಿದ್ದೇವೆ. ಆಷ್ಟೇ ಹೊರತು ಹಳ್ಳಿಗಳಲ್ಲಿ ಈಗಲೂ ಕೂಡ ಅಸ್ಪೃಶ್ಯತೆ ಹೋಗಿದೆಯೇ ಎಂದರೆ ಇಲ್ಲ. ಹರಿಜನರನ್ನು ಅಸ್ಪೃಶ್ಯರು ಎಂಬ ಒಂದು ಭಾವನೆಯಿಂದ ನೋಡಬಾರದು, ಸಮದೃಷ್ಟಿಯಿಂದ ನೋಡಬೇಕು, ದೇವಸ್ಥಾನಗಳಿಗೆ ಬಿಡಬೇಕು ಇತ್ಯಾದಿ ಇತ್ಯಾದಿ ಅನೇಕ ಕಾನೂನುಗಳನ್ನು ಸರ್ಕಾರದವರು ಮಾಡಿದ್ದರೂ ಕೂಡ ದೇವಸ್ಥಾನಕ್ಕೆ ಹೋಗಬೇಕಾದರೆ ಅವರಿಗ ಅನೇಕ ತೊಂದರೆಗಳಿವೆ. ಅನೇಕಕಡೆ ಬಿಡುತ್ತಿಲ್ಲ ಮತ್ತು ಅಸ್ಪೃಶ್ಯತೆ ಎಂಬುದು ಸಂಪೂರ್ಣವಾಗಿ ಹೋಗಿಲ್ಲ, ಅನೂಚಾನವಾಗಿ ಯಾವ ರೀತಿಯಿತ್ತೋ ಅದೇ ರೀತಿ ಈಗಲೂ ನಡೆದುಕೊಂಡು

ಬಂದಿದೆ. ಅದು ಹೋಗಬೇಕಾದರೆ ಇನ್ನೂ ಅನೇಕ ವರ್ಷಗಳು ಬೇಕು. ಬರೀ ಕಾನೂನಿನಿಂದ ಹೋಗುತ್ತದೆಂದು ಖಂಡಿತ ತಿಳಿಯುವುದಕ್ಕಾಗುವುದಿಲ್ಲ. ಆದಕಾರಣ ಅವರು ಕೇಳಿರುವುದಾದರೂ ಷೆಡ್ಯೂರ್ಡ್ ಪಂಗಡಗಳ ವರಿಗೆ ರಾಜ್ಯಾಂಗದಲ್ಲಿ ವಿಧಿನಲ್ಪಟ್ಟಿರುವ ಹಾಗೆ ಅನುಕೂಲವನ್ನು ಮಾಡಿಕೊಡಬೇಕೆಂಬುದು. ಇದು ಅದರ ಜೊತೆಯಲ್ಲಿ ಸೇರಿದೆ. ಷೆಡ್ಯೂರ್ಡ್ ಪಂಗಡಗಳಲ್ಲಿ ಬರೀ ಹರಿಜನರು ಅಥವಾ ಎಡಗೈ ಬಲಗೈನವರು ಎಂದೇನೂ ಹೇಳಿಲ್ಲ. ಅದರಲ್ಲಿ ಇನ್ನೂ ಅನೇಕ ಪಂಗಡಗಳು, ಬೋಯಿ ಮುಂತಾದ ಸಣ್ಣಪುಟ್ಟ ಜನಾಂಗದವರು ಸೇರಿದ್ದಾರೆ, ಅದರೆ ಇಲ್ಲಿ ಯಾವುದೋ ಒಂದು ಜಾತಿಗೆ ಹಾಸ್ಟೆಲ್ ಕೊಡಿ ಎಂದು ಕೇಳಿದ್ದಾರೆಂಬ ಭಾವನೆ ಮೇಲೆ ಭಾಷಣ ಮಾಡಿದ ಹಾಗೆ ಕಾಣುತ್ತದೆ. ನನಗೆ ತೋರುವುದು ಅನೇಕ ಜಾತಿಗಳು ಇದರಲ್ಲಿ ಸೇರಿರುವುದರಿಂದ ಮತ್ತು ಅವರು ಪ್ರಗತಿ ಹೊಂದಿಲ್ಲದಿರುವುದರಿಂದ ಅವರಿಗೆ ಬೇಕಾದ ಅನುಕೂಲತೆಗಳನ್ನು ಸರ್ಕಾರ ಕಲ್ಪಿಸಿಕೊಡಬೇಕೆಂದು ಪ್ರಾರ್ಥನೆ ಮಾಡಿಕೊಂಡಿದ್ದಾರೆ.

ಹರಿಜನರಾಗಲೀ, ಷೆಡ್ಯೂರ್ಡ್ ಪಂಗಡಗಳವರಾಗಲೀ ಹೊರಗೆ ಅಂದರೆ ತಮ್ಮ ಸ್ಥಳ ಬಿಟ್ಟು ಮೈಸೂರು ಮತ್ತು ಬೆಂಗಳೂರು ಪಟ್ಟಣಗಳಿಗೆ ಏಕೆ ಬರಬೇಕೆಂದು ಕೇಳಬಹುದು. ಆದರೆ ನಮ್ಮ ಕಾಲೇಜು, ಟೆಕ್ನಿಕಲ್ ಸ್ಕೂಲು ಮತ್ತು ವಿಶ್ವವಿದ್ಯಾನಿಲಯದ ವಿದ್ಯಾಭ್ಯಾಸ ಇರುವ ಸ್ಥಳಗಳು ಅವುಗಳಾದ್ದರಿಂದ ವ್ಯಾಸಂಗಕ್ಕಾಗಿ ಅವರು ಬರಬೇಕು. ಮೊದಲೇ ಹೇಳಿದ ಹಾಗೆ ಅವರ ಸ್ಥಿತಿಗತಿಗಳು ತೀರ ಕೆಟ್ಟಿರುವುದರಿಂದ, ಅವರ ಆರ್ಥಿಕ ಸ್ಥಿತಿ ಬಹಳ ಹೀನಸ್ಥಿತಿಯಲ್ಲಿರುವುದರಿಂದ ಅಂಥ ಕಡೆ ಬಂದು ವಿದ್ಯಾಭ್ಯಾಸ ಮಾಡಬೇಕಾದರೆ ಅನೇಕ ತೊಂದರೆಯಿರುತ್ತದೆ. ಒಬ್ಬ ಮಿತ್ರರು ಅವರಿಗೆ ವಿದ್ಯಾರ್ಥಿವೇತನದ ಮೂಲಕ ಸಹಾಯ ಮಾಡೋಣ ಎಂದು ಹೇಳಿದರು. ಆ ವಿದ್ಯಾರ್ಥಿವೇತನ ಕೊಡುವುದಕ್ಕೆ ಅಡಚಣೆಯಿರುತ್ತದೆ. ಅದಕ್ಕೆ ಹೆಚ್ಚು ಹಣ ಬೇಕು. ಒಂದು ಲಕ್ಷವಾದರೂ ಕೊಟ್ಟರೆ ಸ್ವಲ್ಪ ಸಹಾಯವಾಗಬಹುದು ಸದ್ಯದಲ್ಲಿ ಈ ಅಭಿಪ್ರಾಯ ಸರ್ಕಾರಕ್ಕೆ ಇಲ್ಲದೇಇರಬಹುದು. ಅವರು ಕೇಳಿರುವುದು ಒಂದು ಲಕ್ಷ ಬೆಂಗಳೂರಿಗೆ ಮತ್ತು ಒಂದು ಲಕ್ಷ ಮೈಸೂರಿಗೆ ಕೊಟ್ಟು ಹಾಸ್ಟೆಲ್ ಕಟ್ಟಬೇಕು ಎಂದು. ಅದೇ ತಿದ್ದುಪಡಿಯಲ್ಲಿ 9 ಜಿಲ್ಲೆಗಳಲ್ಲೂ ಕಟ್ಟಬೇಕೆಂದು ಕೇಳಿದ್ದಾರೆ. ಈ ಬೇಡಿಕೆ ಇಡುವಾಗ ಮಾನ್ಯ ಮಿತ್ರರು ಸರ್ಕಾರದ ಆರ್ಥಿಕ ಸ್ಥಿತಿಗತಿ ಹೇಗಿದೆಯೆಂಬುದನ್ನು, ಮುಖ್ಯ ಮಂತ್ರಿಗಳು ತಮ್ಮ ಭಾಷಣದಲ್ಲಿ ಹೇಳಿದಹಾಗೆ ಯಾವ ರೀತಿಯಿದೆಯೆಂಬುದನ್ನು ತಿಳಿದು ತಿದ್ದುಪಡಿ ತಂದಿದ್ದರೆ ಚೆನ್ನಾಗಿತ್ತು. ಏನೇ ಆಗಲಿ ತಿದ್ದುಪಡಿಯಲ್ಲಿ ಕೇಳಿರುವ ಬೇಡಿಕೆಯನ್ನು ಒಪ್ಪದೇ ಇದ್ದರೂ ಈ ನಿರ್ಣಯದಲ್ಲೇನಿದೆಯೋ ಆ ಬೇಡಿಕೆಯನ್ನು ಸರ್ಕಾರ ದವರು ಒಪ್ಪುವುದರಲ್ಲಿ ಯಾವ ಅಭ್ಯಂತರವೂ ಇಲ್ಲ ಮತ್ತು ಯಾವುದೋ ಒಂದು ವಿಧದಲ್ಲಿ ಜಾತ್ಯಾತೀತ ರಾಷ್ಟ್ರಕ್ಕೆ ವಿರೋಧ ಎಂದು ಹೇಳಿರುವುದಕ್ಕೆ ಯಾವ ಆಧಾರವೂ ಇಲ್ಲ. ಇದು ಜಾತ್ಯಾತೀತವಾಗಿದೆ. ಅನೇಕ ಪಂಗಡಗಳಿಗೆ ಅನ್ವಯಿಸುತ್ತದೆ ಎಂಬ ಒಂದು ಭಾವನೆಯಿಂದ ಎಲ್ಲರೂ ಯೋಚನೆ ಮಾಡಬೇಕು ಎಂದು ಇಷ್ಟು ಹೇಳಿ ಇದನ್ನು ಸಮರ್ಥನೆ ಮಾಡುತ್ತೇನೆ.

Mr. SPEAKER.—We will hear the Hon'ble Minister. It is not necessary for other Members to speak now.

Sri M. MADIAH.—When can I exercise my right of reply, Sir?

Mr. SPEAKER.—The Hon'ble Member can do it now, if he so desires. After the Minister replies, if the mover refers to any fresh point, then the Minister will have another chance to speak.

*ಶ್ರೀ ಎಂ. ಮಾದಯ್ಯನವರು.—ಸ್ವಾಮಿ, ಮಾನ್ಯ ಸದಸ್ಯರ ತಿದ್ದುಪಡಿಯನ್ನು ಕೇಳಿ ಅವರ ತಿದ್ದುಪಡಿಯಲ್ಲಿ ಬೋನಾಫೈಡಿನೆಸ್ ಏನಾದರೂ ಇದೆಯೆ ಎಂಬ ವಿಚಾರದಲ್ಲಿ ಶಂಕೆಯಾಗುತ್ತದೆ. ಆದರಲ್ಲೂ ಕಳೆದ ಕಾಲು ಶತಮಾನದಿಂದ ಸಮಾಜ ಸುಧಾರಣೆ ಕೆಲಸಮಾಡಿರುವ ಶ್ರೀಮತಿ ಬಳ್ಳಾರಿ ಸಿದ್ದಮ್ಮನವರ ಭಾಷಣ ಕೇಳಿ ಆಶ್ಚರ್ಯವಾಗುತ್ತಿದೆ ಅವರು ಖಂಡಿತ ಮುಂದೆ ಬರುವುದಿಲ್ಲ ಎಂದು ತಿಳಿದುಕೊಂಡಿದ್ದೆ. ಕೇವಲ ಒಂದು ಸೆಕ್ಯೂಲರ್ ಸಂಸ್ಥಾನದಲ್ಲಿ ಗಂಡಸರು, ಹೆಂಗಸರು ಎಂದು ಬೇಧಭಾವನೆಯಿಂದ ಹಾಗೆ ಹೇಳಿರಬಹುದೇ ಹೊರತು ಹರಿಜನರು ಎಂದು ಹೇಳಿಲ್ಲ. ಆದರೂ ಸಹ ಅವರು ರಾಜ್ಯಾಂಗದಲ್ಲಿ ಹೇಳಿರುವ ಆರ್ಟಿಕರ್ 46ಕ್ಕೆ ಗಮನ ಕೊಡಬೇಕು, ಆ ರೀತಿ ಕೊಟ್ಟಿಲ್ಲ ಎಂದು ಭಾನವಾಗುತ್ತದೆ. ಆರ್ಟಿಕರ್ 46ರಲ್ಲಿ;

> "The State shall promote with special care the educational and economic interests of the weaker sections of the people, and in particular, of the Scheduled Castes."...

ಎಂದು ಹೇಳಿರುವುದರಿಂದ ಅದಕ್ಕೆ ಮಾನ್ಯ ಸದಸ್ಯರು ಗಮನ ಕೊಡಬೇಕು. ಯಾವ ಸರ್ಕಾರವೇ ಆಗಲಿ ತನ್ನ ನೀತಿಯನ್ನು ಮುಂದುವರಿಸುವಾಗ ನಿಮ್ಮ ವರ್ಗದವರ, ಬಲಹೀನರಾಗಿರುವ ನಾಗರಿಕರ ಅಭಿವೃದ್ಧಿಗೆ ಆದರಲ್ಲೂ ನಿಮ್ಮ ವರ್ಗದವರ ವಿದ್ಯಾಭ್ಯಾಸಕ್ಕೆ ಬಹಳ ಪ್ರಾಮುಖ್ಯತೆ, ಹೆಚ್ಚುನಿಗಾ ಕೊಟ್ಟು ತಕ್ಕ ಕಾರ್ಯಕ್ರಮ ಕೈಕೊಳ್ಳಬೇಕು ಎಂದು ರಾಜ್ಯಾಂಗದ ನಾಲ್ಕನೆಯಭಾಗದಲ್ಲಿ ನಿರೂಪಿಸಲ್ಪಟ್ಟಿದೆ. ಯಾವ ದಿವಸ ರಾಜ್ಯಾಂಗದ ಪ್ರಕಾರ ಪ್ರಮಾಣವಚನ ಸ್ವೀಕಾರಮಾಡಿದೆವೋ ಆ ದಿವಸದಿಂದ ಅದನ್ನು ಗಮನಿಸಿ ಅದರ ಪ್ರಕಾರ ನಡೆದುಕೊಳ್ಳಬೇಕಾದದ್ದು ಅತ್ಯಗತ್ಯ. ಶಾಸನ ಸಭೆಯ ಮುಂದೆ ಈ ವಿಚಾರವನ್ನು ಎಷ್ಟೋ ಸಲ ಅರಿಕೆ ಮಾಡಿಕೊಂಡಿದೆ. ಆದರೆ 1952ನೆಯ ಇನವಿಯಲ್ಲಿ ಕಟ್ಟಡದ ನಿಧಿಗಾಗಿ ಹೆಚ್ಚಾಗಿ ಹಣ ಒದಗಿಸಿದ್ದಾರೆಯೇ ಎಂಬುದು ಒಂದೆರಡು ಬಾಬುಗಳನ್ನು ನೋಡಿದರೆ ಗೊತ್ತಾಗಬಹುದು. ಉದಾಹರಣೆಗೆ.....

Mr. SPEAKER.—The Member need not read all that, since copies have already been distributed to all the Members. It will take much time.

Sri M. MADIAH.—I may be permitted to read only that particular portion.

Mr. SPEAKER.—Yes, not the entire page.

ಶ್ರೀ ಎಂ. ಮಾದಯ್ಯನವರು.—ಕುರುಬರ ಹಾಸ್ಟೆಲ್ಲಿಗೆ 60 ಸಾವಿರ ರೂಪಾಯಿಗಳನ್ನು ಕೊಟ್ಟಿದೆ. ವೀರಶೈವ ಹಾಸ್ಟೆಲಿಗೆ 50 ಸಾವಿರ ಕೊಟ್ಟಿರುವುದಕ್ಕೆ ಈ

(ಶ್ರೀ ಎಂ. ಮಾದಯ್ಯನವರು)

ಸಾರಿ 3 ಸಾವಿರ ಒದಗಿಸಿದ್ದಾರೆ, ಸಿರಿಗೆರೆ ಹಾಸ್ಟೆಲಿಗೆ 50 ಸಾವಿರ ಕೊಟ್ಟು ಈಸಾಲಿಗೆ 16 ಸಾವಿರ ಒದಗಿಸಿದೆ. ನಂಜನಗೂಡಿನ ಕುರುಬರ ಹಾಸ್ಟೆಲಿಗೆ 15 ಸಾವಿರ ತುಮಕೂರಿನಲ್ಲಿ 32 ಸಾವಿರ ಕೊಟ್ಟು 13 ಸಾವಿರ ಒದಗಿಸಿದೆ, ಬೆಂಗಳೂರು ಹಾಸನ ಸೇರಿ 23 ಸಾವಿರ ಕೊಟ್ಟಿದೆ, ಹೀಗೆ ಎರಡು ಪುಟಗಳಷ್ಟು ಅಂಕಿ ಅಂಶ ಗಳಿವೆ.

4-30 P.M.

ನಾನು ಆಗಲೇ ಹೇಳಿದ ಹಾಗೆ ಕೊಟ್ಟಿರತಕ್ಕ ವಿಚಾರ ಅಲ್ಲ. ಇದು ಕೊಡುವುದಕ್ಕೆ ಅರ್ಹವಾದದ್ದು ಕೊಡ ಬೇಕು. ನನ್ನ ಉದ್ದೇಶವನ್ನು ನಾನು ಹೇಳಿದ್ದೇನೆ.

Sri K. V. SHANKARA GOWDA (Mandya).—On a point of information, Sir. ಈಗ ಅವರು ಹೇಳಿದ ಹಾಸ್ಟಲುಗಳಲ್ಲಿ ಎಲ್ಲಾ ಜಾತಿಯ ವಿದ್ಯಾರ್ಥಿಗಳಿಗೂ ಅವಕಾಶವಿಲ್ಲ.

If the Hon'ble Member does not know the information his quoting will be irrelevant.

ಶ್ರೀ ಎಂ. ಮಾದಯ್ಯನವರು.—ಆಯಾಯಾ ಕೋಮುಗಳ ವಿದ್ಯಾರ್ಥಿಗಳಿಗೆ ಅವಕಾಶ ಕಲ್ಪಿಸಲಾಗಿದೆ.

ಶ್ರೀ ಕೆ. ವಿ. ಶಂಕರಗೌಡರು.—ಎಲ್ಲಾ ಕೋಮುಗಳ ವರಿಗೂ ಅವಕಾಶ ಕಲ್ಪಿಸಲಾಗಿದೆಯೇ ?

ಶ್ರೀ ಎಂ. ಮಾದಯ್ಯನವರು.—ಸರ್ಕಾರಿ ಹಾಸ್ಟಲು ಗಳಿಗೆ ಕೊಟ್ಟಿರತಕ್ಕ ಉದಾಹರಣೆ ಕೊಟ್ಟು ಡಿಮ್ಯಾಂಡ್ ಕೇಳುತ್ತೇನೆಯೇ ಹೊರತು ಮತ್ತೆ ಬೇರೆ ಅಲ್ಲ. ಹಿಂದುಳಿ ದಿರತಕ್ಕ ಯಾವ ಪಂಗಡವೇ ಆಗಲಿ ಮುಂದೆ ಬರುವು ದಕ್ಕೆ ಅನುಕೂಲ ಕಲ್ಪಿಸಿಕೊಡಬೇಕಾದದ್ದು ಸರ್ಕಾರದ ಮತ್ತು ಕರ್ತವ್ಯ ನಮ್ಮ ಜನಾಂಗಕ್ಕೆ ಫ್ರೀ ಬೋರ್ಡಿಂಗ್ ಹೋಂ ಕೊಟ್ಟಿದ್ದಾರೆ. ಇದೇ ರೀತಿ ಈಗಾಗಲೇ ಕೊಟ್ಟಿರತಕ್ಕ ಅನೇಕ ಸೌಲಭ್ಯಗಳಿಗಾಗಿ ಈಗಿನ ಸರ್ಕಾರದವರನ್ನೂ ಹಿಂದಿನ ಸರ್ಕಾರದವರನ್ನೂ ಮತ್ತು ಸಾರ್ವಜನಿಕರನ್ನೂ ಹೃತ್‌ಪೂರ್ವಕವಾಗಿ ಅಭಿನಂದಿಸುತ್ತೇನೆ. ಸ್ಕಾಲರ್‌ಷಿಪ್‌ಗಳಿಗೆ ಎಷ್ಟೇ ಬೇಡಿ ಕೆಗಳು ಬಂದರೂ ಸೆನೆಟ್ ಮತ್ತು ಕೌನ್ಸಿಲ್‌ಗಳಲ್ಲಿರತಕ್ಕ ವಾನ್ಯ ಸದಸ್ಯರು ಉದಾರ ಮನಸ್ಸಿನಿಂದ ಸಮ್ಮತಿ ಯನ್ನು ಕೊಟ್ಟಿದ್ದಾರೆ. ಮೈಸೂರು ಸರ್ಕಾರದವರು ಮತ್ತು ಸಾರ್ವಜನಿಕರು ದೊಡ್ಡಮನಸ್ಸುಳ್ಳವರಾಗಿ ದ್ದಾರೆ. ಇದು ಹೆಮ್ಮೆ ಪಡತಕ್ಕ ವಿಚಾರ. ಷೆಡ್ಯೂರ್ಡ್ ಕ್ಲಾಸ್‌ನವರಿಗೆ ಇನ್ನೂ ಸಹ ಈಗ ಇರತಕ್ಕ ಸೌಲಭ್ಯ ಸಾಲದು, ದಯಮಾಡಿ ಮಾಡಿಕೊಡಿ ಎಂದು ಕೇಳುತ್ತೇ ವೆಯೇ ಹೊರತು ಇವ್ನೇನೂ ಅಲ್ಲ. ನಾಳೆ ದಿನ ಸೆಕ್ಯು ಲರ್ ಸ್ಟೇಟ್ ಆಗುತ್ತದೆ, ಸರ್ಕಾರಿ ಗ್ರಾಂಟ್ ಕೊಟ್ಟಿ ದ್ದೇವೆ ಎಂದು ಹೇಳಿ ಗಾಂಧಿ ಹಾಸ್ಟಲು, ನೆಹರು ಹಾಸ್ಟಲು ಎಂಬುದಾಗಿ ಹೆಸರಿಟ್ಟು ಯಾವ ಕೋಮಿನವರಿ ಗಾದರೂ ಅವಕಾಶ ಕೊಡಿ ಅಥವಾ ಕ್ಕೆ ತಯಾರಾಗಿದ್ದೇವೆ. ಆದ್ದರಿಂದ ಸರ್ಕಾರದವರಲ್ಲಿ ನಾನು ಬೇಡಿಕೊಳ್ಳುವುದು ಇಷ್ಟೆ. ನನ್ನ ವಾದ ಧರ್ಮವಾದದ್ದು ಮತ್ತು ರಾಜ್ಯಾಂಗಕ್ಕೂ ಸಹ ವಿರೋಧವಾಗದ ನ್ಯಾಯವಾದ ಬೇಡಿಕೆಯಾಗಿರುವುದರಿಂದ ಈ ವಿಚಾರದಲ್ಲಿ ಸರ್ಕಾರವ ವರು ಆಶ್ವಾಸನವನ್ನೂ ಕೊಟ್ಟು ಈಗ ಇಟ್ಟಿರತಕ್ಕ ಬಡ್ಜೆಟ್‌ನಲ್ಲಿ ಬದಲಾವಣೆ ಮಾಡುವುದಕ್ಕೆ ಅವಕಾಶ ಏದ್ದರೆ ಮಾಡಿ, ಇಲ್ಲದೇ ಇದ್ದರೆ ಅಡಿಷನರ್ ಅಂಡ್ ಸಪ್ಲಿಮೆಂಟರಿಗ್ರಾಂಟ್ ಪಡೆದು, ವಿದ್ಯಾದಾನ ನೀಡ ಬೇಕೆಂದು, ನೇರವಾಗಿ ತಮ್ಮನ್ನು ಅತಿವಿನಯದಿಂದ ಬೇಡುತ್ತೇನೆ.

ಶ್ರೀ ಎ. ಜಿ. ರಾಮಚಂದ್ರರಾಯರು (ನ್ಯಾಯಾಂಗ ಮತ್ತು ಶಿಕ್ಷಣ ಶಾಖಾ ನಚಿವರು).—ಮೈಸೂರು ಸರ್ಕಾರದವರು 'ಷೆಡ್ಯೂರ್ಡ್' ವಂಗಡಗಳವರ ವಿಷಯ ದಲ್ಲಿ ಅನೇಕ ವರ್ಷಗಳಿಂದ ಸಹಾನುಭೂತಿಯಿಂದ ವರ್ತಿಸಿರುವುದು ಎಲ್ಲರಿಗೂ ಗೊತ್ತೇ ಇದೆ. ಪ್ರಾಯಶಃ ಷೆಡ್ಯೂರ್ಡ್ ಕ್ಯಾಸ್ಟ್‌ನವರಿಗೆ ಕೊಡತಕ್ಕ ಸ್ಕಾಲರ್‌ ಷಿಪ್ ಮತ್ತು ಹಾಸ್ಟೆಲ್ ಗ್ರಾಂಟ್ ಇನ್ನಾರಿಗೂ ಕೊಡುತ್ತಾ ಇಲ್ಲ. 1950-51ನೇ ಇಸವಿಯಲ್ಲಿ ಡಿಗ್ರಿ ಕೋರ್ಸ್‌ನಲ್ಲಿ ಓದತಕ್ಕ 200 ಜನ ವಿದ್ಯಾರ್ಥಿಗಳಿಗೆ, ಇಂಟರ್‌ಮೀಡಿಯಟ್ ಕೋರ್ಸ್‌ನಲ್ಲಿ ಓದತಕ್ಕ 100ಜನ ವಿದ್ಯಾರ್ಥಿಗಳಿಗೆ ಮತ್ತು ಡಿಪ್ಲೊಮಾಕೋರ್ಸ್‌ನಲ್ಲಿ ಓದ ತಕ್ಕ 150 ಜನ ವಿದ್ಯಾರ್ಥಿಗಳಿಗೆ ಸ್ಕಾಲರ್‌ಷಿಪ್ ಕೊಡ ಲಾಗಿದೆ. ಮತ್ತು ಹಾಸ್ಟೆಲ್‌ಗಳಲ್ಲಿದ್ದುಕೊಂಡು ವಿದ್ಯಾಭ್ಯಾಸವನ್ನು ಮುಂದುವರಿಸುವ ವಿದ್ಯಾರ್ಥಿಗಳಿಗೆ ತಿಂಗಳಿಗೆ 10 ರೂಪಾಯಿನಂತೆ 10 ತಿಂಗಳು ಬೋರ್ಡಿಂಗ್ ಗ್ರಾಂಟುಕೊಡುತ್ತಾ ಇದ್ದಾರೆ. ಹಾಸ್ಟ ಲುಗಳನ್ನು ಕೊಡಬೇಕೆಂದು ಕೇಳುವುದು ಸಹಜ. ಆದರೆ ಶ್ರೀವರ್ಣ ಮಾದಯ್ಯನವರು ಬಡ್ಜೆಟ್ಟನ್ನು ಚೆನ್ನಾಗಿ ವ್ಯಾಸಂಗಮಾಡಿದ್ದಾರೆ—ಈ ವರ್ಷ 101 ಲಕ್ಷ ರೂ ಪಾಯಿ ಖೋತಾಬಂದಿರುವುದು ಅವರಿಗೂ ಗೊತ್ತಿದೆ. ಈ ಸಂದರ್ಭದಲ್ಲಿ ಈ ನಿರ್ಣಯವನ್ನು ಒತ್ತಾಯಪಡಿಸು ವುದು ಸೂಕ್ತವಲ್ಲ. ಸಾಧ್ಯವಾದ ಪಕ್ಷದಲ್ಲಿ ಅಡೀಷನರ್ ಅಂಡ್ ಸಪ್ಲಿಮೆಂಟರಿ ಗ್ರಾಂಟ್ ಕೊಡುವುದಕ್ಕೆ ಆಲೋ ಚನೆ ಮಾಡುತ್ತೇನೆ. ಈ ವಿಷಯದಲ್ಲಿ ಪೂರ್ಣ ಸಹಾನು ಭೂತಿ ಇದೆ ಎಂದು ಹೇಳುತ್ತೇನೆ.

Mr. SPEAKER.—In view of the reply, is the Hon'ble Mover of the amendments willing to withdraw them?

Sri M. CHIKKALINGIAH.—I press the amendments.

Mr. SPEAKER.—The question is :

"That (i) for the words 'one lakh' substitute the words 'four and a-half lakhs';

(ii) for the words 'two hostel buildings' substitute the words 'nine hostel buildings'

(iii) for the words 'one at Mysore and another at Bangalore' substitute the words 'one at each district headquarters'

(iv) delete the words 'in the two Cities of Mysore and Bangalore'

The motion was negatived.

Mr. SPEAKER.—What does the Hon'ble Mover propose to do with his resolution ?

ಶ್ರೀ ಎಂ. ಮಾದಯ್ಯನವರು.—ಸರ್ಕಾರದವರು ಬಹಳ ಸಹಾನುಭೂತಿಯಿಂದ ಪರಿಶೀಲನೆ ಮಾಡು ತ್ತೇವೆ ಎಂದು ಹೇಳಿರುವುದರಿಂದ ನಾನು ಈ ನಿರ್ಣಯ ವನ್ನು ವಾಪಸ್ಸು ತೆಗೆದುಕೊಳ್ಳುವುದಕ್ಕೆ ಸಭೆಯವರು

ಅನುಮತಿ ಕೊಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

Mr. SPEAKER.—Is it the pleasure of the House that the resolution be withdrawn?

(There was one dissentient voice)

Mr. SPEAKER.—The question is:

"That this Assembly is of the opinion that one lakh of rupees be sanctioned by the Government for constructing two hostel buildings, one at Mysore and another at Bangalore for the Scheduled Castes students studying in the High Schools and Colleges in the two cities of Mysore and Bangalore."

The motion was negatived.

Sri B. HUTCHE GOWDA.—I want to bring to your consideration a point regarding Rules of Procedure. Clause 141(2) says.

".....If no one dissents, the Speaker shall say 'The Motion is by leave withdrawn.' But if any dissentient voice be heard or a member rises to continue the debate, the Speaker shall forthwith put the motion."

Mr. SPEAKER.—I followed that procedure.

Sri B. HUTCHE GOWDA.—The Chair did not allow it.

Mr. SPEAKER.—The Hon'ble Member was not present. Let us not go back. The procedure followed is correct.

No. 5. Linking up Maddur with Satyamangalam through important places.

ಶ್ರೀ ಎಂ. ಚಿಕ್ಕಲಿಂಗಯ್ಯನವರು (ಮಳವಳ್ಳಿ–ಅನುಸೂಚಿತ ಜಾತಿಗಳು):—ಸ್ವಾಮಿ, ನನ್ನ ಸಂಕಲ್ಪ ಈ ರೀತಿಯಿದೆ:

"That this Assembly is of the opinion that in order to meet the demands of increased travel and transport arising out of the expanding population, business and industry in the country, a recommendation be made to the Government of India requesting them to link up Maddur with Satyamangalam inter-linking important places of business like Malavalli, Kollegal and Chamarajnagar on the way"

ಸ್ವಾಮಿ, ಈ ನಿರ್ಣಯವನ್ನು ಸಭೆಯು ಮುಂದಿಡುವ ಉದ್ದೇಶವೇನೆಂದರೆ ಇದು ನಮ್ಮ ತಾಲ್ಲೂಕಿನ ಅಭಿವೃದ್ಧಿಗೆ ಅತ್ಯಂತ ಸಹಕಾರಿಯಾದುದಾಗಿದೆ. ಈಗಿನ ಕಾಲದಲ್ಲಿ ಅದರಲ್ಲೂ ನಮ್ಮ ಪ್ರಜಾಪ್ರಭುತ್ವ ರಾಜ್ಯದಲ್ಲಿ ದೇಶದ ಅಭಿವೃದ್ಧಿಗೆ ನಾನಾವಿಧವಾದ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳುತ್ತಿರುವುದು ಪ್ರತಿಯೊಬ್ಬರಿಗೂ ಮನದಟ್ಟಾಗಿದೆ. ಅವುಗಳಲ್ಲಿ ಮುಖ್ಯವಾದುದು ರೈಲ್ವೆಸೌಕರ್ಯಗಳೆಂದು ತಾವೆಲ್ಲರೂ ಮನಗಂಡಿದ್ದೀರಿ. ನಮ್ಮ ಮಳವಳ್ಳಿ ತಾಲ್ಲೂಕು ಬಹಳ ದೊಡ್ಡ ತಾಲ್ಲೂಕು; ಜನ ಸಂಖ್ಯೆಯೂ ಬಹಳ ಹೆಚ್ಚು. 1 ಲಕ್ಷ 25 ಸಾವಿರಕ್ಕೆ ಮೇಲ್ಪಟ್ಟು ಜನರಿದ್ದಾರೆ. ಅಲ್ಲಿ ಸಾಧಾರಣವಾಗಿ ಎಲ್ಲಾ ಕಡೆಗಳಿಂದಲೂ, ಇತ್ತ ಬೆಂಗಳೂರು ಮಾರ್ಗ, ಮೈಸೂರು ಮಾರ್ಗ, ಅತ್ತ ಕೊಳ್ಳೆಗಾಲ ಮಾರ್ಗ ಮತ್ತು ಮದ್ದೂರುಮಾರ್ಗ ಇವುಗಳಿಂದೆಲ್ಲಾ ದಿನವಹಿ ಏನಿಲ್ಲವೆಂದರೂ ಅರವತ್ತಕ್ಕೆ ಮೇಲ್ಪಟ್ಟು ಬಸ್ಸುಗಳು ಬಂದುಹೋಗುತ್ತಿವೆ. ಅಂದಮೇಲೆ ಆ ಊರು ಅನೇಕ ಭಾಗಗಳಿಗೆ ಒಂದು ಕೇಂದ್ರವಾಗಿದ್ದೂ, ಅಲ್ಲಿ ನಡೆಯುತ್ತಿರುವ ಅಭಿವೃದ್ಧಿ ಕಾರ್ಯಗಳಿಗೆ ರೈಲ್ವೆ ಸೌಕರ್ಯವಿಲ್ಲದೆ ತುಂಬಾ ತೊಂದರೆಯಾಗಿದೆ. ಅದಿನ್ನೂ ವ್ಯವಸಾಯ ಕ್ಷೇತ್ರವಾಗಿ ಉಳಿದಿದೆಯೇ ಏನಾ ಕೈಗಾರಿಕಾ ಬೆಳವಣಿಗೆಗೆ ಯಾವ ರೀತಿಯ ಸೌಲಭ್ಯಗಳೂ ಅಲ್ಲಿಗೆ ದೊರೆತಿಲ್ಲ. ಅಲ್ಲಿನ ರೈತರೂ ಕೇವಲ ತಮ್ಮ ನಿತ್ಯ ಜೀವನಕ್ಕೆ ಬೇಕಾದ ಬೆಳೆಗಳನ್ನು ಬೆಳೆದು ತೃಪ್ತರಾಗಿರಬೇಕೇ ಏನಾ ವ್ಯಾಪಾರ ಬೆಳೆಗಳನ್ನಾವುದನ್ನೂ ಕೈಕೊಂಡು ತನ್ಮೂಲಕ ತಮ್ಮ ಆರ್ಥಿಕ ಪರಿಸ್ಥಿತಿಯನ್ನು ಉತ್ತಮ ಪಡಿಸಿಕೊಳ್ಳುವುದಕ್ಕೆ ಅವಕಾಶವೇ ಇಲ್ಲ. ಹೀಗಾಗಿ ಎಲ್ಲಾ ತಾಲ್ಲೂಕುಗಳಿಂದಲೂ ಈ ತಾಲ್ಲೂಕು ಅಷ್ಟು ಅಭಿವೃದ್ಧಿ ಸ್ಥಿತಿಗೆ ಬರಲು ಸಾಧ್ಯವಾಗಿಲ್ಲ. ಆದ್ದರಿಂದಲೇ ಅಲ್ಲಿಗೆ ರೈಲ್ವೆ ಸೌಕರ್ಯವನ್ನು ಒದಗಿಸಿಕೊಡುವ ವಿಷಯವನ್ನು ನಾವು ಬಹಳ ದಿವಸಗಳಿಂದಲೂ ಒತ್ತಾಯಪಡಿಸುತ್ತಲೇ ಬಂದಿದ್ದೇವೆ. ಇದೊಂದು ಬಹು ಮುಖ್ಯವಾದ ತಾಲ್ಲೂಕು. ಕಬ್ಬಿಣ ಸಿಕ್ಕುವ ತಾಲ್ಲೂಕು ಇದು. ಷಿಷಾ ಮತ್ತು ಬ್ಲಫ್—ವಿದ್ಯುಚ್ಛಕ್ತಿಯ ಉತ್ಪತ್ತಿಯ ಸ್ಥಾನಗಳಿವೆ, ಇಲ್ಲಿ. ಆದ್ದರಿಂದ ನ್ಯಾಯವಾಗಿ ಈ ತಾಲ್ಲೂಕು ಕೈಗಾರಿಕೆಯಲ್ಲಿ ಬಹಳ ಮುಂದುವರಿಯಬೇಕು. ಅಂಥಾದ್ದು ಬರೀ ವ್ಯವಸಾಯದ ಕ್ಷೇತ್ರವಾಗಿದ್ದು ವ್ಯಾಪಾರಾಭಿವೃದ್ಧಿಗೆ ರೈಲ್ವೆ ಸೌಕರ್ಯವಿಲ್ಲದೆ, ಅಲ್ಲಿನ ಜನರು ಆರ್ಥಿಕವಾಗಿ ದಿನೇ ದಿನೇ ಹಿಂದು ಹಿಂದಕ್ಕೆ ಹೋಗುತ್ತಿರುವುದು ತುಂಬಾ ಕೋಚನೀಯವಾಗಿದೆ. ಮದ್ದೂರು ಇಲ್ಲಿಗೆ ಕೇವಲ 16 ಮೈಲಿಯಲ್ಲಿದೆ. ಅಲ್ಲಿಂದ ಒಂದು ರೈಲ್ವೆ ರೈನನ್ನು ತೆಗೆದುಕೊಂಡು ಮಳವಳ್ಳಿ, ಕೊಳ್ಳೆಗಾಲ, ಚಾಮರಾಜನಗರ ಮಾರ್ಗವಾಗಿ ಸತ್ಯಮಂಗಲಕ್ಕೆ ಸುಲಭವಾಗಿ ಸೇರಿಸಬಹುದು. ಈ ರೈಲ್ವೆರೈನ್ಕ ಹಾಕುವುದಕ್ಕೆ ಮಧ್ಯೆ ಯಾವ ನದಿಯಾಗಲಿ, ದೊಡ್ಡ ದೊಡ್ಡ ಹಳ್ಳಗಳಾಗಲಿ ಇಲ್ಲದೆ ಹೆಚ್ಚಿನ ಖರ್ಚೂ ಇಲ್ಲದೆ ಆಗುವ ಹಾಗಿದೆ. ನೆಲ ಮಟ್ಟವಾಗಿದೆ. ಬೇಕಾದಷ್ಟು ವ್ಯಾವಾರಕ್ಕೆ ಅನುಕೂಲತೆಗಳಿವೆ ಈಗ ಅಲ್ಲಿ ದಿನವೂ 50-60 ಬಸ್ಸುಗಳು ಓಡಾಡುತ್ತಿದ್ದರೂ ಮಾರಾಟಕ್ಕೆ ಸಂಬಂಧಪಟ್ಟ ಸಾಮಾನುಗಳನ್ನು ಸಾಗಿಸುವುದಕ್ಕೆ ಸುಲಭ ಸೌಕ

(ಶ್ರೀ ಎಂ. ಚಿಕ್ಕಲಿಂಗಯ್ಯನವರು.)

ರ್ಯಗಳಿಲ್ಲ. ಮೈಸೂರಿಗಾಗಲ, ಬೆಂಗಳೂರಿಗಾಗಲ ಯಾವುದಾದರೂ ಸಾಮಾನನ್ನು ಸಾಗಿಸಬೇಕಾದರೆ ಈಗಲೂ ಎತ್ತಿನಗಾಡಿಯಲ್ಲ ಸಾಗಿಸಬೇಕಾಗಿದೆ. ಆದ್ದರಿಂದ ರೈಲ್ವೆಲೈನು ಅಲ್ಲಿಗೆ ಬಹಳ ಅವಶ್ಯಕವಾಗಿದೆ. ಬಹುಶಃ ಸರ್ಕಾರದವರ ಗಮನಕ್ಕೂ ಇದು ಬಂದಿರಬಹುದು. ನಾವೂ ಅನೇಕಾವರ್ತಿ ಒತ್ತಾಯಪಡಿಸಿದ್ದೇವೆ. ಸರ್ಕಾರಿ ರೆಕಾರ್ಡ್‌ಗಳಲ್ಲೂ ಇದೆ. ಸದ್ಯಕ್ಕೆ ರೈಲ್ವೆ ಇರಾಖೆ ನಮ್ಮ ಮೈಸೂರು ಸಂಸ್ಥಾನಕ್ಕೆ ಸೇರದಿದ್ದರೂ, ಇಡೀ ಭರತಖಂಡದಲ್ಲಿನ ನಮ್ಮ ಮೈಸೂರು ಒಂದು ಭಾಗವಾಗಿರುವುದರಿಂದ, ಈ ಸಭೆಯವರೂ ಮತ್ತು ಸರ್ಕಾರದವರೂ ಒತ್ತಾಯಪಡಿಸಿ ಸಾಧ್ಯವಾದಮಟ್ಟಿಗೂ ಜಾಗ್ರತೆ ಸರ್ವೆಮಾಡಿಸಿ ರೈಲ್ವೆ ಸೌಕರ್ಯವನ್ನು ಕಲ್ಪಿಸಿಕೊಟ್ಟರೆ ನಮ್ಮ ತಾಲ್ಲೂಕಿನ ಅಭಿವೃದ್ಧಿಗೂ, ತನ್ಮೂಲಕ ದೇಶದ ಅಭಿವೃದ್ಧಿಗೂ ಸಾಧನವಾಗುತ್ತದೆಂದು ಹೇಳಿ ನಾನು ಈ ನಿರ್ಣಯವನ್ನು ಸಭೆಯವರ ಪರಿಶೀಲನೆಗಾಗಿಡುತ್ತೇನೆ.

Mr. SPEAKER.—Resolution moved:

"That this Assembly is of the opinion that in order to meet the demands of increased travel and transport arising out of the expanding population, business and industry in the country, a recommendation be made to the Government of India requesting them to link up Maddur with Sathyamangalam inter-linking important places of business like Malavalli, Kollegal, and Chamarajanagar on the way."

*ಶ್ರೀ ವಿ.ಆರ್. ನಾಯ್ಡುರವರು (ಮಲ್ಲೇಶ್ವರಂ).—ಸ್ವಾಮಿ, ಒಂದು ವಿಚಾರ ಕೇಳಬೇಕು. ರೈಲ್ವೆವಿಚಾರದಲ್ಲಿ ಹಿಂದೆ ನಮ್ಮ ಮೈಸೂರಿನವರಿಗೂ ಮತ್ತು ಕೇಂದ್ರ ಸರ್ಕಾರದವರಿಗೂ ಯಾವ ವಿಧವಾಗಿ ವ್ಯವಹಾರ ನಡೆದಿದೆಯೆಂಬುದನ್ನು ದಯವಿಟ್ಟು ಮಾನ್ಯ ಮಂತ್ರಿಗಳು ತಿಳಿಸಿದರೆ ಅನುಕೂಲ.

ಅಧ್ಯಕ್ಷರು.—ಅದನ್ನೆಲ್ಲಾ ಆ ಮೇಲೆ ತಿಳಿಸುತ್ತಾರೆ.

ಶ್ರೀ ಕಡಿದಾಳ್ ಮಂಜಪ್ಪನವರು (ರೆವಿನ್ಯೂ ಮತ್ತು ಪಬ್ಲಿಕ್ ವರ್ಕ್ಸ್ ಸಚಿವರು).—ರೈಲ್ವೆ ಇಂಜಿನೀರ್ಷಿಪ್ ಆಗಿದೆ.

ಶ್ರೀ ಬಿ. ಪಿ. ನಾಗರಾಜಮೂರ್ತಿಯವರು (ಮಳವಳ್ಳಿ).—ಸ್ವಾಮಿ, ಈ ನಿರ್ಣಯವನ್ನು ಮಂಡಿಸಿರತಕ್ಕ ಮಾನ್ಯ ಸದಸ್ಯರು ಅದನ್ನು ಈ ಸಭೆಯಮುಂದೆ ತರುವಷ್ಟರಲ್ಲಿಯೇ ರೈಲ್ವೆ ಇರಾಖೆ ಕೇಂದ್ರ ಸರ್ಕಾರದ ಆಡಳಿತಕ್ಕೆ ಸೇರಿಹೋಗಿದೆ! ನಾವಿನ್ನೆಷ್ಟು ಚರ್ಚೆಮಾಡಿದರೂ ಪರಿಣಾಮವಾಗಲಾರದೆಂದು ನಾನು ತಿಳಿದಿದ್ದೇನೆ. ಆದರೂ ಸರ್ಕಾರದವರು ಈ ವಿಚಾರದಲ್ಲಿ ಶಿಫಾರಸು ಮಾಡಲು ಸಹಾನುಭೂತಿ ತೋರಿಸಬೇಕಾಗಿರುವುದರಿಂದ ಈ ವಿಷಯವನ್ನು ಈ ಸಭೆಯ ಮುಂದೆ ತಂದಿದೆ.

ಈ ನಿರ್ಣಯದ ಸೂಚಕರು ಮಳವಳ್ಳಿ, ಕೊಳ್ಳೇಗಾಲ, ಚಾಮರಾಜನಗರ ಸತ್ಯಮಂಗಲಗಳನ್ನು ರೈಲ್ವೇಮೂಲಕ ಒಟ್ಟುಗೂಡಿಸುವುದರ ಅವಶ್ಯಕತೆಯನ್ನು ತೋರಿಸಿದ್ದಾರೆ. ಆ ತಾಲ್ಲೂಕಿನಲ್ಲಿ ಎಶ್ವೇಶ್ವರ ನಾಲೆಯಿರುವ ದೃಷ್ಟಿಯಿಂದಲೂ ಮತ್ತು, ಆ ಪ್ರದೇಶದಲ್ಲಿ ಯಾವ ವ್ಯಾಪಾರ ಸೌಲಭ್ಯಗಳಿಲ್ಲದಿರುವುದರಿಂದಲೂ ಆ ಪ್ರದೇಶಕ್ಕೆ ರೈಲ್ವೆ ಸೌಕರ್ಯವನ್ನು ಒದಗಿಸಿಕೊಡುವುದು ಅತ್ಯಾವಶ್ಯಕ. ನಮ್ಮ ಮೈಸೂರು ದೇಶಕ್ಕೆ ಮೊಟ್ಟಮೊದಲು ಶಕ್ತಿ ಮತ್ತು ಬೆಳಕನ್ನು ಕೊಟ್ಟದ್ದು ನಮ್ಮ ಮಳವಳ್ಳಿ ತಾಲ್ಲೂಕು. ಆದರೂ ಕೂಡ ಈ ತಾಲ್ಲೂಕು ಬೇರೆ ಎಲ್ಲಾ ತಾಲ್ಲೂಕುಗಳಿಗಿಂತಲೂ ಇಂದು ಹಿಂದೆಬಿದ್ದಿದೆ. ಆದ್ದರಿಂದ ಆರ್ಥಿಕದೃಷ್ಟಿಯಿಂದಲೂ ಕೈಗಾರಿಕಾದೃಷ್ಟಿಯಿಂದಲೂ ಈ ತಾಲ್ಲೂಕು ಮುಂದುವರಿಯುವುದಕ್ಕೆ ಈ ಒಂದು ಸಹಾಯವನ್ನು ಒಪ್ಪಿಕೊಂಡು ನಿಮ್ಮ ಸೌಹಾರ್ದ ಸಹಾನುಭೂತಿಗಳನ್ನು ತೋರಿಸುತ್ತೀರೆಂದು ನಂಬಿದ್ದೇನೆ. ಸದ್ಯಕ್ಕೆ ಮಳವಳ್ಳಿ ಒಂದೇ ರೈಲ್ವೆ ಕೇಂದ್ರವಾಗಿರುವುದಕ್ಕೆ ಅಷ್ಟು ಅನಾಯಕ್ಯಾಗಿರುವುದಿಲ್ಲವೆಂದು ಹೇಳಬಹುದು. ಅಲ್ಲಿಂದ ಮುಂದಕ್ಕೆ ಕೊಳ್ಳೇಗಾಲಕ್ಕೆ ಸೇರಿಸಿದರೆ ಅಲ್ಲಿ ಬಹಳ ವ್ಯಾಪಾರಕ್ಕೆ ಅವಕಾಶವಿದೆ. ಕೊಳ್ಳೇಗಾಲ ಮದ್ರಾಸ್‌ಪ್ರಾಂತ್ಯದಲ್ಲಿ ಅತಿ ಮುಖ್ಯವಾದ ಒಂದು ರೇಷ್ಮೆ ಕೇಂದ್ರ. ಇತ್ತಕಡೆ ಮದ್ದೂರಿಗೆ ಸೇರಿಸಿದರೆ ನಮ್ಮ ದೇಶಕ್ಕೂ ಮದ್ರಾಸ್ ಆಧಿಪತ್ಯದಕಡೆಗೂ ನಡೆಯುವ ವ್ಯಾಪಾರ ಬಹಳಮಟ್ಟಿಗೆ ಕುದುರಲು ಅವಕಾಶವಾಗುತ್ತದೆ. ಇದರಿಂದ ನಮ್ಮ ಸಂಸ್ಥಾನಕ್ಕೂ ಹೆಚ್ಚಿನ ಲಾಭ ಬರುವುದರಲ್ಲಿ ಯಾವ ಸಂಶಯವೂ ಇಲ್ಲ. ಅಲ್ಲದೆ ಈ ರೈಲ್ವೆ ಚಾಮರಾಜನಗರಕ್ಕೂ ಮುಂದುವರಿಯುವುದರಿಂದ ಮತ್ತು ಅಲ್ಲಿಂದ ಮುಂದೆ ಚಾಮರಾಜನಗರಸತ್ಯಮಂಗಲರೈಲ್ವೇಯೂ ಆಗುವುದರಲ್ಲಿರುವುದರಿಂದ ವ್ಯಾಪಾರಕ್ಕೆ ಇನ್ನೂ ಹೆಚ್ಚಿನ ಅನುಕೂಲವಾಗುವಂತಾಗುತ್ತದೆ. ಆದ್ದರಿಂದ ಚಾಮರಾಜನಗರ ಸತ್ಯಮಂಗಲ ರೈಲ್ವೆ ಹಾಕುವ ಸಂದರ್ಭದಲ್ಲಿ, ಈ ವಿಭಾಗವನ್ನೂ ಇಂಡಿಯಾಸರ್ಕಾರದವರ ಗಮನಕ್ಕೆ ತಂದರೆ ಅದನ್ನು ಸುಲಭವಾಗಿ ಮಾಡಿಬಿಡಬಹುದು. ಆದ್ದರಿಂದ ಈ ಮಳವಳ್ಳಿ ತಾಲ್ಲೂಕಿನ ಮೇಲೆ ಉದಾತ್ತ ಮನೋಭಾವವಿಟ್ಟು ಇದು ಎಲ್ಲಾ ರೀತಿಯಲ್ಲಿಯೂ ಮುಂದುವರಿಯುವುದಕ್ಕೆ ಅವಶ್ಯಕವಾಗಿರುವಂಥ ಈ ರೈಲ್ವೇ ಮಾರ್ಗವನ್ನು ಮಾಡಿಸಿಕೊಡಲು ಸಹಾಯಮಾಡಬೇಕೆಂದು ಹೇಳಿ ನಾನು ಈ ನಿರ್ಣಯವನ್ನು ಸಮರ್ಥಿಸುತ್ತೇನೆ.

*ಶ್ರೀ ಕಡಿದಾಳ್ ಮಂಜಪ್ಪನವರು.—ಅಧ್ಯಕ್ಷರೇ, ಮದ್ದೂರಿ ನಿಂದ ಸತ್ಯಮಂಗಲದವರೆಗೂ ಮಳವಳ್ಳಿ, ಕೊಳ್ಳೇಗಾಲ ಚಾಮರಾಜನಗರಗಳ ಮಾರ್ಗವಾಗಿ ರೈಲ್ವೆ ಸೌಕರ್ಯವನ್ನು ಕಲ್ಪಿಸಿಕೊಡಬೇಕೆಂಬುದೇ ಈ ನಿರ್ಣಯದ ಸಾರಾಂಶ. ಈಗಾಗಲೇ ಮದ್ದೂರಿಂದ ಮೈಸೂರಿಗೂ ಮತ್ತು ನಂಜನಗೂಡು ಮಾರ್ಗವಾಗಿ ಚಾಮರಾಜನಗರ ದವರೆಗೂ ರೈಲ್ವೆ ಸೌಕರ್ಯವಿದೆ. ಮಾನ್ಯ ಸದಸ್ಯರಿಗೆ ಗೊತ್ತಿರುವ ಹಾಗೆ ಚಾಮರಾಜನಗರದಿಂದ ಸತ್ಯಮಂಗಲದವರೆಗೆ ರೈಲ್ವೆಲೈನ್ ಹಾಕುವ ಬಗ್ಗೆ ಒಂದು ಸರ್ವೆ 1948ನೆಯ ಇಸವಿಯಷ್ಟು ಹಿಂದೆಯೇ ನಡೆದು, ಅಲ್ಲಿಗೆ ರೈಲ್ವೆ ಹಾಕಬೇಕೆಂದು ರೈಲ್ವೆ ಬೋರ್ಡಿನವರು ತೀರ್ಮಾನಮಾಡಿದ್ದಾರೆಂದು ತಿಳಿದು ಬಂದಿದೆ. ಬಹುಶಃ ಈ ವಿಚಾರದಲ್ಲಿ ಕಾರ್ಯಕ್ರಮವನ್ನು 1954-55ಕ್ಕೆ ಅಥವಾ 1955-56ಕ್ಕೆ ತೆಗೆದುಕೊಳ್ಳಬಹುದೆಂದು ನಾನು ಊಹಿಸುತ್ತೇನೆ.

ಈಗ ನಮ್ಮ ಸಂಸ್ಥಾನದಲ್ಲಿ ರೈಲ್ವೆ ಸೌಕರ್ಯ ಬೇಕೆಂಬುದು ಮಳವಳ್ಳಿ—ಕೊಳ್ಳೇಗಾಲಕ್ಕೆ ಮಾತ್ರವಲ್ಲ, ಮೈಸೂರು ಸಂಸ್ಥಾನದ ಇತರ ಅನೇಕ ಭಾಗಗಳಲ್ಲಿಯೂ ಈ ಸೌಕರ್ಯ ಅತ್ಯಾವಶ್ಯಕವಾಗಿ ಬೇಕಾಗಿದೆ. ಉದಾಹರಣೆಗೆ, ಮಲೆನಾಡಿನ ಭಾಗಗಳಲ್ಲಿ. ಶಿವಮೊಗ್ಗದಿಂದ ತೀರ್ಥಹಳ್ಳಿಗೆ, ಚಿಕ್ಕಮಗಳೂರಿನಿಂದ ಕಡೂರಿಗೆ, ಹಾಸನದಿಂದ ಮಂಗಳೂರು ಮುಂತಾದ ಇತರ ಕಡೆಗಳಿಗೆ ಮಲೆನಾಡಿನಲ್ಲಿ ರೈಲ್ವೆ ಸೌಕರ್ಯ ಬೇಕಾಗಿದೆ.

ಆದರೆ 1950ನೆಯ ಇಸವಿಯಿಂದ ರೈಲ್ವೆ ಆಡಳಿತ ನಮ್ಮ ಕೈತಪ್ಪಿ ಕೇಂದ್ರ ಸರ್ಕಾರಕ್ಕೆ ಸೇರಿದುದು ತಮಗೆಲ್ಲ ಗೊತ್ತಿದೆ. ಒಟ್ಟಿನಲ್ಲಿ ಈ ನಿರ್ಣಯವನ್ನು ಸಹಾನುಭೂತಿಯಿಂದ ಪರಿಶೀಲಿಸಿ ರೈಲ್ವೆ ಬೋರ್ಡಿಗೆ ಶಿಫಾರಸು ಮಾಡುವುದರಲ್ಲಿ ಸರ್ಕಾರದವರಿಗೆ ಅಭ್ಯಂತರವಿಲ್ಲ.

Mr. SPEAKER.—The question is :—

"That this Assembly is of the opinion that in order to meet the demands of increased travel and transport arising out of the expanding population, business and industry in the country a recommendation be made to the Government of India requesting them to link up Maddur with Sathyamangalam inter-linking important places of business like Malavalli, Kollegal and Chamarajanagar on the way."

The motion was adopted.

No 8. Extending Visvesvaraya Canal in Malavalli Taluk.

Sri B. P. NAGARAJA MURTHY (Malavalli).—

" Sir I move.—

"That this Assembly is of the opinion that suitable action should be taken so that the area surveyed to be irrigated under Visvesvaraya canal in Malavalli Taluk, is irrigated within two years in order to improve the lot of the raiyats"

ಸ್ವಾಮಿ, ಈ ವಿಷಯವನ್ನು ಈ ಸಭೆಯ ಮುಂದೆ ಮಂಡಿಸುತ್ತಾ ನಾನು ಹಿಂದೆಯೇ ಬೇರೊಂದು ಸಂದರ್ಭದಲ್ಲಿ ಮಳವಳ್ಳಿ ತಾಲ್ಲೂಕಿನ ದುಸ್ಥಿತಿಯನ್ನು ಸಭೆಯ ಗಮನಕ್ಕೆ ತಂದಿರುವುದನ್ನು ಜ್ಞಾಪಿಸುತ್ತೇನೆ. ಸಾಮಾನ್ಯವಾಗಿ ಮಂಡ್ಯ ಜಿಲ್ಲೆಯಲ್ಲಿ ವಿಶ್ವೇಶ್ವರಯ್ಯನವರೆ ಬಂದಿರತಕ್ಕ ಪ್ರದೇಶದ ಭೂಮಿಯನ್ನು ನೋಡಿ ಈ ತಾಲ್ಲೂಕಿನ ಭೂಮಿಯನ್ನು ನೋಡಿದರೆ ಇದು ಎಲ್ಲ ಜಮೀನಿಗಿಂತಲೂ ಹೆಚ್ಚು ಫಲವತ್ತಾದ ಉತ್ಕೃಷ್ಟವಾದ ಜಮೀನೆಂಬುದು ಗೊತ್ತಾಗುತ್ತದೆ. ಆದಾಗ್ಯೂ ಮಳವಳ್ಳಿ ತಾಲ್ಲೂಕು ವಿಶ್ವೇಶ್ವರಯ್ಯ ನಾಲಾ ಪ್ರದೇಶಕ್ಕೆ ಕೊನೆಯಾಗಿ; ಈ ನಾಲೆ ಇರುವ ಪ್ರದೇಶದಲ್ಲೂ ನೀರು ಕಾಣದ ಜಮೀನುಗಳಿವೆ; ನಾಲೆಯನ್ನು ಪಡೆದ ಮಾತ್ರಕ್ಕೇ ಕಾಂಟ್ರಿಬ್ಯೂಷ್ಟ್, ವಾಟರ್‌ರೇಟ್, ಕೊಟ್ಟು ಅನೇಕರು ತಮ್ಮ ಮನೆ ಮಠಗಳನ್ನೂ ಜಮೀನುಗಳನ್ನೂ ಕಳೆದುಕೊಳ್ಳುವ ಸನ್ನಿವೇಶ ಬಂದಿದೆ. ಹೀಗಿದ್ದರೂ ಎಲ್ಲೆಲ್ಲ ನಾಲ ಪಡೆದಿರುವ ಜನರು ಕಾಂಟ್ರಿಬ್ಯೂಷ್ಟ್ ವಾಟರ್ ರೇಟ್ ಕೊಡಬೇಕಾಗಿದೆಯೋ ಅದನ್ನುನೋಡಿ ಪರಿಶೀಲನೆಗೆ ತೆಗೆದುಕೊಂಡು ಅವರ ಜಮೀನುಗಳಿಗೆ ನೀರನ್ನುಕೊಟ್ಟು ತರೀ ಸಾಗುವಳಿ ಮಾಡುವುದಕ್ಕೆ ಅವಕಾಶ ಕಲ್ಪಿಸದೆ ಇರುವುದು ಅತ್ಯಂತ ಶೋಚನೀಯವಾದ ವಿಷಯ. ಮಳವಳ್ಳಿತಾಲ್ಲೂಕಿನ ಇನ್ನೂ ಅನೇಕ ಕಡೆ ಈ ನಾಲೆ ಹೋಗಬಹುದೆಂದು ಸರ್ವೆ ಮಾಡಿ ಕಲ್ಲುಗಳನ್ನು ಹಾಕಿ ಅನೇಕ ವರ್ಷಗಳಾಗಿವೆ. ಅವೆಲ್ಲವೂ ಫಲವತ್ತಾದ ಜಮೀನುಗಳು ಇದರ ಸಾಧಕ ಬಾಧಕಗಳನ್ನು ನಾನು ಉತ್ತರ ಕೊಡುವಾಗ ಹೇಳುತ್ತೇನೆ. ಸಾಧಕವಿಲ್ಲದೆ ಸುಮ್ಮನೆ ನೆಪ ಮಾತ್ರಕ್ಕೆ ಮಾಡಿ ಎಂದು ಕೇಳುತ್ತಿಲ್ಲ. ಅಲ್ಲಿ ನೀರನ್ನು ಉಪಯೋಗಿಸಿ ತರೀ ಸಾಗುಮಾಡುವುದಕ್ಕೆ ಅವಕಾಶವಿದೆ. ಸರ್ಕಾರದವರು ಹಣ ಒದಗಿಸಲು ಮನಸ್ಸು ಮಾಡಿದರೆ ಕಷ್ಟವಾಗಲಾರದು. ಮಳವಳ್ಳಿಯಲ್ಲಿ ಇನ್ನಾವ ಕೈಗಾರಿಕೆಯೂ ಇಲ್ಲದೇ ಇರುವುದರಿಂದ ವ್ಯವಸಾಯದಿಂದ ಜೀವನ ಮಾಡುವ ಜನರೇ ಇರುವುದರಿಂದ, ಮಳೆಯ ಜೊತೆಗೆ ಜೂಜಾಡುತ್ತಾ ಕಷ್ಟಜೀವನ ಸಾಗಿಸುತ್ತಿರುವುದರಿಂದ, ಈ ನಾಲೆ ಸೌಲಭ್ಯವನ್ನಾದರೂ ಒದಗಿಸಿಕೊಟ್ಟು ಅಲ್ಲಿಯ ಜನರ ಜೀವನವನ್ನು ಉತ್ತಮಪಡಿಸಬೇಕೆಂದು ಹೇಳಿ ಈ ನಿರ್ಣಯಕ್ಕೆ ಈ ಸಭೆಯ ಸಹಾನುಭೂತಿಯನ್ನು ಕೋರುತ್ತೇನೆ.

Mr. SPEAKER.—Resolution moved.—

"That this Assembly is of the opinion that suitable action should be taken so that the area surveyed to be irrigated under Visvesvaraya Canal in Malavalli Taluk is irrigated within two years in order to improve the lot of the raiyats"

ಶ್ರೀ ಎಂ. ಚಿಕ್ಕಲಿಂಗಯ್ಯನವರು (ಮಳವಳ್ಳಿ ಅನುಸೂಚಿತ ಜಾತಿಗಳು).—ಸ್ವಾಮಿ, ಈ ನಿರ್ಣಯವನ್ನು ಸಮರ್ಥಿಸುತ್ತಾ ಒಂದೆರಡು ವಿಷಯಗಳನ್ನು ಹೇಳುತ್ತೇನೆ. ಇದನ್ನು ಮಂಡಿಸಿದವರು ಸೂಕ್ಷ್ಮವಾಗಿ ಕೆಲವು ವಿಷಯಗಳನ್ನು ಸಭೆಯ ಗಮನಕ್ಕೆ ತಂದಿದ್ದಾರೆ. ಸುಮಾರು ಒಂದು ಲಕ್ಷದ ಮೂವತ್ತುಸಾವಿರ ಜನ ಈ ಪ್ರದೇಶದವರು ವ್ಯವಸಾಯದಿಂದ ಜೀವನ ಮಾಡುತ್ತಿರುವುದು ತಮ್ಮ ಗಮನಕ್ಕೆ ಬಂದಿದೆ. ವಿಶ್ವೇಶ್ವರಯ್ಯನವರೆ ಪ್ರಾರಂಭಪಾದಾಗ ಮಳವಳ್ಳಿ ಮತ್ತು ಮಂಡ್ಯ ಪ್ರದೇಶಗಳಿಗೆ ವ್ಯವಸಾಯಕ್ಕೆ ನೀರು ಕೊಡಬೇಕೆಂಬ ಅಭಿಪ್ರಾಯವಿತ್ತು. ಆದರೆ ಯಾವ ಕಾರಣದಿಂದಲೋ ಇದು ತಪ್ಪಿ ಬೇರೆಕಡೆ ಈ ನಾಲೆ ತಿರುಗಿನಲ್ಲಿಟ್ಟು ನಮ್ಮ ದುರ್ದೈವದಿಂದ ನಮ್ಮ ತಾಲ್ಲೂಕಿಗೆ ಬಾರದೆ, ಈ ಸೌಲಭ್ಯವಿಲ್ಲದೆ. ಜನರು ಕಷ್ಟಪಡಬೇಕಾಗಿದೆ. ಸರ್ಕಾರದವರು ನಿರ್ದಿಷ್ಟವಾಗಿ ಇಷ್ಟೇ ಎಕರೆಗೆ ನೀರುಕೊಡುತ್ತೇನೆ, ಇಷ್ಟೇ ಎಕರೆಗೆ ಕೊಡುವುದಕ್ಕಾಗುವುದಿಲ್ಲ. ಎಂದು ಸರಿಯಾಗಿ ಸರ್ವೆಮಾಡಿಸಿ ತೀರಿಸಿಬಿಟ್ಟರೆ ತರೀ ಜಮೀನನ್ನು ಬಿಟ್ಟು ಖುಷ್ಕಿ ವ್ಯವಸಾಯವನ್ನಾದರೂ ಮಾಡುವುದಕ್ಕೆ ಅವಕಾಶವಾಗುತ್ತದೆ. 20—25 ವರ್ಷಗಳ ಹಿಂದೆ ಸರ್ವೆ ಆಗಿ ಅಲ್ಲಿಗೆ ನೀರು ಬರುತ್ತದೆಯೋ ಏನೋ ಎಂದು ಜನ ಕಾಯುತ್ತಿರುವುದು ವಿಷಾದಕರವಾಗಿದೆ. ನನಗೆ ತಿಳಿದ ಮಟ್ಟಿಗೆ ನಾನು ವಿದ್ಯಾರ್ಥಿಯಾಗಿದ್ದಾಗ ಸುಮಾರು 20—25 ವರ್ಷಗಳಹಿಂದೆ ಅಲ್ಲಿ ಸರ್ವೆ ಆಗಿ ಕಲ್ಲುಗಳನ್ನು ಹಾಕಿರುವುದನ್ನು ನೋಡಿದ್ದೇನೆ. ನೀರು ಸಿಕ್ಕುತ್ತದೆಂದು ಹೇಳಿ ತರಿಯಾಗಿರತಕ್ಕ ಕಡೆ ಕೂಡ ನೀರು ಬಾರದೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರಬಹುದು. ಸರ್ಕಾರದವರನ್ನು ನಾವು ಬೇಡುವುದೇನೆಂದರೆ, ಒಂದು ನಿರ್ದಿಷ್ಟವಾದ ನೀತಿಯನ್ನು ಗೊತ್ತುಮಾಡಿ ಇಷ್ಟು

(ಶ್ರೀ ಎಂ. ಚಿಕ್ಕಲಿಂಗಯ್ಯನವರು.)

ಎಕರೆಗಳಿಗೆ ನೀರು ಕೊಡುತ್ತೇವೆ, ಇಂಥಾಕತೆ ಮಾತ್ರ ಕೊಡುತ್ತೇವೆಂದು ಗೊತ್ತುಮಾಡಿ, ಎಲ್ಲಿಯವರೆಗೆ ಸರ್ವೆ ಮಾಡಿದ್ದಾರೋ ಅಲ್ಲಿಗೆ ನೀರಾವರಿ ಸೌಲಭ್ಯವನ್ನು ಕೊಡುತ್ತೇವೆಂದು ಜನರಿಗೆ ಪೂರ್ಣಭರವಸೆಕೊಟ್ಟು ಉಪಕಾರ ಮಾಡುತ್ತಾರೆಂದು ಹೇಳಿ ನಿರ್ಣಯವನ್ನು ಸಮರ್ಥಿಸುತ್ತೇನೆ.

*ಶ್ರೀ ಕಡಿದಾಳ್ ಮಂಜಪ್ಪನವರು (ರೆವಿನ್ಯೂ ಮತ್ತು ಪಬ್ಲಿಕ್ ವರ್ಕ್ಸ್ ಮಂತ್ರಿಗಳು).—ಅಧ್ಯಕ್ಷರೇ, ಮೊದಲು ವಿಶ್ವೇಶ್ವರಯ್ಯ ನಾಲೆಯಿಂದ ಒಂದು ಲಕ್ಷದ ಇಪ್ಪತ್ತೈದು ಸಾವಿರ ಎಕರೆ ಜಮೀನನ್ನು ಸಾಗುವಳಿಗೆ ತರಬಹುದೆಂಬ ನಿರೀಕ್ಷೆ ಇತ್ತು. ಆದರೆ ಬ್ಲಾಕ್ ಸಿಸ್ಟಂ ಯಶಸ್ವಿಯಾಗಿ ನಡೆಯದೇ ಇರುವುದರಿಂದ 90 ಸಾವಿರ ಎಕರೆ ಮಾತ್ರ ತರೀ ಸಾಗುವಳಿಗೆ ಬಂದಿದೆ. ಮಳವಳ್ಳಿ ತಾಲ್ಲೂಕಿನಲ್ಲಿ ಮೂರು ಬ್ರಾಂಚ್ ನಾಲೆಗಳಿಂದ ನೀರು ಹಾಯಿಸುತ್ತಿದೆ. ಇವು ಲೋಕಸಾರ, ಹೆಬ್ಬಕವಾಡಿ, ಮತ್ತು ತುರಗನೂರ ಬ್ರಾಂಚ್ ನಾಲೆಗಳು. ಇವುಗಳಲ್ಲಿ ಲೋಕಸಾರ ನಾಲೆಯಿಂದ ಎಲ್ಲಾಕಡೆಗೂ ನೀರು ಹಾದು ಸಂಪೂರ್ಣವಾಗಿ ಸಾಗುವಳಿಯಾಗುತ್ತಿದೆ. ಆದರೆ ಇನ್ನೆರಡು ಉಪನಾಲೆಗಳ ಅಚ್ಚುಕಟ್ಟಿಗೆ ಸಂಪೂರ್ಣವಾಗಿ ನೀರು ಹಾಯಿಸಲು ಸಾಧ್ಯವಿಲ್ಲ. ಇದರಲ್ಲಿ ಸರ್ಕಾರದ ಅಲಕ್ಷ್ಯವೂ ಇಲ್ಲ. ಅಥವಾ ಹಣ ಖರ್ಚುಮಾಡಲು ಸಾಧ್ಯವಿಲ್ಲವೆಂತಲೂ ಅಲ್ಲ. ಕೃಷ್ಣರಾಜಸಾಗರದಿಂದ ಬರತಕ್ಕ ನೀರು ಮೇಲಿನ ನಾಲೆ ಪ್ರದೇಶದ ಮೂಲಕ ಹಾದು ಕೆಳಗೆ ತುಟ್ಟತುದಿಯಲ್ಲಿರತಕ್ಕ ಜಮೀನುಗಳಿಗೆ ಬರುವುದಕ್ಕೆ ನೀರು ಸಾಲದೆ ಈ ನಾಲೆಗಳಿಂದ ರೈತರು ಸಂಪೂರ್ಣ ಸಹಾಯ ಪಡೆಯಲು ಸಾಧ್ಯವಾಗುತ್ತಿಲ್ಲ. ಪ್ರಕೃತ ಪರಿಸ್ಥಿತಿಯಲ್ಲಿ ಬಹುಶಃ ಈ ಫಲ ಕೆಳಗಿರತಕ್ಕ ಅಚ್ಚುಕಟ್ಟಿಗೆ ಲಭಿಸಲಾರದೆಂದು ನಾನು ತಮಗೆ ವ್ಯಸನದಿಂದ ತಿಳಿಸಬೇಕಾಗಿದೆ. ಒಂದು ವೇಳೆ ಕಪಿನಿ ಯೋಜನೆಯನ್ನು ಕೈಕೊಂಡು ಅಲ್ಲಿ ನೀರನ್ನು ಶೇಖರಿಸಿದರೆ, ಅನಂತರ ಮಳವಳ್ಳಿ ರೈತರಿಗೆ ಸಹಾಯವಾಗಬಹುದೆಂದು ಭಾವಿಸುತ್ತೇನೆ. ಆದುದರಿಂದ ಈ ನಿರ್ಣಯವನ್ನು ಒಪ್ಪುವುದಕ್ಕಾಗುವುದಿಲ್ಲ. ಇಷ್ಟು ವಿವರಣೆಯನ್ನು ಕೇಳಿದ ಮೇಲೆ ಸೂಚಕರು ಇದನ್ನು ವಾಪಸ್ಸು ತೆಗೆದುಕೊಳ್ಳುತ್ತಾರೆಂದು ನಂಬಿದ್ದೇನೆ.

ಶ್ರೀ ಬಿ. ಪಿ. ನಾಗರಾಜ ಮೂರ್ತಿಯವರು.—ಈ ಸಂದರ್ಭದಲ್ಲಿ ನಾನು ಒಂದೆರಡು ಮಾತುಗಳನ್ನು ಹೇಳಬೇಕಾಗಿದೆ. ಮಾನ್ಯ ಸಚಿವರು ಕೂಟ್ಟ ಉತ್ತರವನ್ನು ಕೇಳಿದ್ದೇನೆ. ಕೃಷ್ಣರಾಜಸಾಗರದಿಂದ ಬಂದ ನೀರು ಮಳವಳ್ಳಿಯನ್ನು ತಲಪುವುದಿಲ್ಲವೆಂಬುದು ಅನೇಕವರ್ಷಗಳ ಅನುಭವದಿಂದ ತಿಳಿದಿದೆ. ಕಪಿನಿ ಅಣೆಕಟ್ಟು ಆಗುವ ಆಸೆ ಇದೆ. ಇದು ಕೇವಲ ಕನಸಾಗದೆ ಇದನ್ನು ಬೇಗ ಕೈಕೊಂಡು ಪೂರೈಸಿ ಮಳವಳ್ಳಿ ತಾಲ್ಲೂಕಿನ ಜನರಿಗೆ ಅನುಕೂಲವಾಗುತ್ತದೆಂಬ ಆಶ್ವಾಸನೆಯನ್ನು ಮಾನ್ಯ ಸಚಿವರು ಕೊಟ್ಟರುವುದರಿಂದ, ಕಪಿನಿ ಅಣೆಯಿಂದ ವಿದ್ಯುಚ್ಛಕ್ತಿ ಉತ್ಪತ್ತಿಮಾಡುವುದರ ಜೊತೆಗೆ ವ್ಯವಸಾಯಕ್ಕೂ ನೀರು ಒದಗಿಸಿ ಮಳವಳ್ಳಿ ತಾಲ್ಲೂಕಿನ ಪ್ರಜೆಗಳಿಗೆ ಸಹಾಯ ಮಾಡಬೇಕೆಂದು ಹೇಳಿ ನನ್ನ ನಿರ್ಣಯವನ್ನು ವಾಪಸ್ಸು ತೆಗೆದುಕೊಳ್ಳಲು ಅನುಮತಿ ಬೇಡುತ್ತೇನೆ.

The resolution was, by leave, withdrawn.

Mr. SPEAKER.—The House now stands adjourned till Twelve noon tomorrow.

The Assembly adjourned at Five of the Clock to meet again at Twelve of the Clock on Wednesday the 25th June 1952.

WD 2802—GPB—500—31-7-52